ಬಹುಧರ್ಮೀಯ ರಾಷ್ಟ್ರದಲ್ಲಿ ಮುಸ್ಲಿಮರು

✍ ಮೌಲಾನ ಸಯ್ಯದ್ ಜಲಾಲುದ್ದೀನ್ ಉಮರಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

'ಬಹುಧರ್ಮೀಯ ರಾಷ್ಟ್ರದಲ್ಲಿ ಮುಸ್ಲಿಮರು' ಎಂಬ ಈ ಕೃತಿಯಲ್ಲಿ ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ದೇಶದಲ್ಲಿ ಅವರು ಹೇಗೆ ಜೀವಿಸಬೇಕು, ಅವರ ಕರ್ತವ್ಯಗಳೇನು, ಬಹುಸಂಖ್ಯಾತ ಸಮುದಾಯದವರೊಂದಿಗೆ ಅವರು ಅನುಸರಿಸಬೇಕಾದ ನೀತಿ–ನಿಯಮಗಳೇನು ಎಂಬಿತ್ಯಾದಿ ವಿಷಯಗಳನ್ನು ಉಪ ಭೂಖಂಡದ ಖ್ಯಾತ ವಿದ್ವಾಂಸರಾದ ಮೌಲಾನಾ ಸೈಯದ್ ಜಲಾಲುದ್ದೀನ್ ಉಮರಿಯವರು ವಿಸ್ತೃತ ಚರ್ಚಿಸಿದ್ದಾರೆ. ಅನೇಕ ಉಪ ಶೀರ್ಷಿಕೆಯಲ್ಲಿ ಅವರು ವಿಷಯವನ್ನು ಸುಲಭದಲ್ಲಿ ಓದುಗರಿಗೆ ಮನದಟ್ಟು ಮಾಡಲು ಪ್ರಯತ್ನಿಸಿದ್ದಾರೆ.

ಮುಸ್ಲಿಮರು ಎಲ್ಲೇ ಇದ್ದರೂ ಎಂತಹ ಕಠಿಣ ಪರಿಸ್ಥಿತಿಯಲ್ಲೂ ಧರ್ಮದ ಆದೇಶಗಳಂತೆ ಜೀವಿಸಲು ಬದ್ಧರಾಗಿದ್ದಾರೆ. ಭಾರತವು ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ದೇಶ. ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದ್ದು, ಈ ದೇಶದ ಪ್ರಗತಿಯಲ್ಲಿ ಎಲ್ಲರೂ ಸಮಾನ ಭಾಗಿಯಾಗಿದ್ದಾರೆ. ಇಲ್ಲಿನ ಜನತೆಗೆ ಹಿತಕರವಾಗಿರುವ ಯಾವುದೇ ತತ್ವಸಿದ್ಧಾಂತವನ್ನು ಪ್ರತಿಪಾದಿಸುವ, ಅಳವಡಿಸುವ ಮತ್ತು ಪ್ರಚಾರ ಮಾಡುವ ಪೂರ್ಣ ಅವಕಾಶ ಮತ್ತು ಸ್ವಾತಂತ್ರ್ಯ ಎಲ್ಲರಿಗೂ ಇದೆ. ಮುಸ್ಲಿಮರು ಕೂಡಾ ತಾವು ಪ್ರತಿಪಾದಿಸುವ ಸಕಲ ಮಾನವರಿಗೆ ಹಿತಕಾರಿಯಾದ ಮತ್ತು ಜೀವನದ ಎಲ್ಲ ರಂಗಗಳಿಗೂ ಸರಿಯಾದ ಮಾರ್ಗದರ್ಶನ ನೀಡುವ ಒಂದು ತತ್ವಸಿದ್ಧಾಂತ (ಇಸ್ಲಾಮ್)ದ ವಾಹಕರೆಂಬ ನೆಲೆಯಲ್ಲಿ ಅದನ್ನು ಈ ದೇಶದ ಜನರಿಗೆ ಪರಿಚಯ ಪಡಿಸಲು ಬಾಧ್ಯಸ್ತರಾಗಿದ್ದಾರೆ.

ಮುಸ್ಲಿಮರು ಈ ದೇಶದ ನೈಜ ಹಿತಾಕಾಂಕ್ಷಿಗಳಾಗಿದ್ದಾರೆ. ದೇಶದ ಪ್ರಗತಿಗಾಗಿ, ಏಳಿಗೆಗಾಗಿ ಸರ್ವ ರಂಗಗಳಲ್ಲೂ ಅವರು ತಮ್ಮ ಪಾತ್ರವನ್ನು ವಹಿಸಿದ್ದಾರೆಂಬುದಕ್ಕೆ ಭಾರತೀಯ ಇತಿಹಾಸ ಸಾಕ್ಷಿಯಾಗಿದೆ. ಆದರೂ ಅವರನ್ನು ತರತರದ ಸಮಸ್ಯೆಗಳಲ್ಲಿ ಸಿಲುಕಿಸಿ, ಅವರ ಮೇಲೆ ವಿವಿಧ ಆರೋಪಗಳನ್ನು ಹೊರಿಸಿ ಅವರ ಗಮನವನ್ನು ನೈಜ ಉದ್ದೇಶದಿಂದ ಸರಿಸುವ ಯೋಜಿತ ಪ್ರಯತ್ನಗಳು, ಷಡ್ಯಂತ್ರಗಳು ಇಲ್ಲಿ ನಡೆಯುತ್ತಿರುತ್ತದೆ. ಈ ನಿಟ್ಟಿನಲ್ಲಿ ಈ ಕೃತಿಯು ಭಾರತೀಯ ಮುಸ್ಲಿಮರಿಗೆ ಸಾಂತ್ವನವೂ ಅತ್ಯುತ್ತಮ ಮಾರ್ಗದರ್ಶನವೂ ಆಗಿದೆ. ಇದರ ಅಧ್ಯಯನವು ಮುಸ್ಲಿಮರಿಗೆಂಬಂತೆ ದೇಶಬಾಂಧವರಿಗೂ ಪ್ರಯೋಜನಕಾರಿಯಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಮುನ್ನುಡಿ

ಯಾವುದೇ ತತ್ವಸಿದ್ಧಾಂತದ ಕುರಿತು ಆರೋಗ್ಯಕರ ಮಾತುಕತೆ-ಚರ್ಚೆ ನಡೆಸುವುದು ತಪ್ಪಲ್ಲ, ಅದು ವಿವಿಧ ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ. ಆದರೆ ಅನಗತ್ಯ ಟೀಕೆ-ವಿಮರ್ಶೆ ಹಾಗೂ ಏಕಮುಖ ದಾಳಿಯನ್ನು ಸರಿಯೆನ್ನುವಂತಿಲ್ಲ, ಅದು ತಿಳಿಗೇಡಿ ವರ್ತನೆಯಾಗಿದೆ. ಅದರಿಂದ ವಿಷಯವನ್ನು ತಿಳಿಯಲು ಸಹಾಯಕವಾಗುವ ಬದಲು ಜಟಿಲವಾಗುವುದು, ಪರ-ವಿರೋಧ ವ್ಯಕ್ತಿಗಳ ಮಧ್ಯೆ ಮಾನಸಿಕ ಅಂತರವುಂಟಾಗುವುದು. ಸಮಯ ಕಳೆದಂತೆ ಅದು ಹೆಚ್ಚಾಗುತ್ತಾ ಹೋಗುವುದು. ಅದು ಇಡೀ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಇಸ್ಲಾಮಿನ ಕುರಿತು ವಿರೋಧಿಗಳು ಸಾಮಾನ್ಯವಾಗಿ ಚರ್ಚೆಯ ಇದೇ ವಿಧಾನವನ್ನು ಅನುಸರಿಸುತ್ತಿರುವುದು ವಿಷಾದನೀಯ. ಅದರ ಶಿಕ್ಷಣಗಳನ್ನು ಮನಬಂದಂತೆ ವ್ಯಾಖ್ಯಾನಿಸಲಾಗುತ್ತದೆ. ಅದಕ್ಕೆ ಅನ್ವಯವಾಗದಂತಹ ಆಕ್ಷೇಪಗಳನ್ನು ಎತ್ತಲಾಗುತ್ತದೆ. ಉದ್ದೇಶಪೂರ್ವಕವಾಗಿ ತಪ್ಪುಕಲ್ಪನೆಗಳನ್ನು ಸೃಷ್ಟಿಸಿ ಪ್ರಚಾರ ಮಾಡಲಾಗುತ್ತದೆ. ಅದನ್ನು ಸರಿಯಾದ ರೂಪದಲ್ಲಿ ನೋಡುವ ಪ್ರಯತ್ನ ಮಾಡುವುದಿಲ್ಲ, ಇದು ಹೊಸತೋ ಅಪರೂಪವೋ ಅಲ್ಲ, ಅದಕ್ಕೆ ದೀರ್ಘ ಇತಿಹಾಸವಿದೆ. ಇಂದು ಅದನ್ನು ವಿವಿಧ ಕಾರಣಗಳಿಂದಾಗಿ ಶಕ್ತಿಯುತವಾಗಿ ಪುನರಾವರ್ತಿಸಲಾಗುತ್ತದೆ.

ಇಸ್ಲಾಮ್ ಕ್ರೂರ ಮತ್ತು ಬರ್ಬರ ಧರ್ಮ, ಅದರ ವಿಚಾರಗಳು ಬುದ್ಧಿಹೀನ, ಅಪ್ರಾಕೃತಿಕ, ಅವಾಸ್ತವ ಮತ್ತು ಆಧುನಿಕ ಕಾಲಕ್ಕೆ ಸ್ವೀಕಾರಾರ್ಹವಲ್ಲ, ಅದರ ನೈತಿಕ ರಂಗ ಮತ್ತು ಕಾನೂನುಗಳು ನ್ಯಾಯ ನೀತಿಯ ಬೇಡಿಕೆಯನ್ನು ಈಡೇರಿಸುವುದಿಲ್ಲ, ಅದು ಮಾನವರು ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳೆಂದು ವಿಂಗಡಿಸುತ್ತದೆ, ಉಭಯತ್ರಯರಿಗೂ ಪ್ರತ್ಯೇಕ ಹಕ್ಕುಗಳನ್ನು ನಿರ್ಣಯಿಸುತ್ತದೆ, ಆದರಲ್ಲಿ ಸಮಾನತೆಯೆಂಬುದಿಲ್ಲ ಎಂಬ ರೀತಿಯಲ್ಲಿ ಅದನ್ನು ವರ್ಣಿಸಲಾಗುತ್ತದೆ. ಈ ಭೀಕರ ಸನ್ನಿವೇಶ ಮತ್ತು ನಿರಾಶಾದಾಯಕ ವಾತಾವರಣದಲ್ಲಿ ಇಸ್ಲಾಮಿನ ಮೇಲೆ ವಿಶ್ವಾಸ-ಶ್ರದ್ಧೆಯಿರುವ ಮತ್ತು ಅದು ಲೋಕಕ್ಕೆ ಅನುಗ್ರಹದಾಯಕ ಮತ್ತು ಅತ್ಯುತ್ತಮ ಜೀವನ ವ್ಯವಸ್ಥೆಯೆಂದು ಬಲವಾಗಿ ನಂಬಿರುವ ವ್ಯಕ್ತಿಗಳನ್ನೂ ಸಂಘಟನೆಗಳನ್ನೂ ವೈಚಾರಿಕ ದಿವಾಳಿಕೋರರೆಂದು ಸಾರುವುದು ಅದ್ಭುತವೇನಲ್ಲ, ಅವರು ತಮ್ಮ ಮೂಲಭೂತ ವಿಶ್ವಾಸ ಮತ್ತು ನಂಬಿಕೆಯ ಪ್ರಕಾರ, ಇಸ್ಲಾಮಿನ ಉತ್ತುಂಗತೆಯನ್ನು ಬಯಸುವವರಾಗಿದ್ದಾರೆ. ಅದಕ್ಕಾಗಿ ಸಂವಿಧಾನ ಬದ್ಧ ರೀತಿಯಲ್ಲಿ ಪ್ರಯತ್ನಿಸುತ್ತಾ ಇದ್ದಾರೆ. ಆದರೂ ಅವರನ್ನು ಕ್ರೂರಿಗಳು ಮತ್ತು ಬರ್ಬರತೆಯ ವಕ್ತಾರರು ಎಂದು ಭಾವಿಸಲಾಗುತ್ತದೆ. ಇದು ಯಾವುದೇ ನಿರ್ದಿಷ್ಟ ಘಟನೆಯಿಂದಾಗಿ ಹುಟ್ಟಿಕೊಂಡ ತಾತ್ಕಾಲಿಕ ಭಾವನೆಯಲ್ಲ, ಅದೊಂದು ಯೋಜಿತ ಸಂಚಾಗಿದೆ.

ಇದು ಯಾವುದೇ ಒಂದು ಪಂಗಡದ ಸಮಸ್ಯೆಯಲ್ಲ; ಇಡೀ ಸಮುದಾಯದ ಸಮಸ್ಯೆಯಾಗಿದೆ. ಅದರ ನಾಲ್ಕೂ ಸುತ್ತ ತಪ್ಪು ಕಲ್ಪನೆ ಮತ್ತು ಅನುಮಾನಗಳು ಆವರಿಸಿಕೊಂಡಿವೆ. ಇಸ್ಲಾಮಿನಿಂದ ಒಳಿತು ಮತ್ತು ಉನ್ನತ ಸದಾಚಾರವನ್ನು ನಿರೀಕ್ಷಿಸುವಂತಿಲ್ಲ, ಅದರ ಪೂರ್ಣ ಪಾತ್ರವು ಶಂಕಾಸ್ಪದವಾಗಿದೆ. ಸಮಾಜಕ್ಕೆ ಒಂದು ಕಾಲದಲ್ಲಿ ಅದು ಪ್ರಯೋಜನಕಾರಿಯಾಗಿರಬಹುದು, ಆದರೆ ಇಂದಿಗೆ ಉಪಯುಕ್ತವಲ್ಲ ಎಂಬಂತೆ ಅದನ್ನು ಚಿತ್ರೀಕರಿಸಲಾಗುತ್ತದೆ.

ಇಸ್ಲಾಮ್ ಈ ವಿಚಾರವನ್ನು ಸಾರಾಸಗಟಾಗಿ ತಿರಸ್ಕರಿಸುತ್ತದೆ. ಅದಕ್ಕೆ ಆ ವಿಚಾರ ಗಳೊಂದಿಗೆ ದೂರದ ಸಂಬಂಧವೂ ಇಲ್ಲ, ಇಸ್ಲಾಮ್ ಅಲ್ಲಾಹನ ಆರಾಧನೆ, ಅನುಸರಣೆ, ಕೆಡುಕು ಮುಕ್ತತೆ, ಪಶ್ಚಾತ್ತಾಪ, ಶಾಂತಿ, ಒಳಿತುಗಳ ಹಾಗೂ ಮಾನವನನ್ನು ಮಾನವನೆಂದು ಬಗೆಯುವ, ಅವನೊಂದಿಗೆ ಉತ್ತಮ ಸಂಬಂಧವಿರಿಸುವ, ಅನ್ಯಾಯವನ್ನು ಅಳಿಸಿ ಒಳಿತನ್ನು ಸ್ಥಾಪಿಸುವ, ಮಾನವರ ನಡುವಿನ ತಥಾಕಥಿತ ಅಂತರವನ್ನು ಅಳಿಸುವ, ಅವರೊಂದಿಗೆ ಸಮಾನತೆ ಪಾಲಿಸುವ ಮತ್ತು ಅವರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಧರ್ಮವಾಗಿದೆ, ಅದರ ಶಿಕ್ಷಣಗಳನ್ನು ನೇರವಾಗಿ ಅಧ್ಯಯನ ನಡೆಸುವ ಯಾರೂ ಅದರ ನಿಜ ರೂಪವನ್ನು ದರ್ಶಿಸಬಹುದು. ಎಷ್ಟೇ ಪ್ರಯತ್ನ ಪಟ್ಟರೂ ಎಂತಹ ಉಪಾಯಗಳನ್ನು ಕೈಗೊಂಡರೂ ಅದನ್ನು ಮುಚ್ಚಿ ಹಾಕುವುದು ಸುಲಭವಲ್ಲ, ಅದನ್ನೇ ಈ ಕೃತಿಯಲ್ಲಿ ಸ್ಪಷ್ಟ ಪಡಿಸಲಾಗಿದೆ. ಅಲ್ಲಾಹನು ಇದನ್ನು ಸ್ವೀಕರಿಸಲಿ ಮತ್ತು ಇದರ ಉದ್ದೇಶವನ್ನು ಸಫಲಗೊಳಿಸಲಿ.

ಮಾರ್ಚ್ 2, 2003. ಮೌಲಾನಾ ಸೈಯದ್ ಜಲಾಲುದ್ದೀನ್ ಉಮರಿ.

ಅನುಕ್ರಮಣಿಕೆ

ತಪ್ಪು ಚಿತ್ರಣ

ವಿವಿಧ ಕೋನಗಳಿಂದ ಇಸ್ಲಾಮಿನ ಅಧ್ಯಯನ ನಡೆಸಬಹುದು. ಇಲ್ಲಿ ಒಂದು ವಿಶಿಷ್ಟ ಕೋನದಿಂದ ಅದರ ಅಧ್ಯಯನ ನಡೆಸಲಾಗುತ್ತದೆ. ಅದು ''ಬಹುಧರ್ಮೀಯ ರಾಷ್ಟ್ರ ಮತ್ತು ಸಮಾಜ'' ದ ಬಗ್ಗೆ ಇಸ್ಲಾಮ್ ವೈರ-ವಿದ್ವೇಷದ ಭಾವನೆಯನ್ನು ಪೋಷಿಸುತ್ತದೆ. ಯಾವ ರೀತಿಯಿಂದಲೂ ಅದನ್ನು ಅಂಗೀಕರಿಸುವುದಿಲ್ಲ, ಅದರೊಂದಿಗೆ ಹೋರಾಡಲು ಮತ್ತು ಅದರ ವಿರುದ್ಧ ದಂಗೆಯೇಳಲು ಅದು ತನ್ನ ಅನುಯಾಯಿಗಳನ್ನು ಪ್ರೋತ್ಸಾಹಿಸುತ್ತದೆ. ಆದ್ದರಿಂದ ಮುಸ್ಲಿಮರು ಬಹುಧರ್ಮೀಯ ರಾಷ್ಟ್ರದ ನಿಷ್ಠ ಪ್ರಜೆಗಳಾಗಲಾರರು. ಅವರನ್ನು ನಂಬುವುದು ಕಷ್ಟ, ಅವರು ವೈರಿಗಳೊಂದಿಗೆ ಮೈತ್ರಿಯನ್ನೂ ಮಾಡಿಕೊಳ್ಳಬಲ್ಲರು. ಅವರ ದೇಶನಿಷ್ಠೆ ಯಾವಾಗಲೂ ಸಂದೇಹಾಸ್ಪದವಾಗಿರುತ್ತದೆ. ಮುಸ್ಲಿಮಲ್ಲದವರೊಡನೆ ಅವರು ಬಾಳಲಾರರು. ಅವರ ವರ್ತನೆಯು ಆಕ್ರಮಣಕಾರಿಯಾಗಿರುವುದು. ಅವರ ಸಂಬಂಧ ಉತ್ತಮವಾಗಿರಲಾರದು. ಅವರಿಂದ ಮುಸ್ಲಿಮೇತರರು ಪ್ರೀತಿ, ವಿಶ್ವಾಸ ಮತ್ತು ಉತ್ತಮ ವರ್ತನೆಯನ್ನು ಅವರಿಂದ ನಿರೀಕ್ಷಿಸುವಂತಿಲ್ಲ, ಅವರ ಪ್ರಾಣ, ಸೊತ್ತು ಮತ್ತು ಮಾನ-ಮರ್ಯಾದೆಗಳಿಗೆ ಅವರಿಂದ ಸದಾ ಅಪಾಯವಿದೆಯೆಂದು ಮುಸ್ಲಿಮರ ಬಗ್ಗೆ ಬಿಂಬಿಸಲು ಪ್ರಯತ್ನಿಸಲಾಗುತ್ತದೆ.

ಈ ಆರೋಪಗಳ ಕುರಿತು ಲೋಕದಲ್ಲೆಡೆ ಚರ್ಚೆ ನಡೆಯುತ್ತದೆ. ಆದರೆ ಅದಕ್ಕೆ ಯಾವುದೇ ಆಧಾರ ಈ ವರೆಗೂ ಒದಗಿಸಲಾಗಿಲ್ಲ, ಶತಮಾನಗಳ ಮುಸ್ಲಿಮರ ದೀರ್ಘ ಇತಿಹಾಸದಲ್ಲಿ ಯಾವುದೇ ಮುಸ್ಲಿಮೇತರ ರಾಷ್ಟ್ರದಲ್ಲಿ ಅವರ ಈ ಭಯಾನಕ ಪಾತ್ರ ಮುಂದೆ ಬಂದಿಲ್ಲ, ಆದರೆ ಅವರೊಂದಿಗೆ ಪಕ್ಷಪಾತ, ಅಕ್ರಮ-ಅತ್ಯಾಚಾರದ ರಕ್ತರಂಜಿತ ಕಥೆಗಳನ್ನು ಇತಿಹಾಸ ಬರೆಯುತ್ತಾ ಬಂದಿದೆ. ವಾಸ್ತವದಲ್ಲಿ ಇಸ್ಲಾಮ್ ಮತ್ತು ಮುಸ್ಲಿಮರ ವಿರುದ್ಧ ಒಂದು ವಿಶೇಷ ಮಿದುಳು ಕೆಲಸ ಮಾಡುತ್ತಿದೆ. ಅದು ಕೆಲವೊಮ್ಮೆ ರಹಸ್ಯವಾಗಿ, ಇನ್ನು ಕೆಲವೊಮ್ಮೆ ಬಹಿರಂಗವಾಗಿ ಮುಂದೆ ಬರುತ್ತಾ ಇದೆ. ಇವರಲ್ಲಿ ಇಸ್ಲಾಮಿನ ವಿರುದ್ಧ ತಮ್ಮ ವಿಕಾರಗಳನ್ನು ಪ್ರಕಟ ಪಡಿಸಲು ಸಂಕೋಚ ಪಡುವವರೂ ಇದ್ದಾರೆ. ಆದರೆ ಅವರು ಕೂಡಾ ಮುಸ್ಲಿಮರನ್ನು ಖಂಡಿತ ಅಪಾಯಕಾರಿಗಳೆಂದು ಬಗೆಯುತ್ತಾರೆ.

ಯಾವುದೇ ಬಹುಧರ್ಮೀಯ ದೇಶ ಅಥವಾ ಸಮಾಜದಲ್ಲಿ ಬದುಕುತ್ತಿರುವ ಮುಸ್ಲಿಮರಿಗೆ ಇಸ್ಲಾಮ್ ಯಾವ ಆದೇಶ-ನಿರ್ದೇಶನಗಳನ್ನು ಮತ್ತು ಶಿಕ್ಷಣ-ತರಬೇತಿಯನ್ನು ನೀಡುತ್ತದೆ, ಇಸ್ಲಾಮಿನ ಜ್ಞಾನ ಹೊಂದಿದ ವ್ಯಕ್ತಿ ಅಥವಾ ಸಮೂಹದ ಪಾತ್ರ ಅಂತಹ ರಾಷ್ಟ್ರದಲ್ಲಿ ಏನಾಗಿರುವುದು, ಅವರು ದೇಶಕ್ಕೆ ನಿಷ್ಠನಾಗಿರುವನೋ ದ್ರೋಹಿಯೋ ಅವರು ದೇಶದ ವಾತಾವರಣವನ್ನು ಕೆಡಿಸುವರೋ ಅಥವಾ ಉತ್ತಮಪಡಿಸಲು ಪ್ರಯತ್ನಿಸುವರೋ

ಅವರ ಶಕ್ತಿ-ಸಾಮರ್ಥ್ಯಗಳು ದೇಶದ ನಿರ್ಮಾಣದಲ್ಲಿ ವ್ಯಯವಾಗುವುದೋ ಅಥವಾ ಸಂಹಾರದಲ್ಲೋ? ಇತರ ಮತ-ಧರ್ಮದವರೊಂದಿಗೆ ಅವರ ಸಂಬಂಧ ಹೇಗಿರುವುದು, ಅವರಿಂದ ಎಂತಹ ನೀತಿ-ಚಾರಿತ್ರ್ಯಗಳನ್ನು ನಿರೀಕ್ಷಿಸಬಹುದು ಎಂಬಿತ್ಯಾದಿ ವಿಷಯಗಳನ್ನು ನೋಡಬೇಕಾಗಿದೆ.

ಇಸ್ಲಾಮಿನ ಮಾರ್ಗದರ್ಶನ

ಬಹುಧರ್ಮೀಯ ಸಮಾಜ ಅಥವಾ ರಾಷ್ಟ್ರದಲ್ಲಿರುವ ಮುಸ್ಲಿಮರು ತಮ್ಮ ವಿಶ್ವಾಸ-ನಂಬಿಕೆಗಳಲ್ಲಿ ಸ್ಥಿರವಾಗಿರಬೇಕು ಮತ್ತು ಅದರಂತೆ ಜೀವಿಸಲು ಗರಿಷ್ಠ ಪ್ರಯತ್ನಿಸಬೇಕೆಂದು ಇಸ್ಲಾಮ್ ಆದೇಶಿಸಿದೆ. ಯಾವ ಸ್ಥಿತಿಯಲ್ಲೂ ತಮ್ಮ ಮೂಲಭೂತ ವಿಶ್ವಾಸವನ್ನು ಕೈಬಿಡಲಾಗದು ಮತ್ತು ಅದರಲ್ಲಿ ಯಾವ ತಿದ್ದುಪಡಿ-ಬದಲಾವಣೆಯನ್ನೂ ಮಾಡಲಾಗದು. ಇಸ್ಲಾಮಿನ ಈ ಆದೇಶವು ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವಿಶ್ವಾಸದಲ್ಲಿ ನೆಲೆ ನಿಲ್ಲುವ ಮತ್ತು ಅದರಂತೆ ಬದುಕುವ ಪೂರ್ಣ ಸ್ವಾತಂತ್ರ್ಯವಿದೆಯೆಂಬ ಆಧುನಿಕ ಸರ್ವಸಮ್ಮತ ಸಿದ್ಧಾಂತಕ್ಕೆ ಅನುಗುಣವಾಗಿಯೇ ಇದೆ. ಇಸ್ಲಾಮ್ ತನ್ನ ಅನುಯಾಯಿಗಳಿಗೆ ಈ ಹಕ್ಕನ್ನು ಉಪಯೋಗಿಸುವ ಆದೇಶ ನೀಡಿದರೆ ಅದನ್ನು ಯಾರೂ ಆಕ್ಷೇಪಿಸುವಂತಿಲ್ಲ. ಇದು ಯಾರ ಮೇಲಾದರೂ ವೈರ-ವಿದ್ವೇಷದಿಂದಲ್ಲ. ಆದ್ದರಿಂದ ಅದನ್ನು ಭಯಪಡುವ ಅಗತ್ಯವೂ ಇಲ್ಲ.

ಬಹುಧರ್ಮೀಯ ರಾಷ್ಟ್ರದ ಮುಸ್ಲಿಮ್ ಪ್ರಜೆಯು ಆ ರಾಷ್ಟ್ರದ ಹಿತಚಿಂತಕ ಮತ್ತು ನಿಷ್ಠೆಯುಳ್ಳವನಾಗಿರುತ್ತಾನೆ. ವಿಶ್ವಾಸದ್ರೋಹ ಮತ್ತು ವಂಚನೆ ಅವನ ವಿಶ್ವಾಸ ಮತ್ತು ಧರ್ಮಕ್ಕೆ ವಿರುದ್ಧವಾಗಿದೆ. ಯಾವ ದೇಶದಲ್ಲಿ ಅವನು ಜೀವಿಸುತ್ತಾನೋ ಇಸ್ಲಾಮೀ ಚಿಂತನೆಯ ಪ್ರಕಾರ, ಅದರ ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ಅವನು ಪ್ರಯತ್ನಿಸಬೇಕು. ನೈಜ ವಿಚಾರ, ಉನ್ನತ ಚಾರಿತ್ರ್ಯ ಮತ್ತು ಪರಿಶುದ್ಧ ರಾಜಕೀಯವನ್ನು ದೇಶವಾಸಿಗಳಿಗೆ ಪರಿಚಯಿಸಬೇಕು. ಅಲ್ಲಾಹನು ಕಳಿಸಿದ ಜೀವನ ವ್ಯವಸ್ಥೆ, ಅದರ ರಾಷ್ಟ್ರೀಯ-ಅಂತಾರಾಷ್ಟ್ರೀಯ ಕಾನೂನುಗಳು ಮತ್ತು ಅವುಗಳಲ್ಲಿರುವ ಸಮತೋಲನವನ್ನು ಪುರಾವೆಗಳ ಸಹಿತ ಅವರ ಮುಂದೆ ಪ್ರಸ್ತುತಪಡಿಸಬೇಕು. ಅದರ ನ್ಯಾಯ-ನೀತಿ ಮತ್ತು ಸಮಾನತೆಯ ಅದ್ಭುತ ಕಲ್ಪನೆ, ಮಾನವ ಹಕ್ಕುಗಳ ಗೌರವಕ್ಕೆ ನೀಡಿರುವ ಆದೇಶಗಳ ಬಗ್ಗೆ ಚಿಂತನೆ ನಡೆಸುವಂತೆ ಕರೆ ನೀಡಬೇಕು. ಈ ವಿಚಾರ-ಆಚಾರಗಳ ವ್ಯವಸ್ಥೆಯನ್ನು ಜಾರಿಗೊಳಿಸಲು ನೈತಿಕ ಮತ್ತು ಕಾನೂನಿನ ಚೌಕಟ್ಟಿನೊಳಗಿದ್ದುಕೊಂಡು ಪ್ರಯತ್ನಿಸಬೇಕು. ಇದು ಅವನ ಕರ್ತವ್ಯವಾಗಿದೆ.

ಈ ಲೋಕದಲ್ಲಿ ಪ್ರತಿಯೊಬ್ಬ ಮಾನವನಿಗೂ ಕೆಲವು ಮೂಲಭೂತ ಹಕ್ಕುಗಳಿವೆ. ಅವುಗಳಿಗೆ ರಕ್ಷಣೆ ದೊರೆಯದಿದ್ದರೆ ಅವನು ಸಮಾಜದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲಾರ. ಅಷ್ಟೇ ಅಲ್ಲ, ಅವನ ಅಸ್ತಿತ್ವವೇ ಸದಾ ಅಪಾಯದಲ್ಲಿರುವುದು. ಅವುಗಳ ಮೇಲೆ ಹಸ್ತಕ್ಷೇಪವಾದಾಗ ಅವನಿಗೆ ಅದರ ವಿರುದ್ಧ ಪ್ರತಿಭಟಿಸುವ ಹಕ್ಕಿದೆ. ಇದು ಎಲ್ಲ ನಾಗರಿಕ ಕಾನೂನಿನಲ್ಲಿದೆಯಾದರೂ ಅವೆಲ್ಲವುಗಳಿಗಿಂತಲೂ ಮುಂಚೆ ಇಸ್ಲಾಮ್ ಈ ಹಕ್ಕನ್ನು ಅಂಗೀಕರಿಸಿದೆ.

ಒಬ್ಬ ಮುಸ್ಲಿಮನು ತನ್ನ ಧಾರ್ಮಿಕ ಮತ್ತು ನೈತಿಕ ಹೊಣೆಗಾರಿಕೆಗಳನ್ನು ಎಂದೂ ಮರೆಯುವಂತಿಲ್ಲ. ದೇವನೊಂದಿಗೆ ಅವನ ಬಲವಾದ ಸಂಬಂಧವಿರಬೇಕು. ಅದರಿಂದಾಗಿ

ಜೀವನದ ಸಂಕೀರ್ಣ ಸಮಸ್ಯೆಗಳ ವೇಳೆ ಅವನಿಗೆ ಆತ್ಮಶಾಂತಿ ಮತ್ತು ಧೈರ್ಯ-ಸ್ಥೈರ್ಯ ಲಭ್ಯವಾಗುವುದು. ಅವನು ಸ್ವಯಂ ಕೆಡುಕು ಮುಕ್ತನಾಗಿ, ದೇವಭಯದೊಂದಿಗೆ ಜೀವಿಸಬೇಕು. ಸಮಾಜದಲ್ಲಿ ಒಳಿತು ಮತ್ತು ದೇವಭಯದ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸಬೇಕು. ತನ್ನಲ್ಲಿ ಉನ್ನತ ಚಾರಿತ್ರ್ಯವನ್ನು ಬೆಳೆಸಿಕೊಳ್ಳಬೇಕು. ಮನುಷ್ಯರನ್ನು ಮನುಷ್ಯರಂತೆ ಕಾಣಬೇಕು. ಅವರ ಹಕ್ಕುಗಳನ್ನು ಗುರುತಿಸಬೇಕು. ಭಿನ್ನ ವಿಚಾರಧಾರೆಯವರೊಂದಿಗೂ ಅವನ ಸಂಬಂಧ ಉತ್ತಮವಾಗಿರಬೇಕು. ಸಭ್ಯ, ಸುಸಂಸ್ಕೃತ ಮತ್ತು ಸದಾಚಾರದೊಂದಿಗೆ ಅವರೊಂದಿಗೆ ವರ್ತಿಸಬೇಕು.

ಮುಸ್ಲಿಮರು ಈ ಶಿಕ್ಷಣಗಳಿಗೆ ಬದ್ಧರಾಗಿದ್ದಾರೆ. ಅವರು ಯೋಚಿಸುವ ರೀತಿಯ ಬಗ್ಗೆ ಭಿನ್ನಾಭಿಪ್ರಾಯವಿರಬಹುದು. ಆದರೆ ಕಾನೂನುಪರ ಮತ್ತು ನೈತಿಕ ನೆಲೆಯಲ್ಲಿ ಯಾವುದೇ ಸಮಾಜದಲ್ಲಿ ಅವರು ತಮ್ಮ ಈ ಪಾತ್ರ ನಿರ್ವಹಿಸುವುದರಿಂದ ತಡೆಯುವಂತಿಲ್ಲ.

ಧರ್ಮದ ಮೂಲಭೂತ ಬೇಡಿಕೆಗಳು

ಬಹುಧರ್ಮೀಯ ರಾಷ್ಟ್ರದಲ್ಲಿ ವಾಸಿಸುವ ಮುಸ್ಲಿಮರಿಗೆ ತಮ್ಮ ಧರ್ಮ ಮತ್ತು ವಿಶ್ವಾಸದ ಕುರಿತು ಇಸ್ಲಾಮ್ ನೀಡುವ ಆದೇಶಗಳೇನೆಂಬುದನ್ನು ಮೊದಲು ಪ್ರಸ್ತಾಪಿಸುತ್ತೇವೆ. ಈ ಆದೇಶಗಳು ಅಥವಾ ಅದರ ಬೇಡಿಕೆಗಳು ಮುಸ್ಲಿಮೇತರರೇ ವಾಸಿಸುತ್ತಿದ್ದ ಮಕ್ಕಾದ ಕಾಲಕ್ಕೂ ಅನ್ವಯಿಸುತ್ತದೆ. ಅಪ್ಪಟ ಇಸ್ಲಾಮೀ ರಾಷ್ಟ್ರ ಸ್ಥಾಪನೆಯಾದ ಮದೀನದ ಕಾಲಕ್ಕೂ ಅನ್ವಯಿಸುತ್ತದೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಆದ್ದರಿಂದ ಈ ಆದೇಶಗಳಿಗೆ ಇಸ್ಲಾಮೀ ಸಮಾಜ ಮಾತ್ರ ಬದ್ಧ ಅಥವಾ ಇಸ್ಲಾಮೇತರ ಸಮಾಜಕ್ಕೆ ಇದು ಅನ್ವಯಿಸುತ್ತದೆ ಎಂದು ಹೇಳುವಂತಿಲ್ಲ. ಎರಡೂ ರೀತಿಯ ಸಮಾಜಗಳಿಗೂ ಇದರ ಮಹತ್ವವಿದೆ.

ಧರ್ಮದಲ್ಲಿ ಸ್ಥಿರವಾಗಿರುವುದು

ಒಂದು ಬಹುಧರ್ಮೀಯ ರಾಷ್ಟ್ರದಲ್ಲಿರುವ ಮುಸ್ಲಿಮನಿಗೆ ಧಾರ್ಮಿಕವಾಗಿ ಹೆಚ್ಚು ಅಥವಾ ಕಡಿಮೆ, ಸಣ್ಣ ಅಥವಾ ದೊಡ್ಡ ಸಮಸ್ಯೆಗಳಿರಬಹುದು. ಪರಿಸ್ಥಿತಿಯು ಅನುಕೂಲ ಕರವೂ ಪ್ರತಿಕೂಲವೂ ಆಗಿರಬಹುದು. ಅದು ಆ ರಾಷ್ಟ್ರದ ಕಾನೂನು, ಆಡಳಿತ ವರ್ಗದ ವರ್ತನೆ ಮತ್ತು ಜನಸಾಮಾನ್ಯರ ಸ್ವಭಾವವನ್ನು ಅವಲಂಬಿಸಿದೆ. ಅದರಲ್ಲಿ ಸ್ವಯಂ ಮುಸ್ಲಿಮರು ಧಾರ್ಮಿಕ, ನೈತಿಕ ಮತ್ತು ರಾಜಕೀಯ ಪ್ರಭಾವ ಎಷ್ಟು ಹೊಂದಿದ್ದಾರೆ ಮತ್ತು ಅವರಲ್ಲಿ ತಮ್ಮ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಎಷ್ಟಿದೆ ಎಂಬುದೂ ಮುಖ್ಯವಾಗಿದೆ.

ಕುರ್‌ಆನ್ ಸತ್ಯವಿಶ್ವಾಸಿಗಳಿಗೆ ಎಲ್ಲ ಪರಿಸ್ಥಿತಿಗಳಲ್ಲೂ ದೃಢಚಿತ್ತತೆ ಮತ್ತು ಧೈರ್ಯ-ಸ್ಥೈರ್ಯಗಳೊಂದಿಗೆ ಧರ್ಮದಲ್ಲಿ ಸ್ಥಿರವಾಗಿದ್ದು ಅದರಂತೆ ಜೀವಿಸಲು ಕಲಿಸಿದೆ. ಪರಿಸ್ಥಿತಿ ಎಷ್ಟೇ ಕಠಿಣತಮವಾಗಿದ್ದರೂ ವಾತಾವರಣ ಎಷ್ಟೇ ಕೆಟ್ಟು ಹೋಗಿದ್ದರೂ ವಿಶ್ವಾಸಿಯು ಧರ್ಮಕ್ಕೆ ಅಂಟಿಕೊಂಡಿರಬೇಕು. ಪರಿಸ್ಥಿತಿ ಕಠಿಣವಾಗಿದೆ ಮತ್ತು ಸಂಕೀರ್ಣವಾಗಿದೆಯೆಂದು ಭಯಪಟ್ಟು ಧರ್ಮ ಮತ್ತು ವಿಶ್ವಾಸವನ್ನು ಕೈಬಿಡುವುದು ಅಥವಾ ಅದನ್ನು ಬಚ್ಚಿಡುವುದು ಮುಸ್ಲಿಮರಿಗೆ ಭೂಷಣವಲ್ಲ. ಅವನು ತನ್ನಿಂದ ಸಾಧ್ಯವಾದ ಗರಿಷ್ಠ ತ್ಯಾಗಕ್ಕೂ ಸಿದ್ಧನಾಗಿರಬೇಕು.

ಮಕ್ಕಾ ಜೀವನದ ಸಂಕೀರ್ಣ ಪರಿಸ್ಥಿತಿ ಮತ್ತು ಕಠಿಣ ಸತ್ವ ಪರೀಕ್ಷೆಗಳ ವೇಳೆ ಸತ್ಯಧರ್ಮದಲ್ಲಿ ಸ್ಥಿರವಾಗಿರುವಂತೆ ಪದೇ ಪದೇ ಆದೇಶಿಸಲಾಗಿದೆ. ಅದಕ್ಕೆ ಪರಲೋಕದ ವಿಜಯ ಮತ್ತು ಸ್ವರ್ಗದ ಸುವಾರ್ತೆ ನೀಡಲಾಗಿದೆ. ಉದಾ:

إِنَّ الَّذِينَ قَالُوا رَبُّنَا اللَّهُ ثُمَّ اسْتَقَامُوا تَتَنَزَّلُ عَلَيْهِمُ الْمَلَائِكَةُ أَلَّا تَخَافُوا وَلَا تَحْزَنُوا وَأَبْشِرُوا بِالْجَنَّةِ الَّتِي كُنْتُمْ تُوعَدُونَ ۝٣٠ نَحْنُ أَوْلِيَاؤُكُمْ فِي الْحَيَاةِ الدُّنْيَا وَفِي الْآخِرَةِ ۖ وَلَكُمْ فِيهَا مَا تَشْتَهِي أَنْفُسُكُمْ وَلَكُمْ فِيهَا مَا تَدَّعُونَ ۝٣١

ನಮ್ಮ ಪ್ರಭು ಅಲ್ಲಾಹನು ಎಂದು ಹೇಳಿ ಆ ಬಳಿಕ ಅದರಲ್ಲೇ ಸ್ಥಿರವಾಗಿ ನಿಂತು ಬಿಟ್ಟವರ ಮೇಲೆ ಖಂಡಿತವಾಗಿಯೂ ದೇವಚರರು ಇಳಿಯುತ್ತಾರೆ ಮತ್ತು ಹೇಳುತ್ತಾರೆ; ''ಹೆದರ ಬೇಡಿರಿ, ಖೇದಿಸಬೇಡಿರಿ ನಿಮಗೆ ವಾಗ್ದಾನ ಮಾಡಲಾಗಿರುವ ಸ್ವರ್ಗದ ಸುವಾರ್ತೆಯಿಂದ ಸಂತಸಗೊಳ್ಳಿರಿ. ನಾವು ಈ ಲೋಕದ ಜೀವನದಲ್ಲೂ ಪರಲೋಕದಲ್ಲೂ ನಿಮ್ಮ ಸಂಗಾತಿಗಳಾಗಿದ್ದೇವೆ. ಅಲ್ಲಿ ನೀವು ಬಯಸಿದ್ದೆಲ್ಲವೂ ನಿಮಗೆ ಸಿಗುವುದು. ನೀವು ಆಶಿಸಿದ ಪ್ರತಿಯೊಂದು ವಸ್ತುವೂ ನಿಮ್ಮದಾಗುವುದು...'' (ಪವಿತ್ರ ಕುರ್‌ಆನ್, 41: 30-31)

ಪ್ರತಿಕೂಲ ವಾತಾವರಣದಲ್ಲಿ ಸ್ಥಿರವಾಗಿರುವುದಕ್ಕೆ ಇನ್ನೊಂದು ಕಡೆಯೂ ಸ್ವರ್ಗದ ಸುವಾರ್ತೆಯನ್ನು ನೀಡಲಾಗಿದೆ. ನೋಡಿರಿ.

إِنَّ الَّذِينَ قَالُوا رَبُّنَا اللَّهُ ثُمَّ اسْتَقَامُوا فَلَا خَوْفٌ عَلَيْهِمْ وَلَا هُمْ يَحْزَنُونَ ۝١٣ أُولَٰئِكَ أَصْحَابُ الْجَنَّةِ خَالِدِينَ فِيهَا جَزَاءً بِمَا كَانُوا يَعْمَلُونَ ۝١٤

''ನಿಸ್ಸಂದೇಹವಾಗಿಯೂ ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿ ಅದರಲ್ಲೇ ಸ್ಥಿರಗೊಂಡವರಿಗೆ ಯಾವ ಭಯವೂ ಇಲ್ಲ. ಅವರು ದುಃಖಿತಪ್ತರೂ ಆಗಲಿಕ್ಕಿಲ್ಲ. ಇಂತಹವರು ಸ್ವರ್ಗಕ್ಕೆ ಹೋಗುವವರಾಗಿದ್ದಾರೆ. ಅವರು ಇಹಲೋಕದಲ್ಲಿ ಮಾಡುತ್ತಿದ್ದ ಸತ್ಕರ್ಮಗಳ ಪ್ರತಿಫಲವಾಗಿ ಅಲ್ಲಿ ಸದಾಕಾಲ ಇರುವರು.'' (ಪವಿತ್ರ ಕುರ್‌ಆನ್, 46: 13-14)

ಮನುಷ್ಯ ಪ್ರತಿಕೂಲ ವಾತಾವರಣದಲ್ಲೂ ಧರ್ಮದ ಕಡೆಗೆ ಜನರನ್ನು ನಿರಂತರ ಆಹ್ವಾನಿಸುವುದು, ಅದು ಪರಮ ಸತ್ಯವಾಗಿದೆಯೆಂಬುದನ್ನು ಪ್ರತಿಪಾದಿಸುವುದು, ಅದರ ಬಗೆಗಿನ ಸಂಶಯ ಮತ್ತು ತಪ್ಪು ಕಲ್ಪನೆಗಳನ್ನು ನೀಗಿಸುವುದು ಮತ್ತು ಇಹ-ಪರಗಳ ವಿಜಯಕ್ಕೆ ಇದೊಂದೇ ಮಾರ್ಗವೆಂಬ ಸಂತೃಪ್ತಿ ಹೊಂದಿರುವುದು ಅಲ್ಲಾಹನ ಧರ್ಮದ ಮೇಲೆ ಸ್ಥಿರವಾಗಿರುವುದರ ಇನ್ನೊಂದು ಮಗ್ಗುಲಾಗಿದೆ. ಅಶ್ಶೂರಾ ಅಧ್ಯಾಯ ಪ್ರವಾದಿಯವರ(ಸ) ಮಕ್ಕಾ ಜೀವನ ಕಾಲದಲ್ಲಿ ಅವತೀರ್ಣವಾಗಿತ್ತು. ಅದರಲ್ಲಿ ಈ ಲೋಕಕ್ಕೆ ಬಂದ ಮಹಾನ್

ಪ್ರವಾದಿಗಳೆಲ್ಲರಿಗೂ 'ಇಕಾಮತುದ್ದೀನ್' ಅಥವಾ ಧರ್ಮಸಂಸ್ಥಾಪನೆಯ ಆಜ್ಞೆ ನೀಡಲಾಗಿದೆ. ಅದನ್ನೇ ಪ್ರವಾದಿ ಮುಹಮ್ಮದ್(ಸ) ಅವರಿಗೂ ನೀಡಲಾಗುತ್ತಿದೆ. ಆದರೆ ಹಿಂದಿನ ಜನಾಂಗಗಳು ಅವರ ಪ್ರವಾದಿಗಳ ಬೋಧನೆಗಳನ್ನು ಮರೆತು ಬಿಟ್ಟಿದ್ದಾರೆಂದು ಹೇಳಲಾಗಿದೆ.

فَلِذٰلِكَ فَادْعُ ۚ وَاسْتَقِمْ كَمَآ اُمِرْتَ ۚ وَلَا تَتَّبِعْ اَهْوَآءَهُمْ ۚ وَقُلْ اٰمَنْتُ بِمَآ اَنْزَلَ اللّٰهُ مِنْ كِتٰبٍ ۚ وَاُمِرْتُ لِاَعْدِلَ بَيْنَكُمْ ۗ اَللّٰهُ رَبُّنَا وَ رَبُّكُمْ ۗ لَنَآ اَعْمَالُنَا وَلَكُمْ اَعْمَالُكُمْ ۗ لَا حُجَّةَ بَيْنَنَا وَبَيْنَكُمْ ۗ اَللّٰهُ يَجْمَعُ بَيْنَنَا ۚ وَاِلَيْهِ الْمَصِيْرُ ﴿١٥﴾

(ಈ ಪರಿಸ್ಥಿತಿ ಉಂಟಾಗಿ ಬಿಟ್ಟಿದೆ) ಆದುದರಿಂದ ಸಂದೇಶವಾಹಕರೇ, ನೀವಿನ್ನು ಅದೇ ಧರ್ಮದ ಕಡೆಗೆ ಕರೆ ನೀಡಿರಿ ಮತ್ತು ನಿಮಗೆ ಆಜ್ಞಾಪಿಸಲಾಗಿರುವ ಪ್ರಕಾರ ಅದರಲ್ಲೇ ಸ್ಥಿರವಾಗಿರಿ. ಇವರ ಇಚ್ಛೆಗಳನ್ನು ಅನುಸರಿಸಬೇಡಿರಿ ಮತ್ತು ಇವರೊಡನೆ (ಹೀಗೆ) ಹೇಳಿರಿ ''ಅಲ್ಲಾಹನು ಅವತೀರ್ಣಗೊಳಿಸಿದ ಪ್ರತಿಯೊಂದು ಗ್ರಂಥದ ಮೇಲೆ ನಾನು ವಿಶ್ವಾಸವಿರಿಸಿದೆನು. ನಿಮ್ಮ ನಡುವೆ ನ್ಯಾಯ ಪಾಲಿಸಬೇಕೆಂದು ನನಗೆ ಆದೇಶಿಸಲಾಗಿದೆ. ಅಲ್ಲಾಹನೇ ನಮ್ಮ ಪ್ರಭುವೂ ನಿಮ್ಮ ಪ್ರಭುವೂ ಆಗಿರುತ್ತಾನೆ. ನಮ್ಮ ಕರ್ಮಗಳು ನಮಗೆ, ನಿಮ್ಮ ಕರ್ಮಗಳು ನಿಮಗೆ. ನಮ್ಮ ನಿಮ್ಮೊಳಗೆ ಯಾವ ಕಲಹವೂ ಇಲ್ಲ. ಅಲ್ಲಾಹನು ಒಂದು ದಿನ ನಮ್ಮೆಲ್ಲರನ್ನೂ ಒಟ್ಟುಗೂಡಿಸುವನು ಮತ್ತು ಎಲ್ಲರಿಗೂ ಅವನ ಕಡೆಗೇ ಮರಳಲಿಕ್ಕಿದೆ.'' (ಪವಿತ್ರ ಕುರ್‌ಆನ್, 42: 15)

ಈ ಸೂಕ್ತದಿಂದ, ಬಹುಧರ್ಮೀಯ ರಾಷ್ಟ್ರದಲ್ಲಿ ಇಸ್ಲಾಮಿನ ಪ್ರಚಾರವನ್ನು ಅದು ತನ್ನ ಮೂಲಭೂತ ಹಕ್ಕೆಂದು ಪ್ರತಿಪಾದಿಸುತ್ತದೆಂದು ತಿಳಿಯುತ್ತದೆ. ಇಸ್ಲಾಮನ್ನು ಅಲ್ಲಾಹನ ಧರ್ಮವೆಂಬ ನೆಲೆಯಲ್ಲಿ ಸ್ವೀಕರಿಸುವವನಿಗೆ ಅಡ್ಡಿಯಾಗಬಾರದೆಂಬ ಉದ್ದೇಶದಿಂದ ಈ ಹಕ್ಕು ತನಗೆ ದೊರಕಿರಬೇಕೆಂದು ಅದು ಬಯಸುತ್ತದೆ. ಯಾವುದೇ ವಿಶ್ವಾಸ ಸಿದ್ಧಾಂತವನ್ನು ಅಂಗೀಕರಿಸುವುದು, ಅದರಂತೆ ನಡೆಯುವುದು ಮತ್ತು ಅದನ್ನು ಪ್ರಚಾರ ಮಾಡುವುದು ಪ್ರತಿಯೊಬ್ಬ ನಾಗರಿಕನ ಹಕ್ಕಾಗಿದೆಯೆಂದು ಆಧುನಿಕ ಲೋಕವೂ ಒಪ್ಪಿಕೊಂಡಿದೆ.

ಈ ಸೂಕ್ತದಿಂದ ಸಂದೇಶ ಪ್ರಚಾರದ ಕೆಲವು ಮೂಲ ತತ್ವಗಳು ಹೊರಡುತ್ತವೆ. ಅವುಗಳನ್ನು ಪರಿಗಣಿಸಬೇಕಾಗಿದೆ. ಒಂದನೆಯದಾಗಿ, ಬಹುಧರ್ಮೀಯ ರಾಷ್ಟ್ರದಲ್ಲಿ ಇಸ್ಲಾಮಿನ ಪ್ರಚಾರ ಮಾಡಲು ಮತ್ತು ಅದರಲ್ಲಿ ಸ್ಥಿರವಾಗಿಸಲು ಆದೇಶಿಸಲಾಗಿದೆ. ಎರಡನೆಯದಾಗಿ, ವಿರೋಧಿಗಳ ಆಗ್ರಹಗಳನ್ನು ಈಡೇರಿಸಬಾರದೆನ್ನಲಾಗಿದೆ. ಅರ್ಥಾತ್ ಅವರನ್ನು ಸಂತೋಷ ಪಡಿಸಲಿಕ್ಕಾಗಿ ನಿಮ್ಮ ವಿಶ್ವಾಸ-ನಂಬಿಕೆಗಳನ್ನು ಕೈ ಬಿಡುವುದು ತಪ್ಪೆನ್ನಲಾಗಿದೆ. ಮೂರನೆಯದಾಗಿ ಇದರಲ್ಲಿ, ಸಂದೇಶ ಪ್ರಚಾರದ ವೇಳೆ ವ್ಯರ್ಥ ಚರ್ಚೆ ಮತ್ತು ತರ್ಕ-ವಿತರ್ಕಗಳಿಗೆ ಇಳಿಯಬಾರದು,. ವಿಶ್ವಾಸ-ಸಿದ್ಧಾಂತದ ವಿಷಯದಲ್ಲಿ ಪ್ರತಿಯೊಬ್ಬನ ಅಧಿಕಾರ ಸ್ವಾತಂತ್ರ್ಯವನ್ನೂ ಅಂಗೀಕರಿಸಬೇಕು. ವಿಶ್ವಾಸ ಭಿನ್ನತೆಗಳಲ್ಲಾಗಲಿ, ಜೀವನದ ಇತರ

ಸಮಸ್ಯೆಗಳಲ್ಲಾಗಲಿ ಎಲ್ಲದರಲ್ಲೂ ನ್ಯಾಯ-ನೀತಿಯನ್ನು ಪಾಲಿಸಬೇಕು ಮುಂತಾದ ಇನ್ನೂ ಹಲವಾರು ಆದೇಶಗಳಿವೆ. ಒಬ್ಬ ಮುಸ್ಲಿಮನು ಅದೆಲ್ಲವನ್ನೂ ಪಾಲಿಸಲು ಬದ್ಧನಾಗಿದ್ದಾನೆ. ಇದು ಅತ್ಯಂತ ವಿವೇಕ ಪೂರ್ಣ ಆದೇಶಗಳಾಗಿವೆ. ಆಧುನಿಕ ಕಾಲದ ಅತಿದೊಡ್ಡ ವಿಚಾರವಾದಿ ಕೂಡಾ ಇವುಗಳ ಪೈಕಿ ಯಾವ ಆದೇಶವನ್ನೂ ತಪ್ಪೆಂದು ಹೇಳಲಾರ.

ಧರ್ಮದಲ್ಲಿ ತಿದ್ದುಪಡಿ ಸಲ್ಲದು

ಬಹುಧರ್ಮೀಯ ರಾಷ್ಟ್ರದಲ್ಲಿ ಧರ್ಮದ ವೈಶಿಷ್ಟ್ಯ ಮತ್ತು ಅನನ್ಯತೆ ಇಲ್ಲದಂತೆ ಮಾಡಲು ಹಾಗೂ ಅದನ್ನು ಇಸ್ಲಾಮೇತರ ವಿಚಾರ ಮತ್ತು ಸಂಸ್ಕೃತಿಯೊಂದಿಗೆ ಸಮಾನಗೊಳಿಸಲು ಅದನ್ನು ತಿದ್ದುಪಡಿ ಮತ್ತು ವಿರೂಪಗೊಳಿಸುವ ಪ್ರಯತ್ನಗಳೂ ನಡೆಯಬಹುದು. ಆಡಳಿತ ವರ್ಗ ತನ್ನ ಇಷ್ಟಾನುಸಾರ ಧರ್ಮದ ದುರ್ವ್ಯಾಖ್ಯಾನ ಮಾಡಿ ಅದನ್ನು ಸ್ವೀಕರಿಸುವಂತೆ ನಿರ್ಬಂಧಿಸಲೂಬಹುದು. ಅದಕ್ಕೆ ಅವಕಾಶ ಸಿಗದಿದ್ದರೆ ಮತ್ತು ಅದು ಅನೌಚಿತ್ಯವೆಂದು ಮನಗಂಡರೆ ಅದರಲ್ಲಿ ತಿದ್ದುಪಡಿ ಮಾಡುವಂತೆ ಮುಸ್ಲಿಮರನ್ನೇ ನಿರ್ಬಂಧಿಸಬಹುದು. ಅದು ಅಚ್ಚರಿಯ ವಿಷಯವಲ್ಲ. ಆದಕ್ಕೆ ಆರ್ಥಿಕ ನಿರ್ಬಂಧ, ರಾಜಕೀಯ ಒತ್ತಡ, ಆಸೆ-ಆಮಿಷಗಳು, ಕಾನೂನು ನಿರ್ಮಾಣವೇ ಮುಂತಾದ ವಿವಿಧ ಉಪಾಯಗಳನ್ನು ಹೂಡಬಹುದು. ಇದು ಧಾರ್ಮಿಕ ದಬ್ಬಾಳಿಕೆಯ ಅತ್ಯಂತ ಕೆಟ್ಟ ರೂಪವಾಗಿದೆ. ಅದನ್ನು ಇಸ್ಲಾಮ್ ಅಂಗೀಕರಿಸುವುದೇ ಇಲ್ಲ. ಕುರ್‌ಆನಿನಲ್ಲಿ ತಿದ್ದುಪಡಿ ಮಾಡುವ ಮೂಲಕ ತಮಗೂ ಸ್ವೀಕಾರಾರ್ಹವಾಗಬಲ್ಲಂತಹ ವಿಚಾರಗಳನ್ನು ಅದರಲ್ಲಿ ಸೇರಿಸಬೇಕೆಂಬ ಬಹುದೇವ ವಿಶ್ವಾಸಿಗಳ ಬೇಡಿಕೆಯನ್ನು ಅದು ಸಂಪೂರ್ಣ ತಳ್ಳಿಹಾಕಿದೆ. ಅಲ್ಲಾಹನ ಗ್ರಂಥದಲ್ಲಿ ಒಂದೇ ಒಂದು ಪದವನ್ನು ಬದಲಾಯಿಸಲು, ತಿದ್ದುಪಡಿ ಮಾಡಲು ಅಥವಾ ಅದರಲ್ಲಿ ಸೇರ್ಪಡೆಗೊಳಿಸಲು ಮತ್ತು ಅದರಿಂದ ತೆಗೆದು ಹಾಕಲು ಸಾಧ್ಯವಿಲ್ಲವೆಂದು ಅದು ಹೇಳಿತು. ಅದರ ಮೇಲೆ ವಿಶ್ವಾಸವಿರಿಸುವವರು ಅದರ ಅನುಸರಣೆಗೆ ಬದ್ಧರಾಗಿದ್ದಾರೆ. ಅದನ್ನು ಬದಲಾಯಿಸಲು ಅಲ್ಲಾಹನು ಅವರಿಗೆ ಅಧಿಕಾರ ನೀಡಿಲ್ಲ.

وَإِذَا تُتْلَىٰ عَلَيْهِمْ آيَاتُنَا بَيِّنَاتٍ ۙ قَالَ الَّذِينَ لَا يَرْجُونَ لِقَاءَنَا ائْتِ
بِقُرْآنٍ غَيْرِ هَٰذَا أَوْ بَدِّلْهُ ۚ قُلْ مَا يَكُونُ لِي أَنْ أُبَدِّلَهُ مِن تِلْقَاءِ
نَفْسِي ۖ إِنْ أَتَّبِعُ إِلَّا مَا يُوحَىٰ إِلَيَّ ۖ إِنِّي أَخَافُ إِنْ عَصَيْتُ رَبِّي عَذَابَ
يَوْمٍ عَظِيمٍ ⑮

''ನಮ್ಮ ಸುವ್ಯಕ್ತ ವಚನಗಳನ್ನು ಅವರಿಗೆ ತಿಳಿಯ ಹೇಳಿದಾಗ ನಮ್ಮನ್ನು ಭೇಟಿಯಾಗುವ ನಿರೀಕ್ಷೆಯನ್ನಿರಿಸದವರು, ''ಇದರ ಬದಲಿಗೆ ಇನ್ನೊಂದು ಕುರ್‌ಆನನ್ನು ತನ್ನಿರಿ, ಇಲ್ಲವೆ ಇದರಲ್ಲಿ ಸ್ವಲ್ಪ ತಿದ್ದುಪಡಿ ಮಾಡಿರಿ'' ಎಂದು ಹೇಳುತ್ತಾರೆ, ಓ ಪೈಗಂಬರರೇ, ಅವರೊಡನೆ (ಹೀಗೆ) ಹೇಳಿರಿ-''ನನ್ನ ಕಡೆಯಿಂದ ಇದರಲ್ಲೇನಾದರೂ ಮಾರ್ಪಾಟು ಮಾಡುವುದು ನನ್ನ ಕೆಲಸವಲ್ಲ, ನಾನಂತು ನನಗೆ ಕಳುಹಿಸಲ್ಪಡುವ 'ದಿವ್ಯವಾಣಿ'ಯನ್ನು ಅನುಸರಿಸುವವನಾಗಿರುತ್ತೇನೆ.

ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ ನನಗೆ ಒಂದು ಭಯಾನಕ ಯಾತನೆಯ ಭಯವಿದೆ.'' (ಪವಿತ್ರ ಕುರ್‌ಆನ್, 10: 10-15)

ಈ ವಿಷಯದಲ್ಲಿ ಬಹುದೇವಾರಾಧಕರಿಂದ ಪ್ರವಾದಿಯವರ ಮೇಲೆ ಭಾರಿ ಒತ್ತಡವಿತ್ತು. ಅದಕ್ಕಾಗಿ ತರತರದ ಉಪಾಯಗಳನ್ನು ಹೂಡಲಾಗುತ್ತಿತ್ತು. ಆದರೆ ಅಲ್ಲಾಹನು ತನ್ನ ಪ್ರವಾದಿಗೆ ತನ್ನ ವಿಶೇಷ ಅನುಗ್ರಹದಿಂದ ಸ್ಥಿರತೆಯನ್ನು ನೀಡಿದನು. ಅವರು ತಮ್ಮ ನಿಲುವಿನಿಂದ ಕಿಂಚಿತ್ತೂ ಕದಲಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ತನ್ನ ನಿಲುವಿನಲ್ಲಿ ಸ್ಥಿರವಾಗಿರಬೇಕೆಂಬ ಮಾರ್ಗದರ್ಶನ ಈ ಮೂಲಕ ಸಮುದಾಯಕ್ಕೆ ನೀಡಲಾಗಿದೆ. ವಿರೋಧಿಗಳ ಆಗ್ರಹಗಳಿಗೆ ಮಣಿದರೆ ಅದು ದೊಡ್ಡ ನಷ್ಟದ ವ್ಯಾಪಾರವಾದೀತು.

وَاِنْ كَادُوْا لَيَفْتِنُوْنَكَ عَنِ الَّذِيْٓ اَوْحَيْنَآ اِلَيْكَ لِتَفْتَرِيَ عَلَيْنَا غَيْرَهٗ ۖ
وَاِذًا لَّاتَّخَذُوْكَ خَلِيْلًا ﴿٧٣﴾ وَلَوْلَآ اَنْ ثَبَّتْنٰكَ لَقَدْ كِدْتَّ تَرْكَنُ اِلَيْهِمْ شَيْــًٔا
قَلِيْلًا ﴿٧٤﴾ اِذًا لَّاَذَقْنٰكَ ضِعْفَ الْحَيٰوةِ وَضِعْفَ الْمَمَاتِ ثُمَّ لَا تَجِدُ لَكَ
عَلَيْنَا نَصِيْرًا ﴿٧٥﴾

''ಓ ಪೈಗಂಬರರೇ, ನೀವು ನಮ್ಮ ಹೆಸರಲ್ಲಿ ನಿಮ್ಮ ಕಡೆಯಿಂದ ಏನನ್ನಾದರೂ ಕೃತಕವಾಗಿ ಸೃಷ್ಟನೆ ಮಾಡಲೆಂದು, ನಿಮ್ಮನ್ನು ಗೊಂದಲಕ್ಕೆ ಸಿಲುಕಿಸಿ, ನಾವು ನಿಮಗೆ ಅವತೀರ್ಣಗೊಳಿಸುತ್ತಿರುವುದರಿಂದ ನಿಮ್ಮನ್ನು ತಿರುಗಿಸಿಬಿಡಬೇಕೆಂದು ಅವರು ತಮ್ಮಿಂದಾದಷ್ಟು ಪ್ರಯತ್ನಿಸಿದ್ದಾರೆ. ನೀವು ಹಾಗೆ ಮಾಡುತ್ತಿದ್ದರೆ ಅವರು ನಿಮ್ಮನ್ನು ತಮ್ಮ ಆಪ್ತ ಮಿತ್ರನಾಗಿ ಮಾಡಿಕೊಳ್ಳುತ್ತಿದ್ದರು. ನಾವು ನಿಮ್ಮನ್ನು ಸ್ಥಿರಚಿತ್ತರನ್ನಾಗಿ ಮಾಡದಿರುತ್ತಿದ್ದರೆ ನೀವು ಅವರ ಕಡೆಗೆ ಅಲ್ಪ ಸ್ವಲ್ಪವಾದರೂ ವಾಲಿ ಬಿಡುತ್ತಿದ್ದಿರಿ. ನೀವು ಹಾಗೆ ಮಾಡುತ್ತಿದ್ದರೆ ನಾವು ನಿಮಗೆ ಇಹಲೋಕದಲ್ಲೂ ಪರಲೋಕದಲ್ಲೂ ಇಮ್ಮಡಿ ಯಾತನೆಯ ಸವಿಯನ್ನುಣಿಸುತ್ತಿದ್ದೆವು. ಅನಂತರ ನೀವು ನಮ್ಮ ವಿರುದ್ಧ ಯಾವ ಸಹಾಯಕನನ್ನೂ ಪಡೆಯುತ್ತಿರಲಿಲ್ಲ.''

(ಪವಿತ್ರ ಕುರ್‌ಆನ್, 17: 73-75)

ಅಲ್ಲಾಹನು ತನ್ನ ಧರ್ಮದಲ್ಲಿ ಬದಲಾವಣೆ ಅಥವಾ ತಿದ್ದುಪಡಿ ಮಾಡುವ ಅಧಿಕಾರ ಮುಸ್ಲಿಮರಿಗೂ ನೀಡಿಲ್ಲ, ಇತರರಿಗೂ ನೀಡಿಲ್ಲ. ಇಂತಹ ಎಲ್ಲ ಬೇಡಿಕೆಗಳನ್ನು ತಿರಸ್ಕರಿಸುವುದು ಮತ್ತು ಅಂತಹ ಪ್ರಯತ್ನಗಳನ್ನು ವಿಫಲಗೊಳಿಸುವುದು ಮುಸ್ಲಿಮರ ಕರ್ತವ್ಯವಾಗಿದೆ.

ಒಳಿತಿನ ಆದೇಶ-ಕೆಡುಕಿನ ನಿರ್ಮೂಲನ

ಈ ಲೋಕದಲ್ಲಿ ಮಾನವರ ಮುಂದೆ ಓರ್ವ ಮುಸ್ಲಿಮನು ನಿರ್ವಹಿಸಬೇಕಾದ ಕರ್ತವ್ಯಕ್ಕೆ ''ಒಳಿತಿನ ಆದೇಶ ನೀಡುವುದು ಮತ್ತು ಕೆಡುಕಿನಿಂದ ತಡೆಯುವುದು'' ಎಂದು ಹೆಸರು. ಇದು ಬಹಳ ವಿಶಾಲವೂ ಸಮಗ್ರವೂ ಆದ ಕರ್ತವ್ಯವಾಗಿದೆ. ಸರಿಯಾದ ವಿಶ್ವಾಸ ಮತ್ತು ಚಿಂತನೆ, ಉನ್ನತ ನೈತಿಕ ಗುಣಗಳು, ಮಾನವ ಹಕ್ಕುಗಳು, ಸಮಾನತೆ ಮತ್ತು ನ್ಯಾಯ-ನೀತಿಯೇ ಮುಂತಾದ ಅಲ್ಲಾಹನ ಧರ್ಮ ಅಂಗೀಕರಿಸಿದ ಒಳಿತುಗಳು ಇದರಲ್ಲಿ ಸೇರಿವೆ. ಅವು

ಒಳಿತುಗಳಾಗಿವೆಯೆಂಬುಕ್ಕೆ ಬುದ್ಧಿಯೂ ಪ್ರಕೃತಿಯೂ ಸಾಕ್ಷ್ಯ ವಹಿಸುತ್ತವೆ. ಅದಕ್ಕೆ ವಿರುದ್ಧವಾದ ಆಚಾರ-ವಿಚಾರಗಳನ್ನು ಕೆಡುಕೆನ್ನಲಾಗಿದೆ. ಅದರಲ್ಲಿ ಮಿಥ್ಯ ವಿಚಾರ-ಸಿದ್ಧಾಂತಗಳು, ತಪ್ಪು ನಡವಳಿಕೆಗಳು, ಮಾನವ ಕುಲ ಅಥವಾ ಅದರ ಒಂದು ವರ್ಗದ ಅಪಮಾನ, ದಬ್ಬಾಳಿಕೆ, ಅಕ್ರಮ-ಅತ್ಯಾಚಾರಗಳಂತಹ ಎಲ್ಲ ವಿಷಯಗಳೂ ಒಳಗೊಂಡಿವೆ. ಇದು ಅಲ್ಲಾಹನ ಧರ್ಮದ ಅಂಗೀಕಾರವಿಲ್ಲದ ಹಾಗೂ ಮಾನವ ಪ್ರಕೃತಿ ಮತ್ತು ಸಾಮಾನ್ಯ ಬುದ್ಧಿಯು ಹೇಸುವ ಮತ್ತು ತಪ್ಪೆಂದು ಸಾರಿರುವ ವಿಷಯಗಳಾಗಿವೆ.

ಶಿರ್ಕ್, ಕುಫ್ರ್ (ಬಹುದೇವತ್ವ, ಸತ್ಯನಿಷೇಧ) ಹಾಗೂ ನಾಸ್ತಿಕತೆಯ ದುಷ್ಪರಿಣಾಮಗಳ ಬಗ್ಗೆ ಜನರನ್ನು ಎಚ್ಚರಿಸುವುದು ಮತ್ತು ಇಸ್ಲಾಮಿನ ಏಕದೇವತ್ವದ ಕಲ್ಪನೆಯನ್ನು ಪುರಾವೆಗಳ ಸಹಿತ ಪ್ರತಿಪಾದಿಸುವುದು ''ಅಮ್ರ್ ಬಿಲ್‌ಮಅ್‌ರೂಫ್, ನಹೀನಿಲ್ ಮುಂಕರ್ (ಒಳಿತಿನ ಆದೇಶ, ಕೆಡುಕಿನ ನಿರ್ಮೂಲನ)''ನ ಪ್ರಥಮ ಬೇಡಿಕೆಯಾಗಿದೆ. ಇಡೀ ಲೋಕವನ್ನು ಭೌತಿಕವಾದವು ತನ್ನ ಬಿಗಿ ಮುಷ್ಟಿಯಲ್ಲಿ ಬಂಧಿಸಿಟ್ಟಿದೆ. ಅದರ ಮಾನಸಿಕ ಮತ್ತು ವೈಚಾರಿಕ ತರಬೇತಿಯು ಅಪ್ಪಟ ಭೌತಿಕ ದೃಷ್ಟಿಕೋನದಿಂದ ನಡೆಯುತ್ತಿದೆ. ಅದರ ನೀತಿ-ನಡವಳಿಕೆಗಳು ಹಾಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವು ಅದಕ್ಕೇ ಅಧೀನವಾಗಿದೆ. ವೈಯಕ್ತಿಕ ಮತ್ತು ವರ್ಗೀಯ ಹಿತಾಸಕ್ತಿಗಳ ಸಂಘರ್ಷವು ಲೋಕವನ್ನು ನರಕ ಸದೃಶವನ್ನಾಗಿ ಮಾಡಿದೆ. ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳು ದಮನಿಸಲ್ಪಡುತ್ತಿವೆ. ಅಕ್ರಮ-ದೌರ್ಜನ್ಯಗಳನ್ನು, ಅನ್ಯಾಯ, ಮೋಸ, ವಂಚನೆಯನ್ನು ಪ್ರತಿಯೊಬ್ಬನೂ ಪ್ರತಿಯೊಂದು ಗುಂಪೂ ಜೀವನ ಮಾರ್ಗವಾಗಿ ಮಾಡಿಕೊಂಡಂತೆ ಭಾಸವಾಗುತ್ತವೆ. ಪ್ರತಿ ಹೆಜ್ಜೆಯಲ್ಲೂ ಮಾನವ ಹಕ್ಕುಗಳ ದಮನವಾಗುತ್ತಿದೆ.

ತದ್ವಿರುದ್ಧವಾಗಿ, ಮಾನವನ ಭೌತಿಕ ಮತ್ತು ಆಧ್ಯಾತ್ಮಿಕ ಬೇಡಿಕೆಗಳನ್ನು ಇಸ್ಲಾಮ್ ಅತ್ಯುತ್ತಮ ರೀತಿಯಲ್ಲಿ ಪೂರೈಸುತ್ತದೆ. ಮಾನವರೆಲ್ಲರೂ ಅಲ್ಲಾಹನ ದಾಸರು. ಅವನನ್ನು ಮಾತ್ರ ಆರಾಧಿಸಬೇಕು ಮತ್ತು ಅವನ ಆದೇಶಗಳನ್ನು ಮಾತ್ರ ಪಾಲಿಸಬೇಕೆಂಬುದು ಇಸ್ಲಾಮಿನ ಮೂಲಭೂತ ಕಲ್ಪನೆಯಾಗಿದೆ. ಇದು ಒಂದು ಜನಾಂಗದ ಅಥವಾ ದೇಶದ ಧರ್ಮವಲ್ಲ, ಅದು ಎಲ್ಲ ಮಾನವರನ್ನು ಅಭಿಸಂಬೋಧಿಸುತ್ತದೆ. ಎಲ್ಲರಿಗೂ ಇಹ-ಪರ ಲೋಕಗಳ ಯಶಸ್ಸಿನ ದ್ವಾರಗಳನ್ನು ತೆರೆಯುತ್ತದೆ. ಅದು ನಿಜಾರ್ಥದಲ್ಲಿ ಮಾನವನ ಪಾಲಿಗೆ ಕರುಣೆಯ ಧರ್ಮವಾಗಿದೆ.

'ಒಳಿತಿನ ಆದೇಶ'ವೆಂದರೆ ಲೋಕಕ್ಕೆ ಸತ್ಯ-ನ್ಯಾಯ, ಶಾಂತಿ-ಸಮಾಧಾನ, ಪ್ರಾಮಾಣಿಕತೆ, ಮಾನ-ಮರ್ಯಾದೆ ಹಾಗೂ ಎಲ್ಲ ಉನ್ನತ ನಡವಳಿಕೆಗಳನ್ನು ಕಲಿಸುವುದು, ಪರಸ್ಪರರ ಹಕ್ಕುಗಳನ್ನು ತಿಳಿ ಹೇಳಿ ಅವುಗಳನ್ನು ನೀಡುವಂತೆ ಪ್ರೇರೇಪಿಸುವುದು ಇಲ್ಲಿ ಪ್ರತಿಯೊಬ್ಬನೂ ಕೆಲವು ಹಕ್ಕುಗಳನ್ನು ಹೊಂದಿದ್ದಾನೆ. ಅವುಗಳನ್ನು ರಕ್ಷಿಸುವುದು ಅಗತ್ಯ. ಈ ವಾಸ್ತವಿಕತೆಯನ್ನು ಪ್ರತಿಯೊಬ್ಬನಿಗೂ ಮನವರಿಕೆ ಮಾಡಿ ಕೊಡುವುದು. ಹಕ್ಕುಗಳಲ್ಲಿ ಆಪ್ತೇಷ್ಟರು ಮಾತ್ರವಲ್ಲ, ನೆರೆಕರೆಯವರು, ಅಪರಿಚಿತರು, ಪ್ರಯಾಣಿಕರು, ಅನ್ಯ ಧರ್ಮೀಯರು, ಭಿನ್ನ ವಿಶ್ವಾಸಿಗಳು, ಸ್ವದೇಶಿಗಳು, ವಿದೇಶಿಗಳು ಎನ್ನದೆ ಎಲ್ಲರ ಹಕ್ಕುಗಳೂ ಇವೆ. ಅವರೆಲ್ಲರ ಜೀವ, ಸೊತ್ತು, ಮಾನ-ಮರ್ಯಾದೆಯನ್ನು ರಕ್ಷಿಸುವುದು ಅಗತ್ಯ. ತದ್ವಿರುದ್ಧವಾಗಿ ಸುಳ್ಳು, ವಂಚನೆ,

ವಚನಭಂಗ, ವ್ಯಭಿಚಾರ, ಅಶ್ಲೀಲತೆಯಂತಹ ಎಲ್ಲ ನೀಚ ವೃತ್ತಿಗಳು ಮುಂಕರ್ (ಕೆಡುಕು)ಗಳಾಗಿವೆ. ಅದೇ ರೀತಿ ಅನ್ಯಾಯ, ಹಕ್ಕುಚ್ಯುತಿ, ಕೃತಘ್ನತೆ, ರಕ್ತಪಾತ, ಕೊಲೆ-ಸುಲಿಗೆ, ಮಾನವ ಹಕ್ಕುಗಳ ದಮನ ಇತ್ಯಾದಿ ಮುಂಕರ್ ಆಗಿವೆ. ಅವುಗಳಿಂದ ದೂರವಿರಲು ಪ್ರಯತ್ನಿಸಬೇಕು.

ಒಳಿತಿನ ಆದೇಶ ಮತ್ತು ಕೆಡುಕಿನ ನಿರ್ಮೂಲನದ ಈ ಘನಕರ್ತವ್ಯವನ್ನು ಈಡೇರಿಸಲು ಮುಸ್ಲಿಮ್ ಸಮುದಾಯವು ರಂಗಕ್ಕಿಳಿಯಬೇಕು. ಅದರ ಪ್ರತಿಯೊಬ್ಬನೂ ತನ್ನ ಶಕ್ತಿ ಮತ್ತು ಪ್ರಭಾವವನ್ನು ವಿನಿಯೋಗಿಸಲು ಗರಿಷ್ಠ ಪ್ರಯತ್ನಿಸಬೇಕೆಂದು ಇಸ್ಲಾಮ್ ಬಯಸುತ್ತದೆ. ಉಪದೇಶ ನೀಡಬಲ್ಲವನು ಉಪದೇಶ, ಪ್ರೇರಣೆ ಹಾಗೂ ಹುರಿದುಂಬಿಸುವ ಮೂಲಕ ಒಳಿತನ್ನು ಹರಡಬೇಕು ಮತ್ತು ಕೆಡುಕನ್ನು ಅಳಿಸಲು ಪ್ರಯತ್ನಿಸಬೇಕು. ಅದಕ್ಕಾಗಿ ಅಗತ್ಯ ಬಿದ್ದಾಗ ವೈಯಕ್ತಿಕ ಮತ್ತು ಸಾಮಾಜಿಕ ಒತ್ತಡ ಹಾಗೂ ರಾಜಕೀಯ ಶಕ್ತಿಯನ್ನು ಪ್ರಯೋಗಿಸುವುದು ಅಗತ್ಯವಾಗಬಹುದು. ಒಬ್ಬನಿಗೆ ತನ್ನ ಮನೆಮಂದಿ ಮತ್ತು ಕುಟುಂಬದವರನ್ನು ಒಳಿತಿಗೆ ಅಧೀನಗೊಳಿಸುವ ಮತ್ತು ಕೆಡುಕಿನಿಂದ ದೂರವಿರಿಸುವ ಶಕ್ತಿಯಿರಬಹುದು. ಇನ್ನೊಬ್ಬನಿಗೆ ಇದನ್ನು ತನ್ನ ಊರಿನಲ್ಲಿ ಮಾಡುವ ಸಾಮರ್ಥ್ಯವಿರಬಹುದು ಮತ್ತೊಬ್ಬನಿಗೆ ತನ್ನ ನಗರದಲ್ಲಿ ಅದನ್ನು ಜಾರಿಗೊಳಿಸುವ ಶಕ್ತಿ-ಸಾಮರ್ಥ್ಯ ಮತ್ತು ಅವಕಾಶವಿರಬಹುದು. ಬೇರೊಬ್ಬ ಆಡಳಿತ ಮಟ್ಟದಲ್ಲಿ ಅದನ್ನು ನಿರ್ವಹಿಸಬಹುದು.

ಮುಸ್ಲಿಮ್ ಸಮುದಾಯವು ಒಳಿತಿನ ಸಂಸ್ಥಾಪನೆಗಾಗಿ ಟೊಂಕ ಕಟ್ಟಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಒಳಿತಿಗಾಗಿ ತನ್ನ ಪರಿಸರವನ್ನು ಸುಗಮಗೊಳಿಸಬೇಕು. ಕೆಡುಕಿನ ವಿರುದ್ಧ ವಾತಾವರಣವನ್ನು ಸೃಷ್ಟಿಸಲು ಗರಿಷ್ಠ ಪ್ರಯತ್ನಿಸಬೇಕು. ಇದು ಇಸ್ಲಾಮಿನ ಶಿಕ್ಷಣವಾಗಿದೆ. ಸಮುದಾಯವು ಇಸ್ಲಾಮೀ ರಾಷ್ಟ್ರದಲ್ಲೂ ಬಹುಧರ್ಮೀಯ ರಾಷ್ಟ್ರದಲ್ಲೂ ಮಾಡಬೇಕಾದ ಕೆಲಸವಿದು. ಆದರಿಂದ ಮಾತ್ರ ಅದರ ಅನನ್ಯತೆ ಮತ್ತು ವೈಶಿಷ್ಟ್ಯ ಉಳಿದೀತು ಮತ್ತು ಅದು ಅಲ್ಲಾಹನ ಕರುಣೆಗೆ ಪಾತ್ರವಾದೀತು.

ನ್ಯಾಯದಲ್ಲಿ ನೆಲೆ ನಿಲ್ಲುವುದು ಮತ್ತು ಅದನ್ನು ಸ್ಥಾಪಿಸುವುದು

ಇಸ್ಲಾಮ್ ಎಲ್ಲ ಸ್ಥಿತಿಗಳಲ್ಲೂ ನ್ಯಾಯದಲ್ಲಿ ನೆಲೆನಿಲ್ಲುವ ಮತ್ತು ಅದನ್ನು ಪಾಲಿಸುವ ಆಜ್ಞೆ ನೀಡಿದೆ. ಒಂದೆಡೆ (الاعراف ٢٩) قُلْ اَمَرَ رَبِّىْ بِالْقِسْطِ ಓ ಪೈಗಂಬರರೇ; ಇವರೊಡನೆ ಹೇಳಿರಿ, ''ನನ್ನ ಪ್ರಭು ನ್ಯಾಯಪರ ಆಜ್ಞೆಯನ್ನಿತ್ತಿದ್ದಾನೆ.'' (ಪವಿತ್ರ ಕುರ್‌ಆನ್, 7: 29) ಎಂದು ಹೇಳಿದರೆ, ಇನ್ನೊಂದೆಡೆ

إِنَّ اللّٰهَ يَأْمُرُ بِالْعَدْلِ وَالْإِحْسَانِ وَإِيْتَآئِ ذِى الْقُرْبٰى وَيَنْهٰى عَنِ
الْفَحْشَآءِ وَالْمُنْكَرِ وَالْبَغْىِ ۚ يَعِظُكُمْ لَعَلَّكُمْ تَذَكَّرُوْنَ ﴿٩٠﴾

''ಅಲ್ಲಾಹ್ ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ನೀಡುತ್ತಾನೆ ಮತ್ತು ಅಶ್ಲೀಲ ಕಾರ್ಯ, ದುಷ್ಕೃತ್ಯ, ಅಕ್ರಮ, ಅತ್ಯಾಚಾರಗಳನ್ನು ನಿಷೇಧಿಸುತ್ತಾನೆ. ನೀವು ಜಾಗೃತರಾಗಲಿಕ್ಕಾಗಿ ಅವನು ನಿಮಗೆ ಉಪದೇಶ ನೀಡುತ್ತಾನೆ.'' (ಪವಿತ್ರ ಕುರ್‌ಆನ್, 16: 90) ಎಂದು ಹೇಳಿದೆ.

ಇಲ್ಲಿ ನ್ಯಾಯ ಮತ್ತು ಪರೋಪಕಾರದ ಆಜ್ಞೆಯ ಜೊತೆಗೆ ವಿದ್ರೋಹ ಮತ್ತು ವಿದ್ವೇಷದಿಂದ ತಡೆಯಲಾಗಿದೆ. ಇವೆರಡೂ ಪರಸ್ಪರ ಪೂರಕವಾಗಿವೆ. ನ್ಯಾಯ-ನೀತಿ ಇರುವಲ್ಲಿ ಅಕ್ರಮ-ಅತ್ಯಾಚಾರ ಇರಲಾರದು. ಅನ್ಯಾಯ ತಾಂಡವವಾಡುವಲ್ಲಿಂದ ನ್ಯಾಯ ಹೊರಟು ಹೋಗುವುದು. ಇಸ್ಲಾಮ್ ಮುಸ್ಲಿಮರನ್ನು ಅಲ್ಲಾಹನ ಧರ್ಮದ ವಕ್ತಾರರು ಮತ್ತು ಲೋಕದಲ್ಲಿ ನ್ಯಾಯದ ಸಾಕ್ಷ್ಯ ವಹಿಸುವ ಸಮುದಾಯವಾಗಿ ಮುಂದಿಡುತ್ತದೆ. ಅದು ಅವನಿಗೆ ಯಾವನೇ ವ್ಯಕ್ತಿ ಅಥವಾ ವರ್ಗದ ಮೇಲೆ ಕೈಯೆತ್ತುವ ಅನುಮತಿ ನೀಡುವುದಿಲ್ಲ, ಅವರೊಂದಿಗೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಅವರು ಎಷ್ಟೇ ಅತಿರೇಕವೆಸಗಿದ್ದರೂ ಸರಿ. ನ್ಯಾಯ-ನೀತಿಯು ತಕ್ವಾ (ದೇವಭಯ)ದ ಲಕ್ಷಣವಾಗಿದೆ. ಮುಸ್ಲಿಮನು ಎಂದೂ ಅದನ್ನು ಕೈ ಬಿಡಲಾರ. ಕುರ್‌ಆನಿನಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ.

يَاأَيُّهَا الَّذِينَ آمَنُوا كُونُوا قَوَّامِينَ لِلَّهِ شُهَدَاءَ بِالْقِسْطِ ۖ وَلَا يَجْرِمَنَّكُمْ شَنَآنُ قَوْمٍ عَلَىٰ أَلَّا تَعْدِلُوا ۚ اعْدِلُوا هُوَ أَقْرَبُ لِلتَّقْوَىٰ ۖ وَاتَّقُوا اللَّهَ ۚ إِنَّ اللَّهَ خَبِيرٌ بِمَا تَعْمَلُونَ ﴿٨﴾

" ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆನಿಲ್ಲುವವರೂ ನ್ಯಾಯದ ಸಾಕ್ಷ್ಯವಹಿಸುವವರೂ ಆಗಿರಿ. ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ರೇಗಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವಭಯಕ್ಕೆ ಹೆಚ್ಚು ಅನುಗುಣವಾಗಿರುತ್ತದೆ. ಅಲ್ಲಾಹನನ್ನು ಭಯಪಟ್ಟು ವರ್ತಿಸಿರಿ. ನೀವು ಮಾಡುತ್ತಿರುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಅರಿಯುವವನಾಗಿದ್ದಾನೆ." (ಪವಿತ್ರ ಕುರ್‌ಆನ್, 5: 8)

ಒಂದು ಜನಾಂಗವು ಅಲ್ಲಾಹನ ಆಜ್ಞೋಲ್ಲಂಘನೆ ಮತ್ತು ಅಕ್ರಮ-ಅತ್ಯಾಚಾರವನ್ನು ರೂಢಿಸಿಕೊಂಡಾಗ ಅಲ್ಲಾಹನು ಅದನ್ನು ಒಂದು ನಿರ್ದಿಷ್ಟ ಕಾಲದ ವರೆಗೆ ಸಡಿಲ ಬಿಡುತ್ತಾನೆ. ಅದು ಮುಗಿದಾಗ ಅದು ಅಲ್ಲಾಹನ ಶಿಕ್ಷೆಗೆ ಗುರಿಯಾಗುತ್ತದೆಂಬ ಸತ್ಯವನ್ನು ಕುರ್‌ಆನ್ ಬಹಿರಂಗ ಪಡಿಸಿದೆ. ಚರಿತ್ರೆಯಿಂದ ಅದಕ್ಕೆ ಪುರಾವೆಗಳನ್ನು ಒದಗಿಸಿದೆ.

وَكَذَٰلِكَ أَخْذُ رَبِّكَ إِذَا أَخَذَ الْقُرَىٰ وَهِيَ ظَالِمَةٌ ۚ إِنَّ أَخْذَهُ أَلِيمٌ شَدِيدٌ ﴿١٠٢﴾

"ನಿಮ್ಮ ಪ್ರಭು ಯಾವುದಾದರೂ ಅಕ್ರಮಿ ನಾಡನ್ನು ಹಿಡಿಯುವಾಗ ಅವನ ಹಿಡಿತ ಹೀಗೆಯೇ ಇರುತ್ತದೆ. ವಾಸ್ತವದಲ್ಲಿ ಅವನ ಹಿಡಿತವು ಬಹಳ ಬಿಗಿಯೂ ವೇದನಾಯುಕ್ತವೂ ಆಗಿರುತ್ತದೆ." (ಪವಿತ್ರ ಕುರ್‌ಆನ್, 11: 102)

ಅಲ್ಲಾಹನ ಈ ಕ್ರಮವನ್ನು ಪ್ರವಾದಿ(ಸ) ಹೀಗೆ ವಿವರಿಸಿದ್ದಾರೆ-

إِنَّ اللَّهَ لَا يُمْلِي لِظَالِمٍ حَتَّىٰ إِذَا أَخَذَهُ لَمْ يُفْلِتْهُ

ಅಲ್ಲಾಹನು ಅಕ್ರಮಿಗೆ ಕಾಲಾವಕಾಶ ನೀಡುತ್ತಾನೆ. ಆದರೆ ಅವನು ಹಿಡಿದು ಬಿಟ್ಟರೆ ಮತ್ತೆ ಬಿಡುವುದಿಲ್ಲ. (ಬುಖಾರಿ, ಮುಸ್ಲಿಮ್)

ಮರ್ದಿತನ ಮೊರೆಗೆ ಬಲಿಯಾಗದಿರುವಂತೆ ಪ್ರವಾದಿ(ಸ) ಎಚ್ಚರಿಸಿದ್ದಾರೆ. ಮುಆದ್‌ರನ್ನು ಯಮನಿಗೆ ಆಡಳಿತಾಧಿಕಾರಿಯಾಗಿ ಕಳಿಸುವಾಗ ಅವರಿಗೆ ಹೀಗೆ ಉಪದೇಶಿಸಿದರು–

وَتَّقِ دَعْوَةَ الْمَظْلُوْمِ فَإِنَّهُ لَيْسَ بَيْنَهَا وَبَيْنَ اللّٰهِ حِجَابٌ

ಮರ್ದಿತನ ಪ್ರಾರ್ಥನೆಗೆ ಗುರಿಯಾಗದಿರಿ. ಏಕೆಂದರೆ ಅವನ ಪ್ರಾರ್ಥನೆ ಮತ್ತು ಅಲ್ಲಾಹನ ಮಧ್ಯೆ ಯಾವುದೇ ತೆರೆಯಿರುವುದಿಲ್ಲ. (ಬುಖಾರಿ, ಮುಸ್ಲಿಮ್)

اِيَّاکَ دَعْوَةَ الْمَظْلُوْمِ فَإِنَّمَا يَسْأَلُ اللّٰهَ تَعَالٰى حَقَّهُ وَاِنَّ اللّٰهَ لَا يَمْنَعُ ذَا حَقٍّ حَقَّهُ

ಮರ್ದಿತನ ಪ್ರಾರ್ಥನೆಗೆ ಸಿಲುಕದಿರಿ. ಏಕೆಂದರೆ ಅವನು ಅಲ್ಲಾಹನಿಂದ ತನ್ನ ಹಕ್ಕನ್ನು ಬೇಡುತ್ತಾನೆ. ಆ ಹಕ್ಕನ್ನು ಪಡೆಯುವುದರಿಂದ ಅವನು ಯಾರನ್ನೂ ತಡೆಯುವಂತಿಲ್ಲ'ವೆಂದು ಪ್ರವಾದಿ(ಸ) ಹೇಳಿರುವುದಾಗಿ ಅಲೀ(ರ) ವರದಿ ಮಾಡಿದ್ದಾರೆ. (ಮಿಶ್ಕಾತ್)

ಇಂತಹದೇ ಒಂದು ಪ್ರವಾದಿ ವಚನದಲ್ಲಿ, ಮರ್ದಿತನು ಮುಸ್ಲಿಮೇತರನಾಗಿದ್ದರೂ ಸರಿ. ಅವನ ಪ್ರಾರ್ಥನೆಯಿಂದ ಪಾರಾಗಿರಿ ಎಂದು ಹೇಳಲಾಗಿದೆ (ಮನಾವೀ) ಮರ್ದಿತನು ಯಾರೇ ಆಗಿರಲಿ, ಅವನ ಮೇಲೆ ಅತಿರೇಕವಾದಾಗ ಅವನು ಪ್ರಾರ್ಥಿಸಿದರೆ ಅಲ್ಲಾಹನು ಅವನ ಮೊರೆಯನ್ನು ಕೇಳಿ ಅವನಿಗೆ ಖಂಡಿತ ಸಹಾಯ ಮಾಡುತ್ತಾನೆಂದು ಇದರ ಅರ್ಥ.

ಮರ್ದಿತನೊಬ್ಬನು, ಮರ್ದಕನನ್ನು ಎದುರಿಸುವ ಶಕ್ತಿ ತನ್ನಲ್ಲಿಲ್ಲ, ಅಲ್ಲಾಹನೇ ತನಗೆ ಸಹಾಯ ಮಾಡಬಲ್ಲನು, ತನ್ನ ಹಕ್ಕುಗಳನ್ನು ರಕ್ಷಿಸಬಲ್ಲನು ಎಂಬ ಭಾವನೆಯೊಂದಿಗೆ ಮೊರೆಯಿಟ್ಟಾಗ ಅದು ಅವನ ಸನ್ನಿಧಿಗೆ ಅಡೆತಡೆಯಿಲ್ಲದೆ ಕೂಡಲೇ ತಲುಪಿ ಬಿಡುತ್ತದೆ. ಅದನ್ನು ಕೇಳಲು ಅವನ ಬಾಗಿಲು ತೆರೆದಿರುತ್ತದೆ. ಅಲ್ಲಾಹನು ಹಕ್ಕುದಾರನನ್ನು ಅವನ ಹಕ್ಕಿನಿಂದ ಎಂದೂ ವಂಚಿತಗೊಳಿಸುವುದಿಲ್ಲ.

ಇನ್ನೊಂದು ವರದಿಯಲ್ಲಿ ಪ್ರವಾದಿಯವರು(ಸ), ಅಕ್ರಮ ಮಾಡುವುದು ಮಾತ್ರವಲ್ಲ, ಅಕ್ರಮಿಯನ್ನು ಬೆಂಬಲಿಸುವುದು, ಅವನಿಗೆ ಸಹಾಯ ಮಾಡುವುದು ಕೂಡಾ ಅಪರಾಧವೆಂದು ಹೇಳಿ ಕಠಿಣ ಎಚ್ಚರಿಕೆ ನೀಡಿದ್ದಾರೆ. ಔಸ್ ಬಿನ್ ಶುರ್ಜೀಲ್ ಹೇಳುತ್ತಾರೆ:

مَنْ مَّشٰى مَعَ ظَالِمٍ لِيُقَوِّيَهُ وَهُوَ يَعْلَمُ اَنَّهُ ظَالِمٌ فَقَدْ خَرَجَ مِنَ الْاِسْلَامِ (مشكوة : كتاب الادب)

''ಒಬ್ಬನು ಅಕ್ರಮಿಯೆಂದು ತಿಳಿದಿರುತ್ತಾ ಅವನನ್ನು ಬೆಂಬಲಿಸಲು ಅವನೊಂದಿಗೆ ನಡೆದರೆ ಅವನು ಇಸ್ಲಾಮಿನಿಂದಲೇ ಹೊರ ಹೋದನೆಂದು ಪ್ರವಾದಿಯವರು ಹೇಳಿದ್ದಾರೆ.'' (ಮಿಶ್ಕಾತ್)

ಅಕ್ರಮಿಯನ್ನು ಉದ್ದೇಶಪೂರ್ವಕವಾಗಿ ಬೆಂಬಲಿಸುವುದು, ಅಕ್ರಮಿಯ ಬೆಂಬಲಕ್ಕೆ ನಿಲ್ಲುವುದು ಓರ್ವ ಮುಸ್ಲಿಮನಿಗೆ ಹೇಳಿಸಿದ್ದಲ್ಲ ಅಥವಾ ಅದು ವಿಶ್ವಾಸಿಯ ನೀತಿಯಾಗಿರಬಾರದು. ಅಕ್ರಮವನ್ನು ಬೆಂಬಲಿಸಿ ಮನುಷ್ಯ ಸನ್ಮಾರ್ಗದಿಂದ ಭ್ರಷ್ಟನಾಗಬಲ್ಲನೆಂದರ್ಥ.

ಸಮುದಾಯದ ಪ್ರತಿಯೊಬ್ಬನೂ ತಾನು ನ್ಯಾಯ-ನೀತಿಯ ಪ್ರತಿಪಾದಕನೆಂದು ತಿಳಿದಿರಬೇಕು. ಅಕ್ರಮವನ್ನು ಬೆಂಬಲಿಸಿದರೆ ಅವನು ಇಸ್ಲಾಮಿನ ಸ್ಪಷ್ಟ ಶಿಕ್ಷಣಗಳನ್ನು ಉಲ್ಲಂಘಿಸುವವನಾಗಿ ಪರಿಗಣಿಸಲ್ಪಟ್ಟು ಅಲ್ಲಾಹನ ಕೋಪಕ್ಕೆ ಪಾತ್ರವಾಗುವನು. ಮುಸ್ಲಿಮರು ಎಲ್ಲೇ, ಯಾವ ಸಮಾಜದಲ್ಲೇ ಇದ್ದರೂ ಅಕ್ರಮ-ಅತ್ಯಾಚಾರಗಳಿಂದ ದೂರವಿರಬೇಕು. ಯಾರ ಮೇಲೂ ಕೈ ಮಾಡಬಾರದು. ಅಕ್ರಮಿಯನ್ನು ಬೆಂಬಲಿಸಬಾರದು. ಅವರು ಅಕ್ರಮದ ವಿರುದ್ಧ ಹೋರಾಡುವವರಾಗಿರಬೇಕು.

ಮಾನವ ಹಕ್ಕುಗಳ ಗೌರವ

ಮಾನವನಿಗೆ ಕೆಲವು ಮೂಲಭೂತ ಹಕ್ಕುಗಳಿವೆ. ಇದರಲ್ಲಿ ಬದುಕುವ, ಸಂಪಾದನೆ ಮಾಡುವ, ಆಸ್ತಿ-ಪಾಸ್ತಿ ಹೊಂದಿರುವ ಮತ್ತದನ್ನು ತನ್ನಿಷ್ಟದಂತೆ ವ್ಯಯಿಸುವ ಮತ್ತು ಮಾನ-ಮರ್ಯಾದೆಯೊಂದಿಗೆ ಜೀವಿಸುವ ಹಕ್ಕುಗಳು ಪ್ರಮುಖವಾಗಿವೆ. ಈ ಹಕ್ಕುಗಳಿಲ್ಲದಿದ್ದರೆ ಅವನ ಅಸ್ತಿತ್ವವೇ ಅಪಾಯದಲ್ಲಿರುವುದು. ಅವನು ಬದುಕಿದ್ದರೂ ಪ್ರಾಣಿಗಳಂತೆ ಜೀವಿಸಲು ನಿರ್ಬಂಧಿತನಾಗುವನು. ಆ ಎಲ್ಲ ಹಕ್ಕುಗಳನ್ನು ಇಸ್ಲಾಮ್ ಗೌರವಿಸುತ್ತದೆ. ಸಮಾಜದಲ್ಲಿ ಅವುಗಳ ರಕ್ಷಣೆಯ ವಾತಾವರಣ ಸೃಷ್ಟಿಸುತ್ತದೆ. ವಿಶ್ವಾಸಿಗಳು ಪ್ರತಿಯೊಬ್ಬನೂ ಈ ಹಕ್ಕುಗಳ ರಕ್ಷಕ ಮತ್ತು ಮೇಲ್ವಿಚಾರಕನಾಗಿರಬೇಕೆಂದೂ ವಿಶ್ವಾಸಿಗಳ ಕೈಯು ಅಕ್ರಮ-ಅನ್ಯಾಯದ ರಕ್ತದಲ್ಲಿ ತೋಯಬಾರದು ಮತ್ತು ಜನರ ಮಾನ-ಮರ್ಯಾದೆಗಳು ಸುರಕ್ಷಿತವಾಗಿರಬೇಕೆಂದೂ ಅದು ಬಯಸುತ್ತದೆ.

وَالَّذِيْنَ لَا يَدْعُوْنَ مَعَ اللّٰهِ اِلٰهًا اٰخَرَ وَلَا يَقْتُلُوْنَ النَّفْسَ الَّتِيْ حَرَّمَ اللّٰهُ اِلَّا
بِالْحَقِّ وَلَا يَزْنُوْنَ ۚ وَمَنْ يَّفْعَلْ ذٰلِكَ يَلْقَ اَثَامًا ﴿٦٨﴾

''ಅವರು ಅಲ್ಲಾಹನ ಹೊರತು ಇತರ ಯಾವ ಆರಾಧ್ಯನನ್ನೂ ಪ್ರಾರ್ಥಿಸುವುದಿಲ್ಲ, ಅಲ್ಲಾಹನು ಗೌರವಿಸಿರುವ ಯಾವ ಜೀವವನ್ನೂ ಅನ್ಯಾಯವಾಗಿ ಸಂಹರಿಸುವುದಿಲ್ಲ, ವ್ಯಭಿಚಾರವೆಸಗುವುದೂ ಇಲ್ಲ. ಈ ಕಾರ್ಯಗಳನ್ನು ಯಾರೇ ಮಾಡಿದರೂ ಅವನು ತನ್ನ ಪಾಪಗಳ ಫಲವನ್ನು ಪಡೆಯುವನು.'' (ಪವಿತ್ರ ಕುರ್‌ಆನ್, 25: 68)

ಅವರು ಅಕ್ರಮ ಸಂಪತ್ತನ್ನು ಶೇಖರಿಸುವುದಿಲ್ಲ, ಅವರ ಸಂಪತ್ತಿನಲ್ಲಿ ಬೇಡುವವರ, ನಿರ್ಗತಿಕರ ಮತ್ತು ವಂಚಿತರ ನಿರ್ದಿಷ್ಟ ಹಕ್ಕು ಇರುತ್ತದೆ. ಅದರಲ್ಲಿ ಅವರನ್ನು ಪಾಲುದಾರರೆಂದು ಭಾವಿಸುತ್ತಾರೆ.

وَالَّذِيْنَ فِيْٓ اَمْوَالِهِمْ حَقٌّ مَّعْلُوْمٌ ﴿٢٤﴾ لِّلسَّآئِلِ وَالْمَحْرُوْمِ ﴿٢٥﴾

''ಅವರ ಸಂಪತ್ತುಗಳಲ್ಲಿ ಒಂದು ನಿಶ್ಚಿತ ಹಕ್ಕಿದೆ. ಬೇಡುವವನಿಗೆ ಮತ್ತು ವಂಚಿತನಿಗೆ.''

(ಪವಿತ್ರ ಕುರ್‌ಆನ್, 70: 24-25)

ಮನುಷ್ಯನಿಗೆ ತಂದೆ, ತಾಯಿ, ಮಕ್ಕಳು ಮತ್ತು ಕುಟುಂಬದವರೊಂದಿಗೆ ಹಾರ್ದಿಕ ಸಂಬಂಧವಿರುತ್ತದೆ, ಕೆಲವೊಮ್ಮೆ ಅವರನ್ನು ತನಗಿಂತಲೂ ಹೆಚ್ಚು ಪ್ರೀತಿಸುತ್ತಾನೆ. ಅವರ

ಕಲ್ಯಾಣಕ್ಕಾಗಿ ಮತ್ತು ಅವರನ್ನು ಸರ್ವ ಸಂಕಷ್ಟಗಳಿಂದ ರಕ್ಷಿಸುವುದಕ್ಕಾಗಿ ಪ್ರಯತ್ನಿಸುವುದು ಅವನ ಹಕ್ಕೂ, ನೈತಿಕ ಮತ್ತು ಕಾನೂನು ಪರ ಕರ್ತವ್ಯವೂ ಆಗಿರುತ್ತದೆ. ಅದೇ ರೀತಿ ಸಮಾಜದ ಹತ್ತಿರದ ಮತ್ತು ದೂರದವರ ಹಕ್ಕುಗಳೂ ಇರುತ್ತವೆ. ಒಬ್ಬ ವಿಶ್ವಾಸಿಯು ತನ್ನ ಈಮಾನಿನ ಬೇಡಿಕೆಯಂತೆ ಅವರೆಲ್ಲರ ಹಕ್ಕುಗಳನ್ನು ನೀಡಬೇಕು. ತನ್ನ ಸಂಪತ್ತನ್ನು ಅವರಿಗಾಗಿ ಖರ್ಚು ಮಾಡಬೇಕು. ಕುರ್‌ಆನ್ ಒಳಿತಿನ ಮಾರ್ಗದ ಒಂದು ವಿಶೇಷತೆಯನ್ನು ಈ ರೀತಿ ಹೇಳುತ್ತದೆ.

وَاٰتَى الْمَالَ عَلٰى حُبِّهٖ ذَوِى الْقُرْبٰى وَالْيَتٰمٰى وَالْمَسٰكِيْنَ وَابْنَ
السَّبِيْلِ ۙ وَالسَّآئِلِيْنَ وَفِى الرِّقَابِ ۚ وَاَقَامَ الصَّلٰوةَ وَاٰتَى الزَّكٰوةَ ۚ

''ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯ ವಿಮೋಚನೆಗಾಗಿಯೂ ವ್ಯಯಿಸುವುದೂ ನಮಾಝನ್ನು ಸಂಸ್ಥಾಪಿಸುವುದೂ ಝಕಾತನ್ನು (ಕಡ್ಡಾಯ ದಾನವನ್ನು) ನೀಡುವುದೂ'' (ಪವಿತ್ರ ಕುರ್‌ಆನ್, 2: 177)

ತನ್ನ ಆಪ್ತೇಷ್ಟರ ಮಾತ್ರವಲ್ಲ, ಸಮಾಜದ ದುರ್ಬಲರು, ಬಡವರು, ಅನಾಥರು, ಪ್ರಯಾಣಿಕರು, ಅಪೇಕ್ಷಿತರು, ನಿರ್ಗತಿಕರು, ಅಧೀನರು ಮತ್ತು ಕೈ ಕೆಳಗಿನವರ ಹಕ್ಕುಗಳನ್ನು ರಕ್ಷಿಸುವ ಮತ್ತು ಜೀವನಾಧಾರದಲ್ಲಿ ಅವರ ಹಕ್ಕುಗಳನ್ನು ಅಂಗೀಕರಿಸುವ ಮತ್ತು ಅದಕ್ಕಾಗಿ ಪ್ರಯತ್ನಿಸುವ ಒಬ್ಬನು ಇತರರ ಹಕ್ಕುಗಳನ್ನು ಕಸಿಯಬಹುದೆಂದು ಊಹಿಸಲು ಸಾಧ್ಯವೆ?

ಒಬ್ಬ ಮುಸ್ಲಿಮನ ವರ್ತನೆಯು ಕೇವಲ ತನ್ನ ಕುಟುಂಬ, ಗೋತ್ರ ಮತ್ತು ಜನಾಂಗದೊಂದಿಗೆ ಮಾತ್ರ ಇರುವುದಿಲ್ಲ, ಸಮಾಜದ ಎಲ್ಲ ವರ್ಗಗಳೊಂದಿಗೂ ಇರುತ್ತದೆ. ಅವನು ತನ್ನ ಧರ್ಮದವನಾಗಿರಬಹುದು ಅಥವಾ ಅನ್ಯ ಧರ್ಮೀಯನೂ ಆಗಿರಬಹುದು.

ಪ್ರತಿರೋಧದ ಹಕ್ಕು

ತನ್ನ ಮೂಲಭೂತ ಹಕ್ಕುಗಳನ್ನು ರಕ್ಷಿಸುವುದು, ಅದರಲ್ಲಿ ಯಾರಿಗೂ ಹಸ್ತಕ್ಷೇಪಕ್ಕೆ ಅವಕಾಶ ನೀಡದಿರುವುದು, ತನ್ನ ಜೀವ, ಸೊತ್ತು, ಮಾನ-ಮರ್ಯಾದೆಗಳ ಮೇಲೆ ಕೈಮಾಡಿದರೆ ಪ್ರತಿಭಟಿಸುವುದು, ತನ್ನ ಪತ್ನಿ, ಮಕ್ಕಳು ಮತ್ತು ಕುಟುಂಬದವರ ಮೇಲೆ ಯಾರೂ ಅಕ್ರಮ-ಅನ್ಯಾಯವೆಸಗದಂತೆ ನೋಡಿಕೊಳ್ಳುವುದು ಮತ್ತು ಅವುಗಳನ್ನು ಯಾವ ಬೆಲೆ ತೆತ್ತಾದರೂ ರಕ್ಷಿಸುವುದು ಮಾನವನ ಪ್ರಕೃತಿದತ್ತವಾದ ಹಕ್ಕಾಗಿದೆಯೆಂದು ಪ್ರತಿಯೊಂದು ನಾಗರಿಕ ಸಮಾಜ ಮತ್ತು ಸುಸಂಸ್ಕೃತ ರಾಷ್ಟ್ರದ ಸಂವಿಧಾನವು ಅಂಗೀಕರಿಸುತ್ತದೆ. ಕೆಲವೊಮ್ಮೆ ತನ್ನ ಮತ್ತು ತನ್ನ ಕುಟುಂಬದವರ ರಕ್ಷಣೆ ಮನುಷ್ಯನಿಗೆ ಕಡ್ಡಾಯವಾಗುತ್ತದೆ. ಹಾಗೆಯೇ ಒಂದು ಸುಸಂಸ್ಕೃತ ಸಮಾಜದಲ್ಲಿ ಮರ್ದಿತನನ್ನು ರಕ್ಷಿಸುವುದು, ಮರ್ದಕನಿಗೆ ಎದಿರೇಟು ನೀಡುವುದು ಪ್ರತಿಯೊಬ್ಬ ನಾಗರಿಕನ ಹಕ್ಕಾಗಿದೆ. ಡಕಾಯಿತನೊಬ್ಬನು ಒಂದು ಮನೆಗೆ ನುಗ್ಗಿ, ಮನೆಯವರ ಮೇಲೆ ಆಕ್ರಮಣ ನಡೆಸಿ ಅಲ್ಲಿನ ಸೊತ್ತು-ವಿತ್ತಗಳನ್ನು ಲೂಟಿ ಮಾಡ ತೊಡಗಿದರೆ ಮನೆಯ ಯಜಮಾನನಿಗೆ ಅದನ್ನು ರಕ್ಷಿಸುವ ಅಧಿಕಾರವಿದೆ. ಅವನ ನೆರವಿಗೆ ಬಂದು, ಅಕ್ರಮ-ಅತ್ಯಾಚಾರದಿಂದ ಅವನನ್ನು ರಕ್ಷಿಸುವುದು ನೆರೆಹೊರೆಯವರ

ಕರ್ತವ್ಯವಾಗಿದೆ. ಪ್ರತಿಭಟಿಸುವಾಗ ಒಂದು ವೇಳೆ ಆಕ್ರಮಿಯು ಕೊಲ್ಲಲ್ಪಟ್ಟರೆ ಅವನ ಮೇಲೆ ಯಾವ ಹೊಣೆಗಾರಿಕೆಯೂ ಇಲ್ಲ. ಏಕೆಂದರೆ ಆಕ್ರಮಣಕಾರಿಯು ಅಪರಾಧಿಯಾಗಿದ್ದಾನೆ. ಪ್ರತಿಭಟಿಸುವವನು ಯಾವ ಅಪರಾಧವನ್ನೂ ಮಾಡಲಿಲ್ಲ. ಅವನು ಅವನನ್ನು ಅಪರಾಧದಿಂದ ತಡೆಯಲು ಪ್ರಯತ್ನಿಸಿದ್ದನು. ಈ ಪ್ರಯತ್ನದಲ್ಲಿ ಪ್ರತಿರೋಧಿಸುವವನು ಕೊಲ್ಲಲ್ಪಟ್ಟರೆ ಅವನು ಅನುಕಂಪಕ್ಕೆ ಅರ್ಹವಾಗಿದ್ದಾನೆ. ಅವನಿಗೆ ನೈತಿಕ ಮತ್ತು ಕಾನೂನಿನ ಸಹಾಯ ಅಗತ್ಯವಾಗಿದೆ.

ಪ್ರತಿರೋಧದ ಈ ಹಕ್ಕನ್ನು ಲೋಕದ ಎಲ್ಲ ಕಾನೂನುಗಳೂ ಅಂಗೀಕರಿಸುತ್ತವೆ. ಇಸ್ಲಾಮ್ ಕೂಡಾ ಅದನ್ನು ಒಂದು ಮೂಲಭೂತ ಹಕ್ಕಾಗಿ ಪರಿಗಣಿಸಿದೆ. ಅವರ ದೃಷ್ಟಿಯಲ್ಲಿ ಮಾನವನಿಗೆ ತನ್ನ ಜೀವ, ಸೊತ್ತು, ಮಾನ-ಮರ್ಯಾದೆ ಹಾಗೂ ಕುಟುಂಬದ ರಕ್ಷಣೆಯ ಪೂರ್ಣ ಹಕ್ಕಿದೆ. ಈ ಮಾರ್ಗದಲ್ಲಿ ಓರ್ವ ಮುಸ್ಲಿಮನ ಹತ್ಯೆಯಾದರೆ ಅವನಿಗೆ 'ಶಹೀದ್' (ಹುತಾತ್ಮ) ನ ಸ್ಥಾನ ಲಭಿಸುವುದು. ಪ್ರವಾದಿ ವಚನಗಳು ಇದನ್ನು ಸ್ಪಷ್ಟ ಪಡಿಸುತ್ತದೆ. ಪ್ರವಾದಿ(ಸ)ಯವರಿಂದ ಕೇಳಿರುವುದಾಗಿ ಸಈದ್ ಬಿನ್ ಝೈದ್ ಹೇಳುತ್ತಾರೆ–

مَنْ قُتِلَ دُوْنَ مَالِهِ فَهُوَ شَهِيْدٌ وَمَنْ قُتِلَ دُوْنَ دِيْنِهِ فَهُوَ شَهِيْدٌ وَمَنْ قُتِلَ دُوْنَ دَمِهِ فَهُوَ شَهِيد وَمَنْ قُتِلَ دُوْنَ اَهْلِهِ فَهُوَ شَهِيْدٌ (ترمذی کتاب الديات)

''ತನ್ನ ಸೊತ್ತಿನ ರಕ್ಷಣೆಯಲ್ಲಿ ಕೊಲ್ಲಲ್ಪಟ್ಟವನು ಹುತಾತ್ಮನಾಗಿದ್ದಾನೆ. ತನ್ನ ಧರ್ಮದ ರಕ್ಷಣೆಯಲ್ಲಿ ಕೊಲ್ಲಲ್ಪಟ್ಟವನು ಹುತಾತ್ಮನಾಗಿದ್ದಾನೆ. ತನ್ನ ಜೀವ ರಕ್ಷಣೆಯಲ್ಲಿ ಕೊಲ್ಲಲ್ಪಟ್ಟವನು ಹುತಾತ್ಮನಾಗಿದ್ದಾನೆ. ತನ್ನ ಮನೆ ಮಂದಿಯ ರಕ್ಷಣೆಯಲ್ಲಿ ಕೊಲ್ಲಲ್ಪಟ್ಟವನೂ ಹುತಾತ್ಮನಾಗಿದ್ದಾನೆ.'' (ತಿರ್ಮಿದಿ)

ಪ್ರತಿರೋಧದ ವಿಷಯದಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು.

1) ಜನರ ಜೀವ, ಸೊತ್ತು ಮತ್ತು ಮಾನದ ರಕ್ಷಣೆಯು ಮೂಲಭೂತವಾಗಿ ರಾಷ್ಟ್ರದ ಕರ್ತವ್ಯವಾಗಿದೆ. ಒಬ್ಬ ಪ್ರಜೆ ಅಥವಾ ಪ್ರಜೆಗಳ ಮೇಲೆ ಹಠಾತ್ ದಾಳಿ ನಡೆದಾಗ ಸರಕಾರಕ್ಕೆ ತನ್ನ ಕರ್ತವ್ಯವನ್ನು ನಿರ್ವಹಿಸುವ ಅವಕಾಶ ಸಿಗದಿದ್ದರೆ ಅಥವಾ ಅದು ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದರೆ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಗುತ್ತದೆ. ಏಕೆಂದರೆ ಮನುಷ್ಯನಿಗೆ ತನ್ನ ಜೀವ, ಸೊತ್ತು ಅಥವಾ ಮೂಲಭೂತ ಹಕ್ಕುಗಳಿಗೆ ಅಪಾಯ ಎದುರಾಗುವ ಸಂದರ್ಭದಲ್ಲಿ, ಮೊದಲು ಸರಕಾರಕ್ಕೆ ಅದರ ಕರ್ತವ್ಯವನ್ನು ನೆನಪಿಸಿ, ಅದರ ಸಹಾಯ ಪಡೆಯಲು ಪ್ರಯತ್ನಿಸಬೇಕು. ಆದರೆ ಅದಕ್ಕೆ ಅವಕಾಶವಿಲ್ಲದಿದ್ದರೆ ಅಥವಾ ಸರಕಾರವು ನಿರ್ಲಕ್ಷ್ಯ ವಹಿಸಿದರೆ ಅವನಿಗೆ ತನ್ನನ್ನು ರಕ್ಷಿಸಿಕೊಳ್ಳುವ ಪೂರ್ಣ ಅಧಿಕಾರವಿದೆ.

2) ರಕ್ಷಣೆಯ ವೇಳೆ ಬಲಪ್ರಯೋಗವು ಕನಿಷ್ಠ ಆಗುವಂತೆ ನೋಡಿಕೊಳ್ಳಬೇಕು. ದಾಳಿಕೋರನು ಕೇವಲ ಬೆದರಿಕೆ ಅಥವಾ ಬೊಬ್ಬೆ ಹಾಕುವುದರಿಂದ ಓಡಿಹೋಗುವುದಾದರೆ ಅವನನ್ನು ಹೊಡೆದು ಗಾಯ ಗೊಳಿಸುವುದೋ ವಧಿಸಲು ಪ್ರಯತ್ನಿಸುವುದೋ ಸಲ್ಲದು. ಕೊಲ್ಲುವುದರ ಹೊರತು ಬೇರೆ ದಾರಿಯಿಲ್ಲದಿರುವಾಗ ಕೊಲ್ಲಲೂಬಹುದು.

ಇದು ರಕ್ಷಣೆಯ ಅಂಗೀಕೃತ ಹಕ್ಕಾಗಿದೆ. ಇದರಿಂದ ಸಮಾಜದ ಅತ್ಯಂತ ದುರ್ಬಲ ವ್ಯಕ್ತಿಗೂ ತನ್ನ ಜೀವ, ಸೊತ್ತು ಹಾಗೂ ಪತ್ನಿ ಮಕ್ಕಳು ಆಕ್ರಮಿಗಳ ಔದಾರ್ಯವನ್ನು

ಅವಲಂಬಿಸಿಲ್ಲವೆಂಬ ಆತ್ಮಸ್ಥೈರ್ಯವುಂಟಾಗುತ್ತದೆ. ಅಗತ್ಯದ ಸಂದರ್ಭದಲ್ಲಿ ಅವನಿಗೆ ಸರಕಾರದ ಅಥವಾ ಹತ್ತಿರದ ಯಾರಾದರೂ ಸಹಾಯಕ್ಕೆ ಸಿಗದಿದ್ದರೂ ಅವನು ತನ್ನದೇ ಬಲದಿಂದ ಹಾಗೂ ತನ್ನ, ತನ್ನ ಸೊತ್ತಿನ ಮತ್ತು ಕುಟುಂಬದ ರಕ್ಷಣೆ ಮಾಡಬಲ್ಲನು. ಒಬ್ಬ ಮುಸ್ಲಿಮನು ಅತ್ಯಂತ ನಿರ್ಣಾಯಕ ಸ್ಥಿತಿಯಲ್ಲಿ ತನ್ನ ಈ ಹಕ್ಕನ್ನು ಪ್ರಯೋಗಿಸಿದರೆ ಅದು ಇಸ್ಲಾಮಿನ ಶಿಕ್ಷಣಕ್ಕೆ ಅನುಗುಣವಾಗಿರುವುದು. ದೇಶದ ಕಾನೂನನ್ನು ಅವರು ಉಲ್ಲಂಘಿಸಿದಂತಾಗುವುದಿಲ್ಲ.

ಪ್ರತೀಕಾರದ ಹಕ್ಕು

ಇಸ್ಲಾಮ್ ಅಕ್ರಮ-ಅತ್ಯಾಚಾರವನ್ನು ಯಾವ ಸ್ಥಿತಿಯಲ್ಲೂ ಸಹಿಸುವುದಿಲ್ಲ. ಅದನ್ನು ಎಲ್ಲ ರೀತಿಯಲ್ಲೂ ತಡೆಗಟ್ಟ ಬಯಸುತ್ತದೆ. ಆದ್ದರಿಂದಲೇ ಒಬ್ಬನ ಮೇಲೆ ಅನ್ಯಾಯವಾದರೆ ಅಥವಾ ಅವನಿಗೇನಾದರೂ ಹಾನಿಯುಂಟಾದರೆ ಅಪರಾಧಿಯ ಮೇಲೆ ಸೇಡು ತೀರಿಸುವ ಅಧಿಕಾರ ನೀಡುತ್ತದೆ. ಅತ್ಯಂತ ನಿರ್ಣಾಯಕ ಮತ್ತು ದುಸ್ತರ ಸ್ಥಿತಿಯಲ್ಲಿ ಮಾನವನ ಈ ಹಕ್ಕನ್ನು ಘೋಷಿಸಿದೆ.

ಮಕ್ಕಾದಲ್ಲಿ ಮುಸ್ಲಿಮರು ಎಗ್ಗಿಲ್ಲದ ಅತಿರೇಕಗಳಿಗೆ ಬಲಿಯಾಗಿದ್ದ ಮತ್ತು ಕಠಿಣ ಸತ್ವ ಪರೀಕ್ಷೆಗಳಲ್ಲಿ ಬದುಕು ಸಾಗಿಸುತ್ತಿದ್ದ ಕಾಲದಲ್ಲಿ ಅಶ್ಶೂರಾ ಅಧ್ಯಾಯ ಅವತೀರ್ಣಗೊಂಡಿತು. ಅದರಲ್ಲಿ ಮುಸ್ಲಿಮರು ಅಲ್ಲಾಹನ ಮೇಲೆ ವಿಶ್ವಾಸ ಮತ್ತು ಭರವಸೆಯಿರಿಸುತ್ತಾರೆ, ಮಹಾ ಪಾಪಗಳಿಂದ ದೂರವಿರುತ್ತಾರೆ, ಯಾರಾದರೂ ದುರ್ವರ್ತನೆ ತೋರಿ, ಅವರು ಕೆರಳಿದಾಗಲೂ ಮತ್ತು ಅವರಿಗೆ ಕೋಪ ಬಂದಾಗಲೂ ಅವರನ್ನು ಕ್ಷಮಿಸಿ ಬಿಡುತ್ತಾರೆ, ಅವರು ಅಲ್ಲಾಹನ ಕರೆಗೆ ಓಗೊಡುತ್ತಾರೆ, ನಮಾಝ್ ಸಂಸ್ಥಾಪಿಸುತ್ತಾರೆ, ತಮ್ಮ ವ್ಯವಹಾರಗಳನ್ನು ಸಮಾಲೋಚನೆಯ ಮೂಲಕ ನಿರ್ವಹಿಸುತ್ತಾರೆ. ದೇವ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ ಎಂದು ಹೇಳಿ ಅವರನ್ನು ಪ್ರಶಂಸಿಸಲಾಗಿದೆ. ಈ ಗುಣಗಳನ್ನು ಪ್ರಸ್ತಾಪಿಸಿದ ಬಳಿಕ,

وَالَّذِيْنَ اِذَآ اَصَابَهُمُ الْبَغْىُ هُمْ يَنْتَصِرُوْنَ ‎(الشورىٰ ٣٩)

''ಮತ್ತು ಅವರ ಮೇಲೆ ಅತಿರೇಕವೆಸಗಲ್ಪಟ್ಟರೆ ಅದನ್ನು ಪ್ರತಿರೋಧಿಸುತ್ತಾರೆ.''(ಪವಿತ್ರ ಕುರ್‌ಆನ್, 42: 39) ಎಂದು ಹೇಳಲಾಗಿದೆ. ಇದರಿಂದ ಕೆಲವು ವಿಷಯಗಳು ವ್ಯಕ್ತವಾಗುತ್ತದೆ.

ಅಲ್ಲಾಹನ ಸಜ್ಜನ ದಾಸರು ದುರ್ಬಲರು, ಅಸಹಾಯಕರು, ಹೇಡಿಗಳು ಎಂಬ ವಿಚಾರ ತಪ್ಪು. ಅವರನ್ನು ಯಾರು ಬೇಕಾದರೂ ಅಕ್ರಮಕ್ಕೆ ಗುರಿ ಪಡಿಸಬಹುದು ಎಂಬುದನ್ನು ಇಲ್ಲಿ ಖಂಡಿಸಲಾಗಿದೆ. ದೇವಭಯವುಳ್ಳ ಸತ್ಯನಿಷ್ಠ ಜನರು ಅಕ್ರಮಕ್ಕೆ ಹೆದರುವುದಿಲ್ಲ. ಅವರು ಅಕ್ರಮಿಯನ್ನು ಎದುರಿಸುತ್ತಾರೆ. ಯಾರು ಬೇಕಾದರೂ ನುಂಗಿ ಬಿಡುವಷ್ಟು ಮೆತ್ತಗಿನ ತುತ್ತಾಗಿರುವುದಿಲ್ಲ. ಯಾರಾದರೂ ಅವರ ಮೇಲೆ ಅತಿರೇಕವೆಸಗಿದಾಗ ಪ್ರತ್ಯುತ್ತರ ನೀಡುತ್ತಾರೆ. ಇದು ಸಜ್ಜನಿಕೆ ಮತ್ತು ದೇವಭಯಕ್ಕೆ ವಿರುದ್ಧವಲ್ಲ. ಸಮಾಜದಲ್ಲಿ ಸಜ್ಜನರು ಅಸಹಾಯಕರು, ಮತ್ತು ದುರ್ಬಲರಾಗಿದ್ದಾರೆ, ಯಾವುದೇ ಅತಿರೇಕಕ್ಕೆ ಉತ್ತರಿಸುವ ಸ್ಥಿತಿಯಲ್ಲಿರುವುದಿಲ್ಲವೆಂಬ ಭಾವನೆ ವ್ಯಾಪಕವಾದರೆ, ವಿರೋಧಿ ಸಮಾಜದಲ್ಲಿ ಅವರು ಬದುಕುವುದು ಸಾಧ್ಯವಿಲ್ಲ. ಸಜ್ಜನರು ಮತ್ತು ದೇವಭಯವುಳ್ಳವರು ದುರ್ಬಲರೂ ಅಸಹಾಯಕರೂ ಆಗಿರುವುದು ಅನಿವಾರ್ಯವೆಂಬ ಭಾವನೆಯು ಸಮಾಜದ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರುವುದು.

ಪ್ರತೀಕಾರವೆಂದರೆ ಅತಿರೇಕವಾದರೆ ಮುಯ್ಯಿ ತೀರಿಸುವುದು. ಯಾರ ಮೇಲಾದರೂ ಅಕ್ರಮವಾದರೆ ಮಾತ್ರ ಈ ಪ್ರಶ್ನೆ ಏಳುತ್ತದೆ. ನಿರಪರಾಧಿಗಳ ಮತ್ತು ಅಮಾಯಕರ ಮೇಲೆ ಕೈ ಮಾಡುವುದು ಪ್ರತೀಕಾರವಲ್ಲ, ಅದು ಅಕ್ರಮವಾಗಿದೆ. ವಿಶ್ವಾಸಿಗಳು ಅದರಿಂದ ಮುಕ್ತವಾಗಿರಬೇಕು. ಆದರೆ ಅವರ ಮೇಲೆ ಆಕ್ರಮಣವಾದರೆ ಅವರಿಗೆ ಪ್ರತೀಕಾರವೆಸಗುವ ಹಕ್ಕಂತೂ ಇದೆ. ಅದನ್ನು ಪ್ರಯೋಗಿಸುವುದರಲ್ಲಿ ತಪ್ಪಿಲ್ಲ. ಕೆಲವೊಂದು ಸಂದರ್ಭದಲ್ಲಿ ಇದು ಅಪೇಕ್ಷಣೀಯವಾಗಿದೆ.

ಪ್ರತೀಕಾರದಲ್ಲಿ ಮೇರೆಗಳ ಪಾಲನೆ

ಇಸ್ಲಾಮ್ ಪ್ರತೀಕಾರದ ಹಕ್ಕನ್ನು ಮಾನ್ಯ ಮಾಡುತ್ತದೆ. ಜೊತೆಗೇ ಅಕ್ರಮ-ಅತ್ಯಾಚಾರ ಎಷ್ಟಾಗಿದೆಯೋ ಅಷ್ಟೇ ಮಟ್ಟದ ಪ್ರತೀಕಾರ ತೀರಿಸಬೇಕೆಂದು ಕಟ್ಟಾಜ್ಞೆ ನೀಡಿದೆ. ಅದನ್ನು ಮೀರುವುದು ಅಕ್ರಮವಾಗಿದ್ದು ಅಕ್ಷಮ್ಯ ಅಪರಾಧವಾಗಿದೆ.

ಕುರ್‌ಆನ್ ಇದನ್ನು ಕಿಸಾಸ್(ಪ್ರತೀಕಾರ)ನ ನಿಯಮವೆಂದಿದೆ. ಇದು ಸಮಾನತೆಯ ಕಲ್ಪನೆಯ ಆಧಾರದಲ್ಲಿದೆ. ಅದರ ಪ್ರಕಾರ, ಒಬ್ಬನ ಬದಲಿಗೆ ಹತ್ತು ಮಂದಿಯನ್ನು ಕೊಲ್ಲುವುದು, ಮಹಿಳೆಯನ್ನು ಕೊಂದದ್ದಕ್ಕೆ ಯಾರಾದರೂ ಅಮಾಯಕ ಪುರುಷನನ್ನು ವಧಿಸುವುದು, ಗುಲಾಮನು ಕೊಂದರೆ ಅವನ ಬದಲಿಗೆ ಸ್ವತಂತ್ರ ಪುರುಷನನ್ನು ಕೊಲ್ಲುವುದು ತಪ್ಪಾಗುತ್ತದೆ.

''ಓ ಸತ್ಯವಿಶ್ವಾಸಿಗಳೇ, ನಿಮಗೆ ಕೊಲೆಯ ಮೊಕದ್ದಮೆಗಳಲ್ಲಿ ಪ್ರತೀಕಾರವನ್ನು ಶಾಸನಗೊಳಿಸಲಾಗಿದೆ. ಸ್ವತಂತ್ರನು ವಧಿಸಿದ್ದರೆ ಆ ಸ್ವತಂತ್ರನೊಂದಿಗೇ ಸೇಡು ತೀರಿಸಬೇಕು. ಗುಲಾಮನು ಘಾತಕನಾದರೆ ಗುಲಾಮನೇ ವಧಿಸಲ್ಪಡಬೇಕು- ಮತ್ತು ಸ್ತ್ರೀಯು ಈ ಅಪರಾಧವೆಸಗಿದರೆ ಆ ಸ್ತ್ರೀಯೊಂದಿಗೇ ಪ್ರತೀಕಾರವೆಸಗಬೇಕು. (ಪವಿತ್ರ ಕುರ್‌ಆನ್, 2: 178) ಈ ಕಾನೂನಿನ ಕೆಲವು ವಿಧಿಗಳನ್ನು ತೌರಾತ್‌ನಿಂದ ಉದ್ಧರಿಸಿ ಹೇಳಲಾಗಿದೆ. **''ಜೀವಕ್ಕೆ ಜೀವ, ಕಣ್ಣಿಗೆ ಕಣ್ಣು, ಮೂಗಿಗೆ ಮೂಗು, ಕಿವಿಗೆ ಕಿವಿ, ಹಲ್ಲಿಗೆ ಹಲ್ಲು ಮತ್ತು ಎಲ್ಲ ಗಾಯಗಳಿಗೆ ಸರಿ ಸಮಾನ ಪ್ರತೀಕಾರವೆಂದು ಯಹೂದಿಯರಿಗೆ ನಾವು ತೌರಾತಿನಲ್ಲಿ ಆದೇಶಿಸಿದ್ದೆವು. ಯಾರಾದರೂ ಪ್ರತೀಕಾರವನ್ನು 'ದಾನ' ಮಾಡಿದರೆ ಅದು ಅವನ ಪಾಲಿಗೆ ಪ್ರಾಯಶ್ಚಿತ್ತವಾಗುವುದು. ಅಲ್ಲಾಹನಿಂದ ಅವತೀರ್ಣಗೊಂಡ ಕಾನೂನಿನ ಪ್ರಕಾರ ತೀರ್ಮಾನ ಮಾಡದವರೇ ಅಕ್ರಮಿಗಳು.''(ಪವಿತ್ರ ಕುರ್‌ಆನ್, 5: 45)**. ಅದರಲ್ಲಿ, ಒಬ್ಬನ ಅಪರಾಧಕ್ಕೆ ಇನ್ನೊಬ್ಬನನ್ನು ಹಿಡಿಯಲಾಗದು ಎಂದು ಸ್ಪಷ್ಟಪಡಿಸಲಾಗಿದೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಅದರಲ್ಲಿ ಶ್ರೇಷ್ಠ-ಅಧಮ ಎಂಬ ವ್ಯತ್ಯಾಸವಿಲ್ಲ. ಅದೇ ರೀತಿ, ಒಬ್ಬನು ಸಣ್ಣ ಅಥವಾ ದೊಡ್ಡ ಅಪರಾಧವೆಸಗಿದ್ದರೆ ಅವನು ಮಾಡಿದುದಕ್ಕಿಂತ ಹೆಚ್ಚು ಶಿಕ್ಷೆಯನ್ನು ನೀಡಲಾಗದು.

ಪ್ರತೀಕಾರದ ಹಕ್ಕಿನ ಕುರಿತು ಇಸ್ಲಾಮ್ ಕೆಲವು ಮೇರೆಗಳನ್ನೂ ಶಿಷ್ಟಾಚಾರಗಳನ್ನೂ ನಿರ್ಣಯಿಸಿದೆ. ಅದನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಹೇಳಿದೆ. ಅದರ ವಿವರಗಳು ಕುರ್‌ಆನ್, ಹದೀಸ್ ಮತ್ತು ಶರೀಅತ್‌ನ ವಿದ್ವಾಂಸರ ಬಳಿ ಸಿಗುತ್ತವೆ. ಕೆಲವು ಅಗತ್ಯದ ಅಂಶಗಳನ್ನು ಇಲ್ಲಿ ಕೊಡಲಾಗಿದೆ.

1. ಅತಿರೇಕಕ್ಕೆ ಕೂಡಲೇ ಪ್ರತಿಕ್ರಿಯಿಸುವ ಅಧಿಕಾರವಿದೆ. ಆದರೆ ಎಷ್ಟು

ಅತಿರೇಕವಾಗಿದೆಯೋ ಅಷ್ಟೇ ಆಗಿರಬೇಕು. ಒಬ್ಬನು ಕೆನ್ನೆಗೆ ಹೊಡೆದರೆ ಅವನ ಕೈ ಕಡಿಯುವುದು, ಬೈದರೆ ಹಲ್ಲುದುರಿಸುವುದು ದೊಡ್ಡ ಅಕ್ರಮವಾಗಿದೆ. ಅದಕ್ಕೆ ಸಮರ್ಥನೆಯಿಲ್ಲ. ಕುರ್‌ಆನಿನಲ್ಲಿ ಸ್ಪಷ್ಟ ಆದೇಶವಿದೆ.

فَمَنِ اعْتَدٰى عَلَيْكُمْ فَاعْتَدُوْا عَلَيْهِ بِمِثْلِ مَا اعْتَدٰى عَلَيْكُمْ ۖ وَاتَّقُوا اللّٰهَ وَاعْلَمُوْٓا اَنَّ اللّٰهَ مَعَ الْمُتَّقِيْنَ ﴿١٩٤﴾

''ಆದುದರಿಂದ ನಿಮ್ಮ ಮೇಲೆ ಕೈ ಮಾಡಿದವರ ಮೇಲೆ ನೀವೂ ಅದೇ ರೀತಿಯಲ್ಲಿ ಕೈ ಮಾಡಿರಿ. ಆದರೆ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಅಲ್ಲಾಹನು ಸೀಮೋಲ್ಲಂಘನೆಯನ್ನು ಮಾಡದವರೊಂದಿಗೆ ಮಾತ್ರವಿರುತ್ತಾನೆಂಬುದನ್ನು ನೀವು ತಿಳಿದಿರಬೇಕು.''

(ಪವಿತ್ರ ಕುರ್‌ಆನ್, 2: 194)

2. ಪ್ರತೀಕಾರದಲ್ಲಿ ಶರೀಅತ್‌ನ ಮತ್ತು ನೈತಿಕ ಮೇರೆಗಳನ್ನು ಪಾಲಿಸುವುದಗತ್ಯ. ಒಬ್ಬನನ್ನು ಕೊಂದು ಶವವನ್ನು ವಿರೂಪಗೊಳಿಸಿದರೆ, ಕೈ ಕಾಲು, ಕಿವಿ–ಮೂಗುಗಳನ್ನು ಕಡಿದು ಹಾಕಿದರೆ ಕೊಲೆಗಾರನನ್ನೂ ಹಾಗೆಯೇ ಮಾಡಲಾಗದು. ಅವನಿಗೆ ಕಾನೂನು ಪ್ರಕಾರ, ಕೊಲೆಯ ಶಿಕ್ಷೆ ನೀಡಲಾಗುವುದು. ಅದೇ ರೀತಿ ಒಬ್ಬನು ವ್ಯಭಿಚಾರವೆಸಗಿದರೆ ಅವನ ಪತ್ನಿ ಅಥವಾ ಪುತ್ರಿಯನ್ನು ಬಲಾತ್ಕರಿಸಲಾಗದು. ಅವನಿಗೆ ಕಾನೂನು ಪ್ರಕಾರ ಕೇವಲ ವ್ಯಭಿಚಾರದ ಶಿಕ್ಷೆ ನೀಡಲಾಗುವುದು.

3. ಬೈದರೂ ಉತ್ತರ ನೀಡಬಹುದು. ಅದರಲ್ಲೂ ನೈತಿಕ ಮೇರೆಗಳನ್ನು ಪಾಲಿಸಬೇಕು. ಅದನ್ನು ಮೀರುವುದು ಧರ್ಮಸಮ್ಮತವಲ್ಲ. ಉದಾ: ಒಬ್ಬನು ಬೈದು ಹೀಯಾಳಿಸಿದರೆ ಅದೇ ರೀತಿ ಮಾಡುವುದು, ಅಪವಾದ ಹೊರಿಸುವುದು ಅಥವಾ ಇಡೀ ಕುಟುಂಬಕ್ಕೆ ಶಾಪ ಹಾಕುವುದು ಸಲ್ಲದು.

4. ಅಕ್ರಮಿಯನ್ನು ಅಕ್ರಮಿಯೆಂದು ಗುರುತಿಸುವಂತಾಗಲು ಮತ್ತು ಮರ್ದಿತನಿಗೆ ಸಮಾಜದಿಂದ ಸಹಾಯ ಸಿಗುವಂತಾಗಲು ಅಕ್ರಮದ ವಿರುದ್ಧ ಪ್ರತಿಭಟಿಸುವುದು ಮತ್ತು ಸ್ವರವೆತ್ತುವುದು ಸಮ್ಮತವಾಗಿದೆ.

لَا يُحِبُّ اللّٰهُ الْجَهْرَ بِالسُّوْٓءِ مِنَ الْقَوْلِ اِلَّا مَنْ ظُلِمَ ؕ وَكَانَ اللّٰهُ سَمِيْعًا عَلِيْمًا ﴿١٤٨﴾

''ಮನುಷ್ಯನು ಅವಾಚ್ಯ ಪದಗಳನ್ನುಚ್ಚರಿಸುವುದನ್ನು ಅಲ್ಲಾಹನು ಮೆಚ್ಚುವುದಿಲ್ಲ. ಆದರೆ ಮರ್ದಿತನು ಇದಕ್ಕೆ ಹೊರತಾಗಿದ್ದಾನೆ. ಅಲ್ಲಾಹ್ ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ. (ಮರ್ದಿತರಾಗಿರುವ ಸ್ಥಿತಿಯಲ್ಲಿ ನಿಮಗೆ ಅವಾಚ್ಯ ಪದಗಳನ್ನುಚ್ಚರಿಸುವ ಹಕ್ಕಿದೆ.)''

(ಪವಿತ್ರ ಕುರ್‌ಆನ್, 4: 148)

5. ಪ್ರತೀಕಾರಕ್ಕೆ ದೇಶದ ಕಾನೂನಿನ ಸಹಾಯ ಪಡೆಯಬೇಕು. ಅದರ ಅನೇಕ ರೂಪಗಳಿವೆ. ಕಾನೂನಿನ ಸಹಾಯದಿಂದ ಮಾತ್ರ ಅದನ್ನು ಜಾರಿಗೊಳಿಸಲು ಸಾಧ್ಯ. ಅದನ್ನು

ಕಡೆಗಣಿಸಿ ಕಾನೂನನ್ನು ಕೈಗೆತ್ತಿಕೊಳ್ಳುವಂತಿಲ್ಲ. ಇಂತಹ ಇನ್ನೂ ಅನೇಕ ವಿಧಿಗಳಿವೆ. ಅವುಗಳನ್ನು ಗಮನಿಸಬೇಕು.

ಪ್ರತೀಕಾರವು ಅಕ್ರಮದ ನಿರ್ಮೂಲನಕ್ಕಾಗಿದೆ.

ಪ್ರತೀಕಾರದಿಂದಾಗಿ ಒಂದು ರೀತಿಯಲ್ಲಿ ನಷ್ಟಕ್ಕೆ ಪರಿಹಾರ ಲಭಿಸುತ್ತದೆ. ಮರ್ದಿತನ ಸ್ವಾಭಿಮಾನ ಉಳಿಯುತ್ತದೆ. ತಾನು ಅಸಹಾಯಕ ಮತ್ತು ಮರ್ದಿತನೆಂಬ ಭಾವನೆ ಅವನಲ್ಲಿರುವುದಿಲ್ಲ. ಪ್ರತೀಕಾರದ ಹಕ್ಕಿನಿಂದಾಗಿ ಅಕ್ರಮ ಮತ್ತು ದಬ್ಬಾಳಿಕೆಯನ್ನು ಅಳಿಸಿ ಹಾಕಬಹುದು. ಮನುಷ್ಯನಿಗೆ ಈ ಹಕ್ಕು ಸಿಗದಿದ್ದರೆ ಅಕ್ರಮ-ಅತ್ಯಾಚಾರಗಳು ತಾಂಡವವಾಡಬಹುದು. ದುರ್ಬಲನ ಜೀವ, ಸೊತ್ತು ಮತ್ತು ಮಾನ-ಮರ್ಯಾದೆಗಳಿಗೆ ಉಳಿಗಾಲವಿರದು. ಪ್ರತೀಕಾರವನ್ನು ಅನೈತಿಕವೆನ್ನುವಂತಿಲ್ಲ. ಪ್ರತೀಕಾರದ ಬದಲು ಕ್ಷಮಿಸಿ ಬಿಡುವುದು ಅತಿ ದೊಡ್ಡ ನೈತಿಕ ಗುಣವಾಗಿದೆ. ಅದನ್ನು ಮುಂದೆ ವಿವರಿಸಲಾಗುವುದು. ಆದರೆ ಹಕ್ಕುಗಳ ರಕ್ಷಣೆಗೆ ಪ್ರತೀಕಾರವು ಅಗತ್ಯವಾಗಿದೆ. ಕುರ್‌ಆನ್ ಕ್ಷಮೆ ಮತ್ತು ಪ್ರತೀಕಾರಗಳ ಪೈಕಿ ಪ್ರತಿಯೊಂದಕ್ಕೂ ಸಂದರ್ಭಾನುಸಾರ ಸೂಕ್ತ ಮಹತ್ವ ನೀಡಿದೆ. ಅದರಲ್ಲಿ ಒಂದು ರೀತಿಯ ಸಮತೋಲನವಿರಿಸಿದೆ. ಒಂದೆಡೆ ಅದು, ವಿಶ್ವಾಸಿಗಳು ಅತಿರೇಕವಾದಾಗ ಪ್ರತೀಕಾರ ತೀರಿಸುತ್ತಾರೆಂಬುದನ್ನು ಅವರ ಉತ್ತಮ ಗುಣವಾಗಿ ಪ್ರಸ್ತಾಪಿಸಿದರೆ ಇನ್ನೊಂದೆಡೆ ಅವರ ಸಹನೆ ಮತ್ತು ಕ್ಷಮಾಗುಣಗಳನ್ನು ಪ್ರಶಂಸಿಸಿದೆ. ಇದರಲ್ಲಿ ವಿರೋಧಾಭಾಸವಿಲ್ಲ.

ಇದು ಎರಡು ವಿಭಿನ್ನ ವರ್ತನೆಗಳ ಪ್ರಶಂಸೆಯಲ್ಲ, ಏಕೆಂದರೆ ಅವುಗಳ ಸನ್ನಿವೇಶ ಬೇರೆ ಬೇರೆಯಾಗಿವೆ. ತನ್ನ ಮೇಲೆ ಯಾರೂ ಕೈ ಮಾಡಬಹುದಾದಷ್ಟು ಓರ್ವ ಮುಸ್ಲಿಮನು ಸಮಾಜದಲ್ಲಿ ದುರ್ಬಲ ಮತ್ತು ಅಸಹಾಯಕನಾಗಿರುವುದು ಪ್ರಶಂಸಾರ್ಹ ಸಂಗತಿಯಲ್ಲ. ಅವನು ಪ್ರತೀಕಾರ ಪಡೆಯುವ ಅಥವಾ ಕ್ಷಮಿಸಿ ಬಿಡುವ ಸಾಮರ್ಥ್ಯ ಹೊಂದಿರಬೇಕೆಂದು ವಿದ್ವಾಂಸರು ಹೇಳುತ್ತಾರೆ. ಕ್ಷಮಿಸಿ ಬಿಡುವುದರಿಂದ ಅಕ್ರಮಿಯು ಉದ್ಧಟನಾಗಿ, ಅಮಾಯಕನು ಅವನ ಅತಿರೇಕಕ್ಕೆ ಬಲಿಯಾಗುವನೆಂದು ಕಂಡರೆ, ಅವನ ಧೈರ್ಯ ಕುಂದಿಸಲು ಮತ್ತು ಯಾರ ಮೇಲೂ ಅಕ್ರಮವೆಸಗುವ ಧೈರ್ಯ ತೋರದಿರಲು ಪ್ರತೀಕಾರವನ್ನೇ ಎಸಗಬೇಕು. ಆದರೆ ಅಕ್ರಮಿಗೆ ತನ್ನ ತಪ್ಪಿನ ಅರಿವಾಗಿ ಆತ ಪಶ್ಚಾತ್ತಾಪ ಪಟ್ಟರೆ, ತನ್ನ ತಪ್ಪನ್ನು ಒಪ್ಪಿಕೊಂಡರೆ ಹಾಗೂ ಅವನನ್ನು ಕ್ಷಮಿಸುವುದರಿಂದ ಅವನ ಮೇಲೆ ಉತ್ತಮ ಪರಿಣಾಮವುಂಟಾಗ ಬಹುದೆಂಬ ನಿರೀಕ್ಷೆಯಿದ್ದರೆ, ಅವನನ್ನು ಕ್ಷಮಿಸುವುದೇ ಲೇಸು. ಇಲ್ಲಿ ಅಕ್ರಮವನ್ನು ಹತ್ತಿಕ್ಕುವುದೇ ಉದ್ದೇಶವಾಗಿದೆ. ಅದಕ್ಕಾಗಿ ಒಂದೋ ಕ್ಷಮಿಸಬೇಕು ಇಲ್ಲವೇ ಪ್ರತೀಕಾರವೆಸಗಬೇಕು.

ಅಲ್ಲಾಮಾ ಇಬ್ನು ಅರಬಿ ಮಾಲಿಕೀ ಹೇಳುತ್ತಾರೆ- ಅಶ್ಶೂರಾ ಅಧ್ಯಾಯದಲ್ಲಿ ಪ್ರತೀಕಾರ ಪಡೆಯುವುದು ಒಂದು ಒಳ್ಳೆಯ ಕಾರ್ಯವೆಂಬಂತೆ ಪ್ರಸ್ತಾಪಿಸಲಾಗಿದೆ. ಇತರೆಡೆಗಳಲ್ಲಿ ಕ್ಷಮಿಸುವುದನ್ನು ಪ್ರಶಂಸಿಸಲಾಗಿದೆ. ಒಬ್ಬ ಬಂಡುಕೋರ ಅಥವಾ ಅಕ್ರಮಿಯು ಬಹಿರಂಗವಾಗಿ ಕೆಟ್ಟ ಕಾರ್ಯಗಳನ್ನು ಮಾಡುತ್ತಿದ್ದರೆ, ಜನರನ್ನು ಬೈಯುತ್ತಿದ್ದರೆ, ಅಶ್ಲೀಲತೆಯನ್ನು ಪ್ರದರ್ಶಿಸುತ್ತಿದ್ದರೆ ಮತ್ತು ಸಣ್ಣವರು ದೊಡ್ಡವರೆನ್ನದೆ ಕಿರುಕುಳ ಕೊಡುತ್ತಿದ್ದರೆ, ಅವನಿಂದ ಪ್ರತೀಕಾರವನ್ನು ಪಡೆಯುವುದು ಉತ್ತಮವಾಗಿದೆ. ಇಮಾಮ್ ನಖಈ ಹೇಳುತ್ತಾರೆ- ದುರ್ಜನರು ಮೆರೆದಾಡುವಂತಾಗಲು ತನ್ನನ್ನು ತಾನು ದುರ್ಬಲನೂ ಆಗಿ ಮಾಡುವುದು ಸರಿಯಲ್ಲ. ಇನ್ನು

ಅಕಸ್ಮಾತ್ ಒಬ್ಬನಿಂದ ತಪ್ಪಾಗಿ, ಅವನು ಅದನ್ನು ಒಪ್ಪಿಕೊಂಡು ಕ್ಷಮೆ ಕೇಳಿದರೆ ಅವನನ್ನೂ ಕ್ಷಮಿಸಿ ಬಿಡುವುದು ಉತ್ತಮ. ಅಲ್ಲಾಮಾ ಕುರ್ತುಬಿ ಮತ್ತು ತಬರೀ ಇದನ್ನೇ ಇಷ್ಟಪಟ್ಟಿದ್ದಾರೆ.

ಇಮಾಮ್ ರಾಝೀ ಹೇಳುತ್ತಾರೆ- ಕ್ಷಮಿಸುವುದರಿಂದ ಕ್ರೋಧ ಅಣಗುತ್ತದೆ, ಗಲಭೆಕೋರರು ತಮ್ಮ ಕೃತ್ಯದಿಂದ ಹಿಂದೆ ಸರಿಯುತ್ತಾರೆಂದಾದರೆ ಕ್ಷಮಿಸುವುದು ಒಳ್ಳೆಯದು. ಆದ್ದರಿಂದ ಅಪರಾಧಿಯು ಇನ್ನಷ್ಟು ಉದ್ಧಟನಾಗುತ್ತಾನೆ, ಅವನ ದ್ವೇಷಾಗ್ನಿಯು ಇನ್ನಷ್ಟು ಪ್ರಜ್ವಲಿಸುವುದಾದರೆ ಪ್ರತೀಕಾರವೇ ಸರಿಯಾದ ಕ್ರಮವಾಗುವುದು.

ಈ ಮಾತುಗಳನ್ನು ಬಾಹ್ಯ ನೋಟಕ್ಕೆ ಇಸ್ಲಾಮೀ ಸಮಾಜವನ್ನು ಮುಂದಿಟ್ಟು ಹೇಳಲಾಗಿದೆ. ಬಹುಧರ್ಮೀಯ ಸಮಾಜದಲ್ಲಿ ಒಬ್ಬ ಮುಸ್ಲಿಮನ ಸಾಮಾನ್ಯ ನೀತಿ ಕ್ಷಮಿಸುವುದೇ ಆಗಿರಬೇಕು. ಆದರೆ ಕೆಲವೊಮ್ಮೆ ಕಾನೂನಿನ ಚೌಕಟ್ಟಿನೊಳಗೆ ಪ್ರತೀಕಾರದ ಹಕ್ಕನ್ನು ಚಲಾಯಿಸುವ ಮತ್ತು ನ್ಯಾಯಕ್ಕಾಗಿ ಹೋರಾಡಲು ಪ್ರಯತ್ನಿಸುವಂತಹ ಸಂದರ್ಭಗಳೂ ಬರಬಹುದು.

ಧಾರ್ಮಿಕ ಮತ್ತು ನೈತಿಕ ಗುಣಗಳು

ಇಸ್ಲಾಮ್, ವಿಶ್ವಾಸಿಗಳಲ್ಲಿ ಅತ್ಯುನ್ನತ ಧಾರ್ಮಿಕ ಮತ್ತು ನೈತಿಕ ಗುಣಗಳನ್ನುಂಟು ಮಾಡುತ್ತದೆಂಬುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಅದು ಅವರನ್ನು ಅಲ್ಲಾಹನ ಆಪ್ತರು ಮತ್ತು ನಿಷ್ಠದಾಸರಾಗಿ ಮಾಡುತ್ತದೆ. ಅವರ ಚಾರಿತ್ರ್ಯವನ್ನು ಉನ್ನತ ಮತ್ತು ಪಾವನಗೊಳಿಸುತ್ತದೆ. ಇಸ್ಲಾಮಿನ ಮೇಲೆ ದೃಢವಾದ ವಿಶ್ವಾಸವಿರುವ ಮತ್ತು ಅದರ ಶಿಕ್ಷಣಗಳನ್ನು ಪಾಲಿಸುವ ವ್ಯಕ್ತಿಗೆ ದುರ್ಮಾರ್ಗದಲ್ಲಿ ನಡೆಯುವುದು, ಅದರಲ್ಲಿ ಹೆಜ್ಜೆಯಿಡುವುದು ದುಸ್ತರವಾಗುತ್ತದೆ. ಅವನಿಂದ ಒಳಿತು, ದೇವನಿಷ್ಠೆ ಮತ್ತು ಕಲ್ಯಾಣವನ್ನೇ ನಿರೀಕ್ಷಿಸಬಹುದು. ಈ ಗುಣಗಳೇ ನಿಜವಾಗಿ ಓರ್ವ ವಿಶ್ವಾಸಿಯ ಸಂಪತ್ತಾಗಿದೆ. ಅದರಿಂದಲೇ ಅವನು ಪರಿಸ್ಥಿತಿಯನ್ನೆದುರಿಸಲು ಪ್ರಯತ್ನಿಸುತ್ತಾನೆ ಮತ್ತು ಅದಕ್ಕೆ ಸರಿಯಾದ ದಿಕ್ಕು ನೀಡಲು ಪ್ರಯತ್ನಿಸುತ್ತಾನೆ. ಅದರಿಂದ ಅವನು ಹಲವು ಬಾರಿ ವೈರಿಗಳ ಮನಗೆದಿದ್ದಾನೆ ಮತ್ತು ಅವರ ಮೇಲೆ ವಿಜಯ ಸಾಧಿಸಿದ್ದಾನೆ.

ಅಲ್ಲಾಹನತ್ತ ಮರಳುವುದು

ಈ ಲೋಕದಲ್ಲಿ ವಿಶ್ವಾಸಿಗೆ ಕಠಿಣ ಸತ್ವಪರೀಕ್ಷೆಗಳು ಎದುರಾಗಬಹುದು. ಅತ್ಯಂತ ಸಂಕಷ್ಟದ ಪರಿಸ್ಥಿತಿಯುಂಟಾಗಬಹುದು. ಇಂತಹ ಸತ್ವಪರೀಕ್ಷೆಗಳು ವಿಶ್ವಾಸಿಗಳ ಸತ್ಯಸಂಧತೆಯನ್ನು ಅಳೆಯಲಿಕ್ಕೂ ಬರಬಹುದು. ಅವರಲ್ಲಿ ಯಾರು ಪ್ರಾಮಾಣಿಕರು, ಯಾರು ಅಪ್ರಾಮಾಣಿಕರು ಹಾಗೂ ನೈಜ ವಿಶ್ವಾಸಿಗಳು, ಯಾರು ಕಪಟಿಗಳು ಮತ್ತು ತೋರಿಕೆಯವರು ಎಂದು ನೋಡುವುದೇ ಇದರ ಉದ್ದೇಶ.

ಆರಂಭಕಾಲದಲ್ಲಿ ಮುಸ್ಲಿಮರು ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿದ್ದರು. ಸತ್ವ ಪರೀಕ್ಷೆಗಳು ಮಳೆಯಂತೆ ಬಂದೆರಗುತ್ತಿದ್ದುವು. ಈ ಸನ್ನಿವೇಶದಲ್ಲಿ ಕುರ್‌ಆನ್ ಹೀಗೆ ಸಾರಿತು.

أَحَسِبَ النَّاسُ أَن يُتْرَكُوا أَن يَقُولُوا آمَنَّا وَهُمْ لَا يُفْتَنُونَ ﴿٢﴾ وَلَقَدْ
فَتَنَّا الَّذِينَ مِن قَبْلِهِمْ ۖ فَلَيَعْلَمَنَّ اللَّهُ الَّذِينَ صَدَقُوا وَلَيَعْلَمَنَّ
الْكَاذِبِينَ ﴿٣﴾

''ನಾವು ವಿಶ್ವಾಸವಿರಿಸಿದೆವು' ಎಂದ ಮಾತ್ರಕ್ಕೆ ಅವರನ್ನು ಬಿಟ್ಟು ಬಿಡಲಾಗುವುದೆಂದೂ ಅವರನ್ನು ಪರೀಕ್ಷೆಗೊಳಪಡಿಸಲಾಗದೆಂದೂ ಜನರು ತಿಳಿದುಕೊಂಡಿರುವರೇ? ವಸ್ತುತಃ ನಾವು ಇವರಿಗಿಂತ ಮುಂಚೆ ಗತಿಸಿ ಹೋದವರನ್ನು ಪರೀಕ್ಷೆಗೊಳಪಡಿಸಿದ್ದೆವು. ಯಾರು ಸತ್ಯವಾದಿಗಳು ಮತ್ತು ಯಾರು ಸುಳ್ಳುಗಾರರೆಂದು ಅಲ್ಲಾಹನಿಗೆ ನಿಶ್ಚಯವಾಗಿಯೂ ನೋಡಬೇಕಾಗಿದೆ.''

(ಪವಿತ್ರ ಕುರ್‌ಆನ್, 29: 2-3)

ಮುಂದುವರಿದು ಅದು ಹೀಗೆ ಹೇಳಿತು-

وَلَيَعْلَمَنَّ اللّٰهُ الَّذِيْنَ اٰمَنُوْا وَلَيَعْلَمَنَّ الْمُنٰفِقِيْنَ ﴿١١﴾

''ಸತ್ಯವಿಶ್ವಾಸಿಗಳು ಯಾರು, ಕಪಟವಿಶ್ವಾಸಿಗಳು ಯಾರು ಎಂಬುದು ನಿಶ್ಚಯವಾಗಿಯೂ ಅಲ್ಲಾಹನಿಗೆ ಅರಿಯಲೇಬೇಕಾಗಿದೆ.'' (ಪವಿತ್ರ ಕುರ್‌ಆನ್, 29: 11)

ವಿಶ್ವಾಸಿಗಳು ಎಲ್ಲ ಸತ್ವ ಪರೀಕ್ಷೆಗಳಲ್ಲಿ ದೃಢವಾಗಿ ನಿಲ್ಲುತ್ತಾರೆಂದು ಹೇಳಿತು.

وَلَنَبْلُوَنَّكُمْ بِشَيْءٍ مِّنَ الْخَوْفِ وَالْجُوْعِ وَنَقْصٍ مِّنَ الْاَمْوَالِ وَالْاَنْفُسِ
وَالثَّمَرٰتِ ۗ وَبَشِّرِ الصّٰبِرِيْنَ ﴿١٥٥﴾

''ನಾವು ನಿಮ್ಮನ್ನು ಭಯಾಶಂಕೆ, ಹಸಿವು, ಧನಹಾನಿ, ಜೀವಹಾನಿ ಮತ್ತು ಉತ್ಪನ್ನಗಳ ನಾಶಗಳಿಗೊಳಪಡಿಸಿ ಅವಶ್ಯವಾಗಿಯೂ ಪರೀಕ್ಷಿಸುವೆವು. ಇಂತಹ ಸನ್ನಿವೇಶಗಳಲ್ಲಿ ತಾಳ್ಮೆ ವಹಿಸಿದವರಿಗೆ ಸುವಾರ್ತೆ ನೀಡಿರಿ.'' (ಪವಿತ್ರ ಕುರ್‌ಆನ್, 2: 155)

ತರುವಾಯ ಪ್ರತಿಕೂಲ ಪರಿಸ್ಥಿತಿ ಮತ್ತು ಕಷ್ಟಕಾಲದಲ್ಲಿ ಅವರು ಅಲ್ಲಾಹನತ್ತ ಮರಳುತ್ತಾರೆ, ಅದರಿಂದಾಗಿ ಅವರು ಇಹ-ಪರಲೋಕಗಳಲ್ಲಿ ಅವನ ಕರುಣೆ ಮತ್ತು ಅನುಗ್ರಹಗಳಿಗೆ ಪಾತ್ರರಾಗುತ್ತಾರೆಂದು ಹೇಳಿತು. ಅವರ ಮಾನಸಿಕ ಸ್ಥಿತಿಯನ್ನು ಕುರ್‌ಆನ್ ಹೀಗೆ ಚಿತ್ರಿಸಿತು.

الَّذِيْنَ اِذَآ اَصَابَتْهُمْ مُّصِيْبَةٌ ۙ قَالُوْٓا اِنَّا لِلّٰهِ وَاِنَّآ اِلَيْهِ رٰجِعُوْنَ ﴿١٥٦﴾ اُولٰٓئِكَ
عَلَيْهِمْ صَلَوٰتٌ مِّنْ رَّبِّهِمْ وَ رَحْمَةٌ ۫ وَاُولٰٓئِكَ هُمُ الْمُهْتَدُوْنَ ﴿١٥٧﴾

''ಅಂತಹವರ ಮೇಲೆ ವಿಪತ್ತೇನಾದರೂ ಎರಗಿದಾಗ ಅವರು 'ನಿಶ್ಚಯವಾಗಿಯೂ ನಾವು ಅಲ್ಲಾಹನವರು ಮತ್ತು ಅಲ್ಲಾಹನೆಡೆಗೇ ನಮಗೆ ಮರಳಲಿಕ್ಕಿದೆ' ಎನ್ನುವರು. ಅವರ ಮೇಲೆ ಅವರ ಪ್ರಭುವಿನ ಕಡೆಯಿಂದ ಮಹಾ ಅನುಗ್ರಹಗಳಿರುವುವು. ಅವನ ಕಾರುಣ್ಯವು ಅವರನ್ನು ಆಚ್ಛಾದಿಸುವುದು ಮತ್ತು ಇಂತಹವರೇ ಸನ್ಮಾರ್ಗ ಹೊಂದಿದವರಾಗಿರುತ್ತಾರೆ.''

(ಪವಿತ್ರ ಕುರ್‌ಆನ್, 2: 156-157)

ಸಂಕಷ್ಟದ ವೇಳೆ ಅಲ್ಲಾಹನ ಮೊರೆ ಹೋಗುವುದು ಸಹಜ. ವಿಶ್ವಾಸಿಗೆ ಅದರಿಂದ ಜೀವಂತಿಕೆ ಮತ್ತು ಆರೋಗ್ಯಕರ ಪ್ರಕೃತಿ ಲಭಿಸುತ್ತದೆ. ಅವನಿಗೆ ಸಂಕಟ ಬಂದಾಗ ಅಲ್ಲಾಹನತ್ತ ಮರಳುವ ಸೌಭಾಗ್ಯ ಲಭಿಸುತ್ತದೆ. ಅವನು ಅಲ್ಲಾಹನಿಂದ ಸಹಾಯ ಯಾಚಿಸುತ್ತಾನೆ. ಸಂಕಷ್ಟದಲ್ಲೂ

ಅಲ್ಲಾಹನತ್ತ ಮರಳದಿದ್ದರೆ ಅವನ ಪ್ರಕೃತಿಯೇ ನಿರ್ವೀರ್ಯವೆಂದರ್ಥ. ಅವನು ತನ್ನ ಮಾರ್ಗೋಪಾಯಗಳನ್ನು ನಂಬಿರುತ್ತಾನೆ. ಅಲ್ಲಾಹನತ್ತ ಮರಳಲಾರನು. ವಸ್ತುತಃ ಅಲ್ಲಾಹನ ಸಹಾಯವಿಲ್ಲದೆ ಅವನ ಯಾವ ಉಪಾಯವೂ ಪ್ರಯೋಜನಕ್ಕೆ ಬರಲಾರದು.

ಅಲ್ಲಾಹನತ್ತ ಮರಳಲು, ಅವನ ಸ್ಮರಣೆಯನ್ನು ಮನದಲ್ಲಿ ತುಂಬಲು, ಅವನಲ್ಲಿ ಮೊರೆಯಿಡಲು, ಅವನೊಂದಿಗೆ ಪ್ರಾರ್ಥಿಸಲು, ಅವನ ಸಹಾಯ ಬೇಡಲು ಕಠಿಣ ಪರಿಸ್ಥಿತಿ ಮತ್ತು ನಮ್ಮ ದೌರ್ಬಲ್ಯಗಳು ನಮ್ಮನ್ನು ನಿರ್ಬಂಧಿಸುತ್ತದೆ. ಇದುವೇ ಓರ್ವ ವಿಶ್ವಾಸಿಯ ಗುಣ ಸ್ವಭಾವವಾಗಿದೆ. ಆಗ ಮಾತ್ರ ನಮ್ಮ ಉಪಾಯಗಳು ಫಲ ನೀಡಬಹುದು, ಅಲ್ಲಾಹನ ಸಹಾಯ ಲಭಿಸಬಹುದು ಮತ್ತು ನಮ್ಮ ಸಂಕಷ್ಟಗಳು ನೀಗಬಹುದು ಎಂದು ನಿರೀಕ್ಷಿಸಬಹುದು.

إِن يَنصُرْكُمُ ٱللَّهُ فَلَا غَالِبَ لَكُمْ ۖ وَإِن يَخْذُلْكُمْ فَمَن ذَا ٱلَّذِى يَنصُرُكُم مِّنۢ بَعْدِهِۦ ۗ وَعَلَى ٱللَّهِ فَلْيَتَوَكَّلِ ٱلْمُؤْمِنُونَ ﴿١٦٠﴾

"ಅಲ್ಲಾಹನು ನಿಮ್ಮ ಸಹಾಯಕ್ಕಿದ್ದರೆ ಯಾವ ಶಕ್ತಿಯಿಂದಲೂ ನಿಮ್ಮನ್ನು ಜಯಿಸಲು ಸಾಧ್ಯವಾಗದು ಮತ್ತು ಅವನು ನಿಮ್ಮನ್ನು ಕೈಬಿಟ್ಟರೆ, ಆ ಮೇಲೆ ನಿಮಗೆ ಸಹಾಯ ಮಾಡುವವರು ಯಾರಿದ್ದಾರೆ? ಆದುದರಿಂದ ಅಪ್ಪಟ ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆಯನ್ನಿರಿಸಬೇಕು." (ಪವಿತ್ರ ಕುರ್‌ಆನ್, 3: 160)

ನಮಾಝ್‌ನ ಸಂಸ್ಥಾಪನೆ

ನಮಾಝ್ ಧರ್ಮದ ಆಧಾರ ಸ್ತಂಭವಾಗಿದೆ. ಅದನ್ನು ಯಾವಾಗಲೂ ಎಲ್ಲಿದ್ದರೂ ಪಾಲಿಸಲೇಬೇಕು. ನಿರ್ಣಾಯಕ ಘಳಿಗೆಗಳಲ್ಲಿ ಇದು ವಿಶ್ವಾಸಿಗೆ ಶಕ್ತಿ ನೀಡುತ್ತದೆ. ಸಂಕಷ್ಟದ ವೇಳೆ ಸಹನೆ ಮತ್ತು ನಮಾಝ್‌ನಿಂದ ಸಹಾಯ ಪಡೆಯುವಂತೆ ಕುರ್‌ಆನ್ ಆದೇಶಿಸಿದೆ.

وَٱسْتَعِينُوا۟ بِٱلصَّبْرِ وَٱلصَّلَوٰةِ ۚ وَإِنَّهَا لَكَبِيرَةٌ إِلَّا عَلَى ٱلْخَـٰشِعِينَ ﴿٤٥﴾

"ಸಹನೆ ಮತ್ತು ನಮಾಝ್‌ಗಳಿಂದ ಸಹಾಯ ಪಡೆಯಿರಿ. ಖಂಡಿತವಾಗಿಯೂ ನಮಾಝ್ ಅತ್ಯಂತ ಕಷ್ಟಕರ ಕಾರ್ಯ. ಆದರೆ ಕಟ್ಟಕಡೆಗೆ ತಮ್ಮ ಪ್ರಭುವನ್ನು ಸಂಧಿಸಬೇಕೆಂದೂ ಆತನೆಡೆಗೇ ಮರಳಬೇಕೆಂದೂ ನಂಬಿರುವ ಆಜ್ಞಾಪಾಲಕ ದಾಸರಿಗೆ ಅದು ಕಷ್ಟಕರವಲ್ಲ."

(ಪವಿತ್ರ ಕುರ್‌ಆನ್, 2: 45)

ಫಿರ್‌ಔನನು ಬನೀ ಇಸ್ರಾಈಲ್ ಜನಾಂಗದ ಮೇಲೆ ಹಿಂಸೆ-ದೌರ್ಜನ್ಯಗಳನ್ನೆಸಗಿದ್ದನು. ಅವರ ಗಂಡು ಸಂತಾನವನ್ನು ವಧಿಸಿದ್ದನು. ಅವರನ್ನು ಗುಲಾಮರನ್ನಾಗಿ, ಮರ್ದಿತರನ್ನಾಗಿ ಮಾಡಿದ್ದನು. ಅವರ ಮಹಿಳೆಯರ ಮಾನಹರಣವಾಗುತ್ತಿತ್ತು. ಅವರು ಇಂತಹ ಒಂದಲ್ಲ, ಅನೇಕ ಅತಿರೇಕಗಳಿಗೆ ಬಲಿಯಾಗಿದ್ದರು. ಅವರು ಮಾನವ ಹಕ್ಕುಗಳಿಂದ ವಂಚಿತರಾಗಿದ್ದರು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಪ್ರವಾದಿ ಮೂಸಾರು(ಅ) ಅವರಿಗೆ ದೃಢವಾಗಿರುವಂತೆ ಮತ್ತು ನಮಾಝ್‌ನ ಮೂಲಕ ಶಕ್ತಿ ಗಳಿಸುವಂತೆ ಆದೇಶಿಸಿದರು.

يَا أَيُّهَا الَّذِينَ آمَنُوا اسْتَعِينُوا بِالصَّبْرِ وَالصَّلَوٰةِ ۚ إِنَّ اللَّهَ مَعَ الصَّابِرِينَ

''ಓ ಸತ್ಯವಿಶ್ವಾಸಿಗಳೇ, ಸಹನೆ ಮತ್ತು ನಮಾಝಿನಿಂದ ಸಹಾಯ ಪಡೆಯಿರಿ. ನಿಶ್ಚಯವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ.'' (ಪವಿತ್ರ ಕುರ್‌ಆನ್, 2: 153)

ಮೂಸಾ(ಅ) ತಮ್ಮ ಜನಾಂಗದೊಡನೆ ಹೀಗೆಂದರು:

اِسْتَعِيْنُوْا بِاللّٰهِ وَاصْبِرُوْا (الاعراف ١٢٧)

''ಅಲ್ಲಾಹನೊಡನೆ ಸಹಾಯ ಯಾಚಿಸಿರಿ ಮತ್ತು ತಾಳ್ಮೆ ವಹಿಸಿರಿ...''

(ಪವಿತ್ರ ಕುರ್‌ಆನ್, 7: 128)

ಇದು ನಮಾಝ್ ಮತ್ತು ಸಹನೆಯ ಮೂಲಕ ಸಹಾಯ ಯಾಚಿಸಬೇಕೆಂಬ ಆಜ್ಞೆಯಾಗಿತ್ತೆಂದು ಪ್ರಸ್ತುತ ಸೂಕ್ತಗಳಿಂದ ಸ್ಪಷ್ಟವಾಗುತ್ತದೆ. ಅಂದರೆ ಈ ಪರಿಸ್ಥಿತಿಯಲ್ಲಿ ಸಹನೆಯಿಂದ ವರ್ತಿಸಿರಿ. ಅಸಹನೆ ತೋರಬೇಡಿರಿ, ಭಯ ಮತ್ತು ಗಾಬರಿಗೊಳಗಾಗದಿರಿ, ನಿರಾಶರಾಗಬೇಡಿರಿ. ಧರ್ಮದಲ್ಲಿ ದೃಢವಾಗಿ ನಿಲ್ಲಿರಿ ಎಂದಾಗಿದೆ. ಈ ಕಠಿಣ ಕೆಲಸಗಳಿಗೆ ನಮಾಝ್‌ನಿಂದ ಸಹಾಯ ಪಡೆದರೆ ಸಹಾಯ ಸಿಗಬಹುದೆಂದು ಇದರರ್ಥ.

ನಮಾಝ್‌ನ ಸಂಸ್ಥಾಪನೆಯೆಂದರೆ ಅದರ ಬಾಹ್ಯ ನಿಯಮ-ನಿಬಂಧನೆಗಳನ್ನು ಮತ್ತು ಬೇಡಿಕೆಗಳನ್ನು ಈಡೇರಿಸುವುದು ಹಾಗೂ ಅದರ ಸ್ಫೂರ್ತಿಯನ್ನು ತನ್ನಲ್ಲಿ ಉಂಟು ಮಾಡಲು ಪ್ರಯತ್ನಿಸುವುದಾಗಿದೆ. ನಮಾಝ್‌ನ ಆಜ್ಞೆಗನುಸಾರ ಅದನ್ನು ನಿರ್ವಹಿಸುವುದು, ಸಮಯ ಪಾಲಿಸುವುದು, ಫರ್ಝ್‌ನೊಂದಿಗೆ ನಫಿಲ್‌ಗಳನ್ನು ನಿರ್ವಹಿಸುವುದು ಅಗತ್ಯ. ನಮಾಝ್‌ನಲ್ಲಿ ಭಯಭಕ್ತಿಯಿರಬೇಕು. ತಾನು ಅಲ್ಲಾಹನ ಸನ್ನಿಧಿಯಲ್ಲಿದ್ದೇನೆಂಬ ಪ್ರಜ್ಞೆಯೊಂದಿಗೆ ನಿಸ್ವಾರ್ಥತೆಯಿರಬೇಕು. ಅಷ್ಟೇ ಅಲ್ಲ, ಇಹ್ಸಾನ್‌ನ ಸ್ಥಿತಿಯನ್ನುಂಟು ಮಾಡಲು ಪ್ರಯತ್ನಿಸಬೇಕು. ಈ ರೀತಿ ನಮಾಝ್‌ನ ಬಾಹ್ಯ ಶಿಷ್ಟಾಚಾರಗಳು ಮತ್ತು ಆಂತರಿಕ ಪರಿಸ್ಥಿತಿಯು ಒಂದುಗೂಡಿದರೆ ಅದರ ಪ್ರಭಾವವೂ ಪ್ರಕಟಗೊಳ್ಳತೊಡಗುವುದು.

ಮುಸ್ಲಿಮರ ಪ್ರತಿಯೊಂದು ಗ್ರಾಮದಲ್ಲೂ ಸಾಮೂಹಿಕ ನಮಾಝ್‌ನ (ಜಮಾಅತ್) ವ್ಯವಸ್ಥೆಯಾಗಬೇಕು. ಅದಕ್ಕಾಗಿ ಮಸೀದಿ ನಿರ್ಮಾಣವಾಗಬೇಕು. ಅದನ್ನು ಯಾವಾಗಲೂ ಸ್ವಚ್ಛವಾಗಿರಿಸಬೇಕು. ಅದರ ಅತ್ಯುತ್ತಮ ಮೇಲ್ವಿಚಾರಣೆ ಆಗಬೇಕು. ಇಂತಹ ಕ್ರಮಗಳಿಂದ ನಮಾಝ್‌ನ ಸಂಸ್ಥಾಪನೆ ಪೂರ್ಣಗೊಳ್ಳುತ್ತದೆ.

ನಮಾಝ್‌ನ ಮೂಲಕ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪನೆಗೊಳ್ಳುತ್ತದೆ. ಅದರ ಮೂಲಕ ಎಲ್ಲರೂ ಸಮಾನರೆಂಬ ಒಂದು ಸಾಮಾಜಿಕ ಕಲ್ಪನೆ ಬೆಳೆಯುತ್ತದೆ. ಅದರಲ್ಲಿ ಹಿರಿಯ-ಕಿರಿಯ, ಮೇಲು-ಕೀಳು ಎಂಬ ಯಾವ ತಾರತಮ್ಯವೂ ಇರುವುದಿಲ್ಲ, ಅದರ ಅಣಿಗಳಲ್ಲಿ ಐಕ್ಯ ಭಾವನೆಯುಂಟಾಗುತ್ತದೆ. ಒಡಕಿನಿಂದ ಅದು ಸುರಕ್ಷಿತಗೊಂಡಿರುತ್ತದೆ. ಅದರಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನ ಹಿತ ಚಿಂತಕನಾಗುತ್ತಾನೆ. ಸಮುದಾಯದಲ್ಲಿ ಈ ಸ್ಫೂರ್ತಿಯುಂಟಾದರೆ ಸಂಕಷ್ಟದ ವೇಳೆ ಯಾರೊಬ್ಬನೂ ತಾನು ಅಸಹಾಯಕನೆಂಬ ಭಾವನೆ ಮೂಡಲಾರದು. ಪ್ರತಿಯೊಬ್ಬನೂ ತನ್ನ ಹಿತ ಚಿಂತಕನೆಂದು ಪರಿಗಣಿಸುವನು. ಈ ರೀತಿ ಸಮುದಾಯವು ಎಷ್ಟು ದೊಡ್ಡ ಸಂಕಷ್ಟವನ್ನಾದರೂ ತಾಳಿಕೊಳ್ಳಬಹುದು.

ಕೋಪ ಮತ್ತು ಉದ್ರೇಕ ಸಲ್ಲದು

ಮಾನವ ಮೃದು ಮತ್ತು ಶಾಂತ ಸ್ವಭಾವದವನಾಗಿರಬೇಕು. ಭಾವ-ವಿಕಾರಗಳಿಗೆ ಬಲಿಯಾಗಿ ಏನಾದರೂ ಕ್ರಮ ಕೈಗೊಳ್ಳುವುದು ಬುದ್ಧಿವಿವೇಕವುಳ್ಳವನಿಗೆ ಭೂಷಣವಲ್ಲ. ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಕೋಪ ಬರಿಸುವ ಮತ್ತು ಕೆರಳಿಸುವ ಪ್ರಯತ್ನಗಳು ನಡೆಯುತ್ತವೆ. ಅದನ್ನು ವಿಫಲಗೊಳಿಸುವುದರಲ್ಲೇ ಮಾನವನ ಯಶಸ್ಸಿದೆ. ಮಾನವ ಕೆರಳಬೇಕು, ಆಗ ನಿಯಂತ್ರಣ ತಪ್ಪಿ ಏನಾದರೂ ಕ್ರಮಗೊಳ್ಳಬೇಕೆಂದು ಅವನನ್ನು ಉದ್ರೇಕಿಸಲಾಗುತ್ತದೆ. ಇದರಲ್ಲಿ ಕೆರಳಿಸುವವನಿಗೆ ಪ್ರಯೋಜನವಿದೆ. ಆದರೆ ಉದ್ರೇಕಗೊಳ್ಳುವವನು ನಷ್ಟಕ್ಕೊಳಗಾಗುತ್ತಾನೆ.

ವಿಶ್ವಾಸಿಯು ಕೆರಳುವುದಿಲ್ಲ, ಕೋಪಗೊಳ್ಳುವುದಿಲ್ಲ, ಅನುಚಿತವಾದ ಕೃತ್ಯದಿಂದ ಅಥವಾ ಯಾರದಾದರೂ ತಪ್ಪು ವರ್ತನೆಯಿಂದ ಕೋಪಗೊಂಡರೂ ಅವರನ್ನು ಕ್ಷಮಿಸಿ ಬಿಡುತ್ತಾನೆ. ಇದು ಅವನ ವಿಶಿಷ್ಟ ಗುಣವೆಂದು ಹೇಳಲಾಗಿದೆ.

وَإِذَا مَا غَضِبُوا هُمْ يَغْفِرُونَ (الشورى : ٣٧)

''ಅವರು ಸಿಟ್ಟು ಬಂದಾಗ ಕ್ಷಮಿಸಿ ಬಿಡುವವರಾಗಿರುತ್ತಾರೆ.''

(ಪವಿತ್ರ ಕುರ್‌ಆನ್, 42: 37)

ಕೋಪವನ್ನು ನಿಯಂತ್ರಣದಲ್ಲಿರಿಸುವ, ಕೋಪ ಬರುವಾಗ ತಾಳ್ಮೆ ವಹಿಸುವ ಮತ್ತು ಶಕ್ತಿಯಿದ್ದೂ ಯಾವುದೇ ಪ್ರತಿಕ್ರಮ ಕೈಗೊಳ್ಳದ ವ್ಯಕ್ತಿಯನ್ನು ಅಲ್ಲಾಹನು ಸ್ವರ್ಗಕ್ಕೆ ಅರ್ಹನೆಂದು ಸಾರುವನು. ಅಲ್ಲಿ ಅವನ ಸುಖ-ಸಂತೋಷಕ್ಕಾಗಿ ತನ್ನ ಆಯ್ಕೆಯ ಅಪ್ಸರೆಯನ್ನು ಅವನಿಗೆ ನೀಡುವನೆಂದು, ಪ್ರವಾದಿ(ಸ) ಹೇಳಿದ್ದಾರೆ

ಮುಆದ್ ಬಿನ್ ಅನಸ್ ಜುಹ್ನೀ(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು-

مَنْ كظم غيظًا وهو يقدر على ان ينفذه دعاه الله الى رؤس الخلائق يوم القيامة حتى يغيره فى اى الحور شاء (مشكوٰة)

''ಕೋಪವನ್ನು ನುಂಗಿಕೊಳ್ಳುವವನನ್ನು ಅಲ್ಲಾಹನು ತನ್ನ ದಾಸರ ಮುಂದೆ ಕರೆಯುವನು. (ಅವನಿಗೆ ತನ್ನ ಅನುಗ್ರಹಗಳನ್ನು ದಯಪಾಲಿಸುವನು) ಮತ್ತು ಅವನಿಗೆ ತಾನು ಮೆಚ್ಚುವ ಅಪ್ಸರೆಯನ್ನು ಆಯ್ದುಕೊಳ್ಳುವ ಅಧಿಕಾರ ನೀಡುವನು.

(ಮಿಶ್ಕಾತ್: ತಿರ್ಮಿದಿ, ಅಬೂದಾವೂದ್)

ತನಗೆ ಉಪದೇಶ ನೀಡುವಂತೆ ವಿನಂತಿಸಿಕೊಂಡು ಬಂದ ಒಬ್ಬ ವ್ಯಕ್ತಿಯೊಡನೆ ಪ್ರವಾದಿ(ಸ)'ನೀನು ಕೋಪಿಸಬೇಡ' ಎಂದು ಹೇಳಿದರು.

(ಬಹುಶಃ ಅವನು ಮುಂಗೋಪಿಯಾಗಿದ್ದನು) ಆದರೆ ಪ್ರವಾದಿಯವರು ಇನ್ನೂ ಹೆಚ್ಚು ಉಪದೇಶಿಸಬಹುದೆಂಬ ನಿರೀಕ್ಷೆಯಿಂದ ಅವನು ಪುನಃ ಪುನಃ ಅದನ್ನೇ ವಿನಂತಿಸಿದನು. ಆದರೆ ಪ್ರವಾದಿಯವರು ಅವನೊಂದಿಗೆ ಕೋಪಗೊಳ್ಳಬೇಡವೆಂದೇ ಉಪದೇಶಿಸಿದರು. (ಬುಖಾರಿ)

ಮಾನವನ ಘನತೆಯು ದೈಹಿಕ ಶಕ್ತಿಗಿಂತ ನೈತಿಕ ಶಕ್ತಿ ಹೊಂದಿರುವುದರಲ್ಲಿದೆ. ಉದ್ರಿಕ್ತ ಪರಿಸ್ಥಿತಿಯಲ್ಲಿ ತನ್ನ ಭಾವನೆಗಳ ಮೇಲೆ ನಿಯಂತ್ರಣವಿರಿಸುವವನು ಅಷ್ಟೇ ಘನ ವ್ಯಕ್ತಿಯಾಗಿದ್ದಾನೆ.

ಪ್ರವಾದಿ(ಸ) ಹೇಳಿದರು-

ليس الشديد بالصرعة انما الشديد الذى ملك يفسه عند الغضب (بخارى)

ಎದುರಾಳಿಯನ್ನು ಕೆಡವಿ ಹಾಕುವವನು ಪಹಿಲ್ವಾನನಲ್ಲ. ಕೋಪ ಬಂದಾಗ ತನ್ನನ್ನು ತಾನೇ ನಿಯಂತ್ರಿಸುವವನೇ ನಿಜವಾದ ಪಹಿಲ್ವಾನನಾಗಿದ್ದಾನೆ. (ಬುಖಾರಿ)

ಕೋಪವನ್ನು ನುಂಗಿಕೊಳ್ಳುವುದು ಅತ್ಯಂತ ಕಹಿಯಾಗಿದೆ. ಅದು ಗಂಟಲೊಳಗೆ ಸುಲಭದಲ್ಲಿ ಇಳಿಯುವುದಿಲ್ಲ. ಆದರೆ ಅಲ್ಲಾಹನಿಗೆ ಈ ಗುಟುಕು ಬಹಳ ಪ್ರಿಯ. ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು:

ما تجرع عبد جرعةً افضل عند الله عزوجل من جرعة غيظ يكظمها ابتغاء وجه الله تعالىٰ

ಅಲ್ಲಾಹನ ಸಂಪ್ರೀತಿಗಾಗಿ ಮನುಷ್ಯ ಕುಡಿಯುವ ಕೋಪದ ಗುಟುಕಿಗಿಂತ ಶ್ರೇಷ್ಠವಾದ ಗುಟುಕು ಅಲ್ಲಾಹನ ದೃಷ್ಟಿಯಲ್ಲಿ ಬೇರೆ ಇಲ್ಲ. (ಅಹ್ಮದ್)

ಅಲ್ಲಾಹನ ಸಂಪ್ರೀತಿಗಾಗಿ ಕುಡಿಯುವ ಕೋಪದ ಗುಟುಕು ಅತ್ಯಂತ ಬೆಲೆಬಾಳುವಂತಹದ್ದು. ಅದಕ್ಕಿಂತ ಹೆಚ್ಚಿನ ಗುಟುಕು ಅವನಿಗೆ ಇಷ್ಟವಿಲ್ಲ.

ಕೋಪದ ಭರದಲ್ಲಿ ಮನುಷ್ಯ ಪರಿಣಾಮವನ್ನು ನೋಡುವುದಿಲ್ಲ. ಕ್ರಮ ಕೈಗೊಂಡು ಬಿಡುತ್ತಾನೆ. ಆದರೆ ಇದು ಸರಿಯಾದ ಕ್ರಮವಲ್ಲ. ಸತ್ಯಾಸತ್ಯದ ವಿಷಯದಲ್ಲಿ ಕೋಪ ಬರುವುದು ಸಹಜ. ಕೇವಲ ತನ್ನ ತಪ್ಪು ಭಾವನೆಗಳು ಮತ್ತು ಚಿತ್ತಾಕಾಂಕ್ಷೆಯನ್ನು ತಣಿಸಲು ಕೋಪಗೊಳ್ಳುವುದು ತಪ್ಪು. ಆದರಿಂದ ಪರಿಸ್ಥಿತಿಯನ್ನು ಸುಧಾರಿಸಲಾಗದು. ಅದು ಇನ್ನಷ್ಟು ಕೆಡಬಹುದು. ಅದರ ಬಗ್ಗೆ ಜಾಗರೂಕರಾಗಿರಬೇಕು.

ಕ್ಷಮಿಸುವುದು ಅತ್ಯುತ್ತಮ ಗುಣವಾಗಿದೆ.

ಕ್ಷಮೆಯು ಒಂದು ಶ್ರೇಷ್ಠ ನೈತಿಕ ಗುಣವಾಗಿದೆ. ಇಸ್ಲಾಮ್ ತನ್ನ ಅನುಯಾಯಿಗಳಲ್ಲಿ ಈ ಗುಣವನ್ನು ನೋಡಬಯಸುತ್ತದೆ. ಕುರ್‌ಆನ್ ಅಲ್ಲಾಹನ ಸಜ್ಜನ ದಾಸರ ಪರಿಶುದ್ಧ ಗುಣಗಳನ್ನು ಪ್ರಸ್ತಾಪಿಸಿರುವಲ್ಲಿ ಈ ಗುಣವನ್ನು ಎತ್ತಿ ತೋರಿಸಿದೆ.

وَالكَاظِمِينَ الْغَيْظَ وَالعَافِينَ عَنِ النَّاسِ وَاللهِ يُحِبُّ الْمُحْسِنِيْنَ (آلِ عمران ۱۳۴)

"ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ಅಪರಾಧಗಳನ್ನು ಕ್ಷಮಿಸುತ್ತಾರೆ.- ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವರು." (ಪವಿತ್ರ ಕುರ್‌ಆನ್, 3: 134)

ಪ್ರವಾದಿ ವಚನಗಳಲ್ಲಿ ಕ್ಷಮಿಸುವುದಕ್ಕೆ ಬಹಳ ಪ್ರೇರಣೆ ನೀಡಲಾಗಿದೆ ಮತ್ತು ಅದರ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ. ಉಕ್ಬಾಬಿನ್ ಆಮಿರ್‌ರ ವರದಿ: ಪ್ರವಾದಿ(ಸ) ಹೇಳಿದರು-

صل من قطعک واعط من حرمک واعف عمن ظلمک (مسلم)

"ನಿಮ್ಮೊಂದಿಗೆ ಕುಟುಂಬ ಸಂಬಂಧ ಕಡಿಯುವವರೊಂದಿಗೆ ನೀವು ಅದನ್ನು ಜೋಡಿಸಿರಿ.

ನಿಮಗೆ ಹಕ್ಕು ನೀಡದವರಿಗೆ ನೀವು ಅವರ ಹಕ್ಕನ್ನು ನೀಡಿರಿ. ನಿಮ್ಮೊಂದಿಗೆ ಅಕ್ರಮವೆಸಗಿದವರನ್ನು ನೀವು ಕ್ಷಮಿಸಿ ಬಿಡಿರಿ.'' (ಮುಸ್ಲಿಮ್)

ಒಬ್ಬ ವ್ಯಕ್ತಿ ಪ್ರವಾದಿ(ಸ) ಅವರೊಂದಿಗೆ ಹೇಳುತ್ತಾನೆ- ''ನನ್ನ ಕೆಲವು ಸಂಬಂಧಿಕರಿದ್ದಾರೆ. ನಾನು ಅವರೊಂದಿಗೆ ಕುಟುಂಬ ಸಂಬಂಧವನ್ನು ಬೆಳೆಸುತ್ತೇನೆ. ಆದರೆ ಅವರು ನನ್ನೊಂದಿಗೆ ಸಂಬಂಧ ಕಡಿಯುತ್ತಾರೆ. ನಾನು ಅವರೊಂದಿಗೆ ಔದಾರ್ಯದಿಂದ ವರ್ತಿಸುತ್ತೇನೆ. ಅವರು ನನ್ನೊಂದಿಗೆ ಕೆಟ್ಟದಾಗಿ ವರ್ತಿಸುತ್ತಾರೆ. ನಾನು ಅವರೊಂದಿಗೆ ಕ್ಷಮೆ ಮತ್ತು ತಾಳ್ಮೆಯಿಂದ ವರ್ತಿಸಿದರೆ ಅವರು ನನ್ನೊಂದಿಗೆ ಅಜ್ಞಾನಿಗಳಂತೆ ವರ್ತಿಸುತ್ತಾರೆ.'' ಪ್ರವಾದಿ(ಸ) ಹೇಳಿದರು- ''ವಿಷಯ ನೀನು ಹೇಳಿದಂತೆಯೇ ಆಗಿದ್ದರೆ, ನೀನು ಅವರ ಬಾಯಿಗೆ ಬಿಸಿ ಬೂದಿ ಹಾಕುತ್ತಿರುವೆ: ನೀನು ವರ್ತನೆಯನ್ನು ಮುಂದುವರಿಸುತ್ತಿರುವ ವರೆಗೆ ದೇವಚರನೊಬ್ಬನು ನಿನ್ನ ಬೆಂಬಲಕ್ಕಿರುವನು.''

ಕುರ್‌ಆನ್ ಅತಿ ಕೆಟ್ಟ ವೈರಿಗಳನ್ನು ಕ್ಷಮಿಸುವುದನ್ನು ಕಲಿಸಿದೆ. ಯಹೂದಿಯರ ವೈರ-ವಿದ್ವೇಷವು ಜನಜನಿತವಾಗಿದೆ. ಕುತಂತ್ರವು ಅವರ ಸ್ವಭಾವದಲ್ಲಿ ಸೇರಿದೆ. ಮುಸ್ಲಿಮರ ವಿರುದ್ಧ ಅವರು ತರತರದ ಕುತಂತ್ರಗಳಲ್ಲಿ ತೊಡಗಿರುತ್ತಾರೆ. ಅವರೊಂದಿಗೆ ಹೀಗೆ ಹೇಳಲಾಯಿತು.

وَلَا تَزَالُ تَطَّلِعُ عَلَىٰ خَائِنَةٍ مِّنْهُمْ إِلَّا قَلِيلًا مِّنْهُمْ ۖ فَاعْفُ عَنْهُمْ وَاصْفَحْ ۚ إِنَّ اللَّهَ يُحِبُّ الْمُحْسِنِينَ ﴿١٣﴾

''ಅನುದಿನವೂ ಅವರ ಅಪ್ರಾಮಾಣಿಕತೆಯ ಒಂದಲ್ಲೊಂದು ರಹಸ್ಯವು ನಿಮ್ಮ ಮುಂದೆ ಬೆಳಕಿಗೆ ಬರುತ್ತಲೇ ಇರುತ್ತದೆ. ಈ ದೋಷದಿಂದ ವಿರಹಿತರಾದವರು ಅವರಲ್ಲಿ ಅತಿ ವಿರಳ. (ಹೀಗಿರುತ್ತಾ, ಅವರು ಎಂತಹ ಕೀಟಲೆಗೈದರೂ ಅದು ಅವರಿಂದ ಪ್ರತೀಕ್ಷಿತವಾದುದೇ ಆಗಿರುತ್ತದೆ.) ಆದುದರಿಂದ ಅವರನ್ನು ಕ್ಷಮಿಸಿರಿ ಮತ್ತು ಅವರ ವರ್ತನೆಗಳನ್ನು ನಿರ್ಲಕ್ಷಿಸುತ್ತಲಿರಿ. ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ.'' (ಪವಿತ್ರ ಕುರ್‌ಆನ್, 5: 13)

ಇಲ್ಲಿ 'ಅಫ್ವೂ' ಮತ್ತು 'ಸಫಹ್' ಎಂಬೆರಡು ಪದಗಳನ್ನು ಬಳಸಲಾಗಿದೆ. ಎರಡರ ಅರ್ಥವೂ ಸಾಮಾನ್ಯ ಒಂದೇ ಆಗಿದೆ. ಇದರಲ್ಲಿ ದುಷ್ಟರನ್ನು ಶಿಕ್ಷಿಸದಿರುವುದು, ಕೋಪವನ್ನು ತೋರ್ಪಡಿಸದಿರುವುದು, ಬೈಯದಿರುವುದು ಇತ್ಯಾದಿ ಗುಣಗಳು ಸೇರುತ್ತವೆ. ಇದು ದೊಡ್ಡ ನೈತಿಕ ವರ್ತನೆಯಾಗಿದೆ. ಆದರೆ ಅತಿರೇಕವೆಸಗಿದವರನ್ನು ಹೃದಯಾಂತರಾಳದಿಂದ ಕ್ಷಮಿಸುವುದು, ಅವರು ಏನೂ ಮಾಡಿಲ್ಲ ಎಂಬಂತೆ ಅವರೊಂದಿಗೆ ವರ್ತಿಸುವುದು ಅದಕ್ಕಿಂತಲೂ ಶ್ರೇಷ್ಠ ಗುಣಗಳಾಗಿವೆ. ಇಸ್ಲಾಮ್ ಇದನ್ನೇ ಇಷ್ಟಪಡುತ್ತದೆ.

ಬಹುದೇವ ವಿಶ್ವಾಸಿಗಳ ಎಲ್ಲ ಅತಿರೇಕಗಳ ಹೊರತಾಗಿಯೂ ಅವರನ್ನು ಕ್ಷಮಿಸಿ ಬಿಡುವಂತೆ ಆಜ್ಞಾಪಿಸಲ್ಪಾಗಿದೆ.

وَقِيلِهِ يَا رَبِّ إِنَّ هَٰؤُلَاءِ قَوْمٌ لَّا يُؤْمِنُونَ ﴿٨٨﴾ فَاصْفَحْ عَنْهُمْ وَقُلْ سَلَامٌ ۚ فَسَوْفَ يَعْلَمُونَ ﴿٨٩﴾

''ಪ್ರಭೂ, ಇವರು ವಿಶ್ವಾಸವಿಡುವವರಲ್ಲ' ಎಂಬ ಸಂದೇಶವಾಹಕರ ಮಾತಿನಾಣೆ! ಸಂದೇಶವಾಹಕರೇ ಇವರನ್ನು ಮನ್ನಿಸಿರಿ ಮತ್ತು ನಿಮಗೆ ಸಲಾಮ್(ಶಾಂತಿ) ಎಂದು ಹೇಳಿರಿ. ಸದ್ಯವೇ ಇವರಿಗೆ ತಿಳಿದು ಬರುವುದು.'' (ಪವಿತ್ರ ಕುರ್‌ಆನ್, 43: 88-89)

وَإِنَّ السَّاعَةَ لَآتِيَةٌ فَاصْفَحِ الصَّفْحَ الْجَمِيلَ ﴿٨٥﴾

''ಮತ್ತು ತೀರ್ಮಾನದ ಗಳಿಗೆಯು ಖಂಡಿತವಾಗಿಯೂ ಬರಲಿದೆ. ಆದುದರಿಂದ ಓ ಪೈಗಂಬರರೇ, ನೀವು (ಇವರ ಅಸಭ್ಯ ವರ್ತನೆಗೆ ಪ್ರತಿಯಾಗಿ) ಸೌಜನ್ಯ ಪೂರ್ಣ ಕ್ಷಮೆಯೊಂದಿಗೆ ವರ್ತಿಸಿರಿ.'' (ಪವಿತ್ರ ಕುರ್‌ಆನ್, 15: 85)

ಪ್ರತೀಕಾರಕ್ಕಿಂತ ಕ್ಷಮೆ ಪ್ರಶಂಸಾರ್ಹ

ಕುರ್‌ಆನಿನಲ್ಲಿ ಅಕ್ರಮ-ಅತ್ಯಾಚಾರವನ್ನು ಪ್ರತಿರೋಧಿಸುವ ಕಾನೂನು ಪರ ಹಕ್ಕನ್ನು ಅಂಗೀಕರಿಸುವುದರೊಂದಿಗೆ ಕ್ಷಮಿಸುವುದನ್ನು ಪ್ರೋತ್ಸಾಹಿಸಲಾಗಿದೆ. ಮರ್ದಿತನಿಗೆ ಮರ್ದಕನಿಂದ ಪ್ರತೀಕಾರ ಪಡೆಯುವ ಹಕ್ಕು ಖಂಡಿತ ಇದೆ. ಆದರೆ ಅದು ಕಡ್ಡಾಯವೇನಲ್ಲ. ಅವನು ತನ್ನ ಈ ಹಕ್ಕನ್ನು ಪ್ರಯೋಗಿಸದೆ ಕ್ಷಮಿಸಿ ಬಿಟ್ಟರೆ ಅದು ಪರಿಣಾಮದ ದೃಷ್ಟಿಯಿಂದ ಉತ್ತಮ. ಅದು ಅವನ ನೈತಿಕ ವಿಜಯವಾಗುವುದು. ಕುರ್‌ಆನ್ ಇದನ್ನೇ ಬಯಸುತ್ತದೆ.

وَإِنْ عَاقَبْتُمْ فَعَاقِبُوا بِمِثْلِ مَا عُوقِبْتُم بِهِ ۖ وَلَئِن صَبَرْتُمْ لَهُوَ
خَيْرٌ لِّلصَّابِرِينَ ﴿١٢٦﴾

''ನೀವು ಪ್ರತೀಕಾರವೆಸಗುವುದಿದ್ದರೆ ನಿಮ್ಮ ಮೇಲೆ ಅತಿರೇಕವೆಸಗಲಾಗಿದ್ದಷ್ಟು ಮಾತ್ರ ಎಸಗಿರಿ. ಆದರೆ, ನೀವು ತಾಳ್ಮೆ ವಹಿಸಿದರೆ ನಿಶ್ಚಯವಾಗಿಯೂ ಇದು ಸಹನಶೀಲರಿಗೆ ಅತ್ಯುತ್ತಮ.'' (ಪವಿತ್ರ ಕುರ್‌ಆನ್, 16: 126)

ಪ್ರತೀಕಾರ ಅನಿವಾರ್ಯವಲ್ಲವೆಂದು ಇದರಲ್ಲಿ ಸ್ಪಷ್ಟ ಪಡಿಸಲಾಯಿತು. ಆದರೆ ಒಬ್ಬನು ಪ್ರತೀಕಾರ ಪಡೆಯಲೇ ಬಯಸಿದರೆ, ತನ್ನೊಂದಿಗೆ ಎಷ್ಟು ಅತಿರೇಕವಾಗಿದೆಯೋ ಅಥವಾ ತನಗೆ ಎಷ್ಟು ಹಾನಿಯುಂಟಾಗಿದೆಯೋ ಅಷ್ಟೇ ಪ್ರತೀಕಾರ ಪಡೆಯಬಹುದಾಗಿದೆ. ಆದರೆ ಸಹನೆ ವಹಿಸುವುದು ಉತ್ತಮ. ಅಶ್ಶೂರಾ ಅಧ್ಯಾಯದಲ್ಲಿ ಇದನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಲಾಗಿದೆ.

وَجَزَاءُ سَيِّئَةٍ سَيِّئَةٌ مِّثْلُهَا ۖ فَمَنْ عَفَا وَأَصْلَحَ فَأَجْرُهُ عَلَى اللَّهِ ۚ إِنَّهُ
لَا يُحِبُّ الظَّالِمِينَ ﴿٤٠﴾ وَلَمَنِ انتَصَرَ بَعْدَ ظُلْمِهِ فَأُولَٰئِكَ مَا عَلَيْهِم مِّن
سَبِيلٍ ﴿٤١﴾ إِنَّمَا السَّبِيلُ عَلَى الَّذِينَ يَظْلِمُونَ النَّاسَ وَيَبْغُونَ فِي
الْأَرْضِ بِغَيْرِ الْحَقِّ ۚ أُولَٰئِكَ لَهُمْ عَذَابٌ أَلِيمٌ ﴿٤٢﴾ وَلَمَن صَبَرَ وَغَفَرَ إِنَّ
ذَٰلِكَ لَمِنْ عَزْمِ الْأُمُورِ ﴿٤٣﴾

''ಕೆಡುಕಿನ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಇನ್ನು ಯಾರಾದರೂ ಕ್ಷಮಿಸಿಬಿಟ್ಟರೆ ಹಾಗೂ ಸುಧಾರಿಸಿಕೊಂಡರೆ ಅದರ ಪ್ರತಿಫಲದ ಹೊಣೆ ಅಲ್ಲಾಹನ ಮೇಲಿದೆ. ನಿಶ್ಚಯವಾಗಿಯೂ ಅವನು ಅಕ್ರಮಿಗಳನ್ನು ಮೆಚ್ಚುವುದಿಲ್ಲ. ತಮ್ಮ ಮೇಲೆ ಅಕ್ರಮವಾದ ಬಳಿಕ ಪ್ರತೀಕಾರವೆಸಗಿದವರನ್ನು ಆಕ್ಷೇಪಿಸಲಾಗದು. ವಾಸ್ತವದಲ್ಲಿ ಇತರರ ಮೇಲೆ ಅಕ್ರಮವೆಸಗುವವರು ಮತ್ತು ಭೂಮಿಯಲ್ಲಿ ಅನ್ಯಾಯವಾಗಿ ಅತಿರೇಕವೆಸಗುವವರೇ ಆಕ್ಷೇಪಕ್ಕೆ ಅರ್ಹರು. ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ. ಆದರೆ ಯಾರಾದರೂ ಸಹನೆಯಿಂದ ವರ್ತಿಸಿದರೆ ಹಾಗೂ ಕ್ಷಮಿಸಿದರೆ ಇದೊಂದು ಮಹಾ ಸಾಹಸದ ಕಾರ್ಯಗಳಲ್ಲಾಗುವುದು.''

(ಪವಿತ್ರ ಕುರ್‌ಆನ್, 42: 40-43)

ಈ ರೀತಿ ಇಸ್ಲಾಮ್ ಮಾನವನಿಗೆ ಅಕ್ರಮದ ವಿರುದ್ಧ ಪ್ರತೀಕಾರ ಪಡೆಯುವ ಕಾನೂನುಬದ್ಧ ಹಕ್ಕನ್ನು ನೀಡಿದೆ. ಅದರೊಂದಿಗೆ ಕ್ಷಮೆ ಮತ್ತು ಉತ್ತಮ ನೈತಿಕ ವರ್ತನೆಯನ್ನು ತೋರಬೇಕೆಂದು ಪ್ರೇರೇಪಿಸಿದೆ. ಇದರಿಂದ ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ಪ್ರತೀಕಾರ ಪಡೆಯಬಹುದೆಂಬ ಅಂಶವೂ ಹೊರಡುತ್ತದೆ. ಅದು ಕೂಡಾ ವೈಯಕ್ತಿಕ ಅಥವಾ ಸಾಮುದಾಯಿಕ ಹಿತಾಸಕ್ತಿಯ ಪ್ರಮಾಣ ಹೆಚ್ಚಿದ್ದರೆ ಮಾತ್ರ. ಅನ್ಯಥಾ ಕ್ಷಮಿಸಿ ಬಿಡುವುದೇ ಉತ್ತಮ. ಕುರ್‌ಆನಿನಲ್ಲಿ ಕ್ಷಮಿಸಬೇಕೆಂದಿರುವಲ್ಲಿ ಸುಧಾರಣೆಯ ಆದೇಶವನ್ನೂ ನೀಡಲಾಗಿದೆ.

فَمَنْ عَفَا وَأَصْلَحَ فَأَجْرُهُ عَلَى اللَّهِ ۚ إِنَّهُ لَا يُحِبُّ الظَّالِمِينَ ۞

''ಇನ್ನು ಯಾರಾದರೂ ಕ್ಷಮಿಸಿಬಿಟ್ಟರೆ ಹಾಗೂ ಸುಧಾರಿಸಿಕೊಂಡರೆ ಅದರ ಪ್ರತಿಫಲದ ಹೊಣೆ ಅಲ್ಲಾಹನ ಮೇಲಿದೆ. ನಿಶ್ಚಯವಾಗಿಯೂ ಅವನು ಅಕ್ರಮಿಗಳನ್ನು ಮೆಚ್ಚುವುದಿಲ್ಲ.''

(ಪವಿತ್ರ ಕುರ್‌ಆನ್, 42: 40)

ಪರಿಸ್ಥಿತಿಯ ಸುಧಾರಣೆಗಾಗಿ ಮೊತ್ತ ಮೊದಲು ಸಂಬಂಧ ಕೆಡಲು ಕಾರಣವೇನು, ತನ್ನ ತತ್ವಾದರ್ಶಗಳಲ್ಲಿದ್ದುಕೊಂಡು ಅದನ್ನು ನಿವಾರಿಸುವ ಮಾರ್ಗೋಪಾಯಗಳೇನು? ವೈರ-ವಿದ್ವೇಷದ ಬದಲು ಪ್ರೇಮ-ಸೌಹಾರ್ದದ ವಾತಾವರಣವನ್ನು ಹೇಗೆ ಉಂಟು ಮಾಡಬಹುದು ಎಂಬ ಬಗ್ಗೆ ಗಂಭೀರ ಪ್ರಯತ್ನ ಅಗತ್ಯ. ಅದಕ್ಕಾಗಿ ಮೊದಲು ಶತ್ರುವನ್ನು ಕ್ಷಮಿಸಬೇಕಾದೀತು. ಅನಂತರ ಸಂಬಂಧವನ್ನು ಉತ್ತಮ ಪಡಿಸಲು ಸೂಕ್ತ ಉಪಾಯವನ್ನು ಕಂಡುಕೊಳ್ಳಬೇಕಾದೀತು. ಅನಂತರ ಯಶಸ್ಸನ್ನು ನಿರೀಕ್ಷಿಸಬಹುದು.

ಕ್ಷಮೆಯ ಶ್ರೇಷ್ಠ ಮಾದರಿಗಳು

ಕ್ಷಮೆಯ ಅತ್ಯುನ್ನತ ಮಾದರಿಯು ಯೂಸುಫ್(ಅ) ಅವರ ಬದುಕಿನಲ್ಲಿ ಕಾಣಸಿಗುತ್ತದೆ. ಅವರ ಸಹೋದರರು ದ್ವೇಷ-ಅಸೂಯೆಯಿಂದಾಗಿ ವೈರಿಗಳೂ ನಾಚುವಂತೆ ಅವರೊಂದಿಗೆ ಕೆಟ್ಟದಾಗಿ ವರ್ತಿಸಿದರು. ವಿಹಾರಾರ್ಥವೆಂದು ಹೇಳಿ ಅವರನ್ನು ಮನೆಯಿಂದ ಕರೆದೊಯ್ದು ಒಂದು ಪಾಳು ಬಾವಿಗೆ ದೂಡಿ ಹಾಕಿದರು. ಅಲ್ಲಾಹನು ಅವರನ್ನು ರಕ್ಷಿಸಿದನು. ಅವರನ್ನು ಬಾವಿಯಿಂದ ಹೊರತೆಗೆಯಲಾಯಿತು. ಅನೇಕ ಸತ್ವಪರೀಕ್ಷೆಗಳನ್ನು ಹಾದು ಅವರು ಈಜಿಪ್ಟ್‌ಗೆ ತಲುಪಿದರು. ಅವರ ಸಹೋದರರಿಗೆ ಅವರ ಈ ಯಶಸ್ಸು ಮತ್ತು ಉನ್ನತಿಯ ಬಗ್ಗೆ ತಿಳಿದಿರಲಿಲ್ಲ. ಅವರು ತನ್ನ ಆಸ್ಥಾನಕ್ಕೆ ಸಹಾಯ ಯಾಚಿಸಿ ಬಂದ ಸಹೋದರರಿಗೆ ಚೆನ್ನಾಗಿ

ಸಹಾಯ ಮಾಡಿದರು. ಅವರ ಈ ಮಹಾ ಉಪಕಾರಿಯು ಹಿಂದೊಮ್ಮೆ ನಾವೇ ಬಾವಿಗೆ ದೂಡಿ ಹಾಕಿದ ತಮ್ಮ ಸಹೋದರನೆಂದು ತಿಳಿದು ನಾಚಿಕೆಯಿಂದ ತಲೆ ತಗ್ಗಿಸಬೇಕಾಯಿತು. ಅವರು ತಮ್ಮ ತಪ್ಪನ್ನು ಒಪ್ಪಿಕೊಂಡರು. ಯೂಸುಫ್(ಅ) ಅವರ ಎಲ್ಲ ಅತಿರೇಕದ ವರ್ತನೆಗಳನ್ನು ಸಂಪೂರ್ಣ ಮರೆತು ಹೀಗೆ ಘೋಷಿಸಿದರು.

لَا تَثْرِيْبَ عَلَيْكُمُ الْيَوْمَ ۖ يَغْفِرُ اللّٰهُ لَكُمْ ۚ وَهُوَ اَرْحَمُ الرّٰحِمِيْنَ ﴿٩٢﴾

''ಆಗ ಅವರು, ''ಇಂದು ನಿಮ್ಮ ಮೇಲೆ ಯಾವ ದೋಷಾರೋಪಣೆಯೂ ಇಲ್ಲ, ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ. ಅವನು ಎಲ್ಲರಿಗಿಂತಲೂ ಮಿಗಿಲಾದ ದಯಾಮಯನಾಗಿರುತ್ತಾನೆ.'' (ಪವಿತ್ರ ಕುರ್‌ಆನ್, 12: 92)

ಈ ಕ್ಷಮೆಯ ಮಾದರಿಯನ್ನು ಲೋಕವು ಮತ್ತೊಮ್ಮೆ ಪ್ರವಾದಿ ಮುಹಮ್ಮದ್‌ರ(ಸ) ಬದುಕಿನಲ್ಲಿ ಕಂಡಿತು. ತಮ್ಮನ್ನು ನಿರಂತರ ಪೀಡಿಸಿದ, ಕಿರುಕುಳ ಕೊಟ್ಟ, ಕೊನೆಗೆ ಊರನ್ನೇ ಬಿಟ್ಟು ಮದೀನಕ್ಕೆ ವಲಸೆ ಹೋಗುವಂತೆ ನಿರ್ಬಂಧಿಸಿದ, ಜೀವಮಾನವಿಡೀ ಅವರೊಂದಿಗೆ ಜಗಳಾಡಿದ, ಅವರನ್ನೂ ಅವರ ಸಂಗಾತಿಗಳನ್ನೂ ಭೂಮಿಯಿಂದ ನಿರ್ಮೂಲನ ಮಾಡಿಯೇ ತೀರುವೆವೆಂದು ಪಣ ತೊಟ್ಟಿದ್ದ ಅವರ ರಕ್ತದಾಹಿಗಳಾದ ಬಹುದೇವವಿಶ್ವಾಸಿಗಳು ಮಕ್ಕಾ ವಿಜಯದ ನಂತರ ತಮ್ಮ ಬಗ್ಗೆ ಏನು ತೀರ್ಪು ಹೊರ ಬರುವುದೋ ಎಂದು ತಲೆ ತಗ್ಗಿಸಿ ನಿಂತಾಗ, ಪ್ರವಾದಿ(ಸ) ಕೇಳಿದರು-

''ಕುರೈಶರೇ! ಇಂದು ನಾನು ನಿಮ್ಮೊಂದಿಗೆ ಹೇಗೆ ವರ್ತಿಸುವೆನೆಂದು ಭಾವಿಸಿದ್ದೀರಿ.'' ಆ ಜನರು ತಮ್ಮ ಅನುಭವದ ಆಧಾರದಲ್ಲಿ ಉತ್ತರಿಸಿದರು. ''ನಾವು ತಮ್ಮಿಂದ ಒಳಿತನ್ನೇ ನಿರೀಕ್ಷಿಸುತ್ತೇವೆ. ತಾವು ಸಜ್ಜನ ಸಹೋದರ ಮತ್ತು ಸಜ್ಜನ ಸಹೋದರನ ಸಂತತಿಯೇ ಆಗಿದ್ದೀರಿ.'' ಆಗ ಪ್ರವಾದಿ(ಸ) ಹೀಗೆ ಘೋಷಿಸಿದರು- **اذهبوا فانتم الطلقاء** ಹೋಗಿರಿ, ನೀವೆಲ್ಲ ಸ್ವತಂತ್ರರು. (ಸೀರತ್ ಇಬ್ನು ಹಿಶಾಮ್)

ಪ್ರವಾದಿ(ಸ) ಮಕ್ಕಾ ವಿಜಯದ ದಿವಸ ಸಫ್ವಾನ್ ಬಿನ್ ಉಮಯ್ಯ, ಅಬೂ ಸುಫ್ಯಾನ್ ಬಿನ್ ಹರಬ್ ಮತ್ತು ಹಾರಿಸ್ ಬಿನ್ ಹಿಶಾಮ್‌ರನ್ನು ಕರೆಸಿದರು. ಉಮರ್(ರ) ಹೇಳುತ್ತಾರೆ- ಇಂದು ಅಲ್ಲಾಹನು ಈ ವೈರಿಗಳ ಮೇಲೆ ನಮಗೆ ಪ್ರಾಬಲ್ಯ ನೀಡಿದ್ದಾನೆಂದು ಭಾವಿಸಿದ್ದೆ. ಆದರೆ ಪ್ರವಾದಿ(ಸ) ಹೇಳಿದರು-

مثلی و مثلكم كما قال يوسف لاخوته لَا تَثْرِيْبَ عَلَيْكُمُ الْيَوْمَ يَغْفِرُ اللّٰهُ لَكُمْ

(الطبقات الكبرى)

''ನನ್ನ ಮತ್ತು ನಿಮ್ಮ ಉದಾಹರಣೆಯು ಯೂಸುಫ್(ಅ) ಮತ್ತು ಅವರ ಸಹೋದರರಂತಿದೆ. ಅವರು ಸಹೋದರರೊಂದಿಗೆ, ಇಂದು ನಿಮ್ಮ ಮೇಲೆ ಯಾವುದೇ ಪ್ರತೀಕಾರವಿಲ್ಲ, ನಿಮ್ಮನ್ನು ಅಲ್ಲಾಹನು ಕ್ಷಮಿಸಲಿ ಎಂದು ಹೇಳಿದ್ದರು.'' ಉಮರ್(ರ) ಹೇಳುತ್ತಾರೆ- ಪ್ರವಾದಿಯವರ(ಸ) ಬಾಯಿಂದ ಈ ಮಾತುಗಳು ಹೊರಡುತ್ತಲೇ ನಾನು ನಾಚಿಕೆಯಿಂದ ತಲೆತಗ್ಗಿಸಿದೆ. ನಾನೇನು ಭಾವಿಸಿದ್ದೆ, ಪ್ರವಾದಿಯವರು(ಸ) ಚಾರಿತ್ರ್ಯದ ಯಾವ ಉನ್ನತ ಸ್ತರದಿಂದ ಮಾತಾಡುತ್ತಿದ್ದಾರೆಂದು ನನಗನಿಸಿತು. (ತಬಕಾತ್ ಇಬ್ನು ಸಅದ್)

ಅಬೂ ಹುರೈರಾ(ರ) ಹೇಳುತ್ತಾರೆ- ಮಕ್ಕಾ ವಿಜಯದ ಸಂದರ್ಭದಲ್ಲಿ ಪ್ರವಾದಿ(ಸ) ತವಾಫ್‌ಗಾಗಿ ಕಅಬಾಲಯಕ್ಕೆ ಹೋದರು. ಅದರ ಚಪ್ಪಡಿಯ ಎರಡು ಬದಿಗಳನ್ನು ಹಿಡಿದು (ಖುರೈಶರೊಂದಿಗೆ) ಹೇಳಿದರು- ಏನು ಆಲೋಚಿಸುತ್ತೀರಿ, ಏನು ನಿಮ್ಮ ಭಾವನೆ! ''ಅವರು ಹೇಳಿದರು- 'ತಾವು ನಮ್ಮ ಸಹೋದರ. ಪಿತೃ ಸಹೋದರನ ಪುತ್ರ. ಸಹನಾಮೂರ್ತಿಯೂ ಕರುಣಾಳುವೂ ಆಗಿದ್ದೀರಿ.' ಇದನ್ನವರು ಮೂರು ಬಾರಿ ಆವರ್ತಿಸಿ ಹೇಳಿದರು. ಪ್ರವಾದಿ(ಸ) ಹೇಳಿದರು- ಹೋಗಿರಿ. ನಿಮ್ಮ ಮೇಲೆ ಇಂದು ಯಾವುದೇ ಪ್ರತೀಕಾರ ಕ್ರಮವಿಲ್ಲ, ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ. ಅವನು ಕರುಣಾಳುಗಳಲ್ಲಿ ಮಹಾ ಕರುಣಾಳುವಾಗಿದ್ದಾನೆ.'' ಈ ಘೋಷಣೆಯಿಂದ ಅವರಿಗೆ ಪುನರ್ಜನ್ಮ ದೊರೆತಂತಾಯಿತು, ಅನಂತರ ಅವರೆಲ್ಲರೂ ಇಸ್ಲಾಮಿನೊಳಗೆ ಪ್ರವೇಶಿಸಿದರು.

ಇನ್ನೊಂದು ಉದಾಹರಣೆ. ಬನೂ ಮುಸ್ತಲಿಕ್ ಯುದ್ಧದಲ್ಲಿ ಪ್ರವಾದಿಯವರೊಂದಿಗೆ ಆಯಿಶಾ(ರ) ಇದ್ದರು. ಮರಳುವಾಗ ತನ್ನ ಕಳೆದು ಹೋದ ಮುತ್ತಿನ ಹಾರವನ್ನು ಹುಡುಕುತ್ತಾ ಸೇನೆಯಿಂದ ಹಿಂದೆ ಉಳಿದು ಬಿಟ್ಟರು. ಸಫ್ವಾನ್ ಬಿನ್ ಮುಅತ್ತಲ್‌ರೊಂದಿಗೆ ಅವರು ಬಂದು ಸೇನೆಯನ್ನು ಸೇರಿದರು. ಆಗಲೇ ಕೆಲವು ಮುನಾಫಿಕರಲ್ಲಿ ಗುಸುಗುಸು ಆರಂಭವಾಯಿತು. ಅವರು ಆಯಿಶಾರ ಮೇಲೆ ಅಪವಾದ ಹೊರಿಸಿ ಬಿಟ್ಟರು. ಅದರಲ್ಲಿ ಮಿಸ್ತಹ್ ಎಂಬೋರ್ವ ಸಹಾಬಿಯೂ ಇದ್ದರು. ಅವರು ಕಡುಬಡವರಾಗಿದ್ದು ಅಬೂಬಕರ್‌ರವರ(ರ) ಹತ್ತಿರದ ಸಂಬಂಧಿಯಾಗಿದ್ದರು. ಅವರಿಗೆ ಅಬೂಬಕರ್(ರ) ಸಹಾಯ ಮಾಡುತ್ತಿದ್ದರು. ಆದರೆ ಈ ಘಟನೆಯ ಬಳಿಕ ಅವರಿಗೆ ಸಹಾಯ ಮಾಡುವುದನ್ನು ನಿಲ್ಲಿಸಿ ಬಿಟ್ಟರು. ಮಾತ್ರವಲ್ಲ ಇನ್ನೆಂದೂ ಸಹಾಯ ಮಾಡಲಾರೆನೆಂಬ ಶಪಥವನ್ನೂ ಹಾಕಿದರು. ಆಗಲೇ ಕುರ್‌ಆನ್ ಸೂಕ್ತ ಅವತೀರ್ಣಗೊಂಡಿತು.

وَلَا يَأْتَلِ أُولُوا الْفَضْلِ مِنكُمْ وَالسَّعَةِ أَن يُؤْتُوا أُولِي الْقُرْبَىٰ وَالْمَسَاكِينَ وَالْمُهَاجِرِينَ فِي سَبِيلِ اللَّهِ ۖ وَلْيَعْفُوا وَلْيَصْفَحُوا ۗ أَلَا تُحِبُّونَ أَن يَغْفِرَ اللَّهُ لَكُمْ ۗ وَاللَّهُ غَفُورٌ رَّحِيمٌ ﴿٢٢﴾

''ನಿಮ್ಮಲ್ಲಿ ಅನುಗ್ರಹೀತರು ಮತ್ತು ಸಾಮರ್ಥ್ಯವುಳ್ಳವರು ತಮ್ಮ ಸಂಬಂಧಿಕರಿಗೂ ದರಿದ್ರರಿಗೂ ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋಗುವವರಿಗೂ ಸಹಾಯ ಮಾಡಲಿಕ್ಕಿಲ್ಲವೆಂದು ಪ್ರತಿಜ್ಞೆ ಮಾಡಿ ಬಿಡಬಾರದು. ಅವರನ್ನು ಕ್ಷಮಿಸಿ ಬಿಡಬೇಕು ಮತ್ತು ಮನ್ನಿಸಬೇಕು. ಅಲ್ಲಾಹನು ನಿಮ್ಮನ್ನು ಕ್ಷಮಿಸಬೇಕೆಂದು ನೀವು ಇಚ್ಛಿಸುವುದಿಲ್ಲವೇ? ಅಲ್ಲಾಹ್ ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.'' (ಪವಿತ್ರ ಕುರ್‌ಆನ್, 24: 22)

ಆಗ ಅಬೂಬಕರ್(ರ) ಹೇಳಿದರು- 'ಯಾ ಅಲ್ಲಾಹ್! ನಾನು ನಿನ್ನ ಕ್ಷಮೆ ಬಯಸುವವನಾಗಿದ್ದೇನೆ.' ಆ ಬಳಿಕ ಮಿಸ್ತಹ್‌ರಿಗೆ ನೀಡುತ್ತಿದ್ದ ಸಹಾಯವನ್ನು ಮುಂದುವರಿಸಿದರು. ಇನ್ನೆಂದೂ ನಿಲ್ಲಿಸಲಾರೆನೆಂದೂ ವಾಗ್ದಾನ ಮಾಡಿದರು. (ಬುಖಾರಿ)

ಇಂತಹ ಪರಿಶುದ್ಧ ಉದಾಹರಣೆಗಳನ್ನು ವಿಶ್ವಾಸಿಗಳು ಸದಾ ಗಮನದಲ್ಲಿರಿಸಬೇಕು.

ಮಧುರ ಮಾತು

ಕೆಲವೊಮ್ಮೆ ನಾಲಗೆಯ ತಪ್ಪು ಬಳಕೆಯು ಪರಿಸ್ಥಿತಿಯನ್ನು ಕೆಡಿಸಿ ಬಿಡುತ್ತದೆ. ಅದನ್ನು ತಹಬಂದಿಗೆ ತರುವುದು ಕಷ್ಟ. ಮಧುರ ಮಾತು ಪರಿಸ್ಥಿತಿಯನ್ನು ಕೆಡುವುದರಿಂದ ರಕ್ಷಿಸುತ್ತದೆ. ಅದನ್ನು ಉತ್ತಮ ಪಡಿಸಲು ನೆರವಾಗುತ್ತದೆ. ಎದುರು ಕಕ್ಷಿಯ ಮೇಲೆ ಅದು ಉತ್ತಮ ಪರಿಣಾಮ ಬೀರುತ್ತದೆ. ಮಾತನ್ನು ಶಾಂತಚಿತ್ತದಿಂದ ಕೇಳಲು ಮತ್ತು ಆಲೋಚಿಸಲು ಅವನನ್ನು ಪ್ರೇರೇಪಿಸುತ್ತದೆ. ಇದು ಸಚ್ಚಾರಿತ್ರ್ಯದ ಪ್ರಥಮ ಸೋಪಾನ. ಮೇಲಿನ ಹಂತಗಳು ಅನಂತರ ಬರುತ್ತವೆ. ಬನಿ ಇಸ್ರಾಈಲರಿಗೆ ಹೀಗೆ ಆದೇಶಿಸಲಾಗಿತ್ತು.

وَقُولُوا لِلنَّاسِ حُسْنًا وَّاَقِيمُوا الصَّلٰوةَ وَاٰتُوا الزَّكٰوةَ ۭ

"...ಜನರೊಡನೆ ಒಳ್ಳೆಯ ಮಾತುಗಳನ್ನಾಡ ಬೇಕೆಂದೂ ನಮಾಝುನ್ನು ಸಂಸ್ಥಾಪಿಸಬೇಕೆಂದು 'ಝಕಾತ್' (ಕಡ್ಡಾಯದಾನ) ಕೊಡಬೇಕೆಂದು..."

(ಪವಿತ್ರ ಕುರ್‌ಆನ್, 2: 83)

ಇಲ್ಲಿ ನಮಾಝ್ ಮತ್ತು ಝಕಾತ್‌ಗಿಂತ ಮೊದಲು ಉತ್ತಮ ಮಾತಿನ ಕುರಿತು ಪ್ರಸ್ತಾಪಿಸಿರುವುದು ಗಮನಾರ್ಹವಾಗಿದೆ. ಮಾತಿನಿಂದ ಸಂಬಂಧ ಆರಂಭಗೊಳ್ಳುವುದೇ ಇದಕ್ಕೆ ಕಾರಣವಾಗಿದೆ. ಕೆಲವೊಮ್ಮೆ ನಮಾಝ್ ಮತ್ತು ಝಕಾತ್‌ಗಿಂತಲೂ ಮಾತಿಗೆ ಹೆಚ್ಚು ಮಹತ್ವವಿರುತ್ತದೆ. ಅಭಿಸಂಬೋಧಿತನು ಮಾತಾಡುವವನ ಝಕಾತ್, ನಮಾಝ್ ಅಥವಾ ಆರಾಧನಾಕರ್ಮಗಳನ್ನು ನೋಡುವುದಿಲ್ಲ, ಅವನು ಮಾತಾಡುವ ಶೈಲಿಯನ್ನು ನೋಡುತ್ತಾನೆ. ಆದ್ದರಿಂದಲೇ ಜನರೊಂದಿಗೆ ಸಭ್ಯ ರೀತಿಯಲ್ಲಿ ಮಾತಾಡಬೇಕೆಂದು ಆಜ್ಞಾಪಿಸಲಾಗಿದೆ.

ಕುರ್‌ಆನಿನಲ್ಲಿ 'ಜನರೊಂದಿಗೆ ಅತ್ಯುತ್ತಮ ರೀತಿಯಲ್ಲಿ ಮಾತಾಡಿರಿ' ಎಂದು ಹೇಳಲಾಗಿದೆ. ನಿಮ್ಮ ಮಾತು ಅತ್ಯಂತ ಸುಮಧುರ ಮತ್ತು ಆಕರ್ಷಕವಾಗಿರಲಿ ಎಂದರ್ಥ

(ಝಮಕ್ಷರಿ)

ಸುಮಧುರ ಮಾತು ಎಂದರೆ ಮಾತು ಸಭ್ಯ ಮತ್ತು ಯುಕ್ತಿಪೂರ್ಣವಾಗಿರಬೇಕು. ಮಾತಿನಲ್ಲಿ ನ್ಯಾಯ-ನೀತಿಯಿರಬೇಕು. ನೈತಿಕತೆಯ ಶಿಕ್ಷಣವಿರಬೇಕು. ಅಲ್ಲಾಹನ ಧರ್ಮದ ಪರಿಚಯ ಮಾಡಬೇಕು. ಒಳಿತಿನ ಆದೇಶ ಮತ್ತು ಕೆಡುಕನ್ನು ತಡೆಯುವ ಕರ್ತವ್ಯ ನಿರ್ವಹಿಸಬೇಕು ಎಂಬಿತ್ಯಾದಿ ವಿಷಯಗಳು ಸೇರಿವೆ. ಅದರಿಂದಾಗಿ ಸಮಾಜದಲ್ಲಿ ಮಾನವನ ಬಗ್ಗೆ ನಂಬಿಕೆ ಮೂಡುತ್ತದೆ. ಅವನು ಒಂದು ಉತ್ತಮ ಸಿದ್ಧಾಂತದ ವಾಹಕ ಮತ್ತು ತತ್ವನಿಷ್ಠನೆಂದು ಪರಿಗಣಿಸಲ್ಪಡುತ್ತಾನೆ. ಅವನ ಮಾತನ್ನು ಸುಲಭದಲ್ಲಿ ನಿರ್ಲಕ್ಷಿಸಲಾಗುವುದಿಲ್ಲ. ಇದೇ ಬೋಧನೆಯನ್ನು ಮುಸ್ಲಿಮರಿಗೆ ಈ ರೀತಿ ನೀಡಲಾಗಿದೆ.

وَقُلْ لِّعِبَادِيْ يَقُوْلُوا الَّتِيْ هِيَ اَحْسَنُ ۭ اِنَّ الشَّيْطٰنَ يَنْزَغُ بَيْنَهُمْ ۭ اِنَّ الشَّيْطٰنَ كَانَ لِلْاِنْسَانِ عَدُوًّا مُّبِيْنًا ۝

"ಓ ಪೈಗಂಬರರೇ! ನನ್ನ ದಾಸರೊಡನೆ, ಬಾಯಿಯಿಂದ ಅತ್ಯುತ್ತಮ ಮಾತನ್ನೇ

ಹೊರಡಿಸಲು ಹೇಳಿರಿ. ವಾಸ್ತವದಲ್ಲಿ ಶೈತಾನನು ಮಾನವರ ನಡುವೆ ಪಿತೂರಿ ನಡೆಸಲು ಯತ್ನಿಸುತ್ತಾನೆ. ವಸ್ತುತಃ ಶೈತಾನ್ ಮಾನವನ ಪ್ರತ್ಯಕ್ಷ ಶತ್ರು.'' (ಪವಿತ್ರ ಕುರ್‌ಆನ್, 17: 53)

ಇದರ ಅರ್ಥ ಮಾತಿನ ಶೈಲಿ ಉತ್ತಮವಾಗಿರಬೇಕೆಂದಾಗಿದೆ. ಬೈಗುಳ, ತಮಾಷೆ, ಲೇವಡಿ, ವೈಯಕ್ತಿಕ ದಾಳಿ, ಆರೋಪ, ಅಪವಾದಗಳಂತಹ ಕೇಡಿನಿಂದ ಮುಕ್ತವಾಗಿರಬೇಕು. ಮಾತು ಪ್ರೀತಿಪೂರ್ವಕ, ಸುಮಧುರ ಮತ್ತು ಮೋಹಕ ಶೈಲಿಯಲ್ಲಿರಬೇಕು. ಎದುರು ಕಕ್ಷಿಯು ತಿರಸ್ಕಾರದಿಂದ ದೂರವಾಗುವ ಬದಲು ಆಕರ್ಷಿತನಾಗಬೇಕು. ಏಕೆಂದರೆ ಮಾತಿನ ಶೈಲಿ ತಪ್ಪಿದರೆ ಶೈತಾನನಿಗೆ ನುಸುಳಲು ಅವಕಾಶ ದೊರೆಯುತ್ತದೆ. ಅವನು ಅವನ ಭಾವನೆಯನ್ನು ಕೆರಳಿಸುವನು. ಮಾತನ್ನು ಗ್ರಹಿಸದಂತೆ, ಒಂದು ವೇಳೆ ಗ್ರಹಿಸಿದರೂ ಸ್ವೀಕರಿಸದಂತೆ ಮಾಡಿಬಿಡುವನು. ಒಟ್ಟಿನಲ್ಲಿ ಶೈತಾನನು ಇಡೀ ವಾತಾವರಣವನ್ನೇ ಕೆಡಿಸಿ ಬಿಡುವನು. ಅದಕ್ಕೆ ಅವಕಾಶ ನೀಡಬಾರದು. ಇದುವೇ ಯಶಸ್ವಿ ಮಾತುಗಾರಿಕೆಯಾಗಿದೆ.

ವೈರಿಗಳೂ ಸ್ನೇಹಿತರಾಗುವರು

ಈ ವಿಷಯವನ್ನು ವಿವರವಾಗಿ ಇನ್ನೊಂದು ಕಡೆ ಪ್ರಸ್ತಾಪಿಸಲಾಗಿದೆ. ಅದರ ನೈತಿಕ ಪರಿಣಾಮವನ್ನೂ ವಿವರಿಸಲಾಗಿದೆ.

وَلَا تَسْتَوِي الْحَسَنَةُ وَلَا السَّيِّئَةُ ۚ ادْفَعْ بِالَّتِي هِيَ أَحْسَنُ فَإِذَا الَّذِي
بَيْنَكَ وَبَيْنَهُ عَدَاوَةٌ كَأَنَّهُ وَلِيٌّ حَمِيمٌ ﴿٣٤﴾ وَمَا يُلَقَّاهَا إِلَّا الَّذِينَ
صَبَرُوا وَمَا يُلَقَّاهَا إِلَّا ذُو حَظٍّ عَظِيمٍ ﴿٣٥﴾ وَإِمَّا يَنزَغَنَّكَ مِنَ الشَّيْطَانِ
نَزْغٌ فَاسْتَعِذْ بِاللَّهِ ۖ إِنَّهُ هُوَ السَّمِيعُ الْعَلِيمُ ﴿٣٦﴾

''ಸಂದೇಶವಾಹಕರೇ, ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ. ಈ ಗುಣವಿಶೇಷವು ಸಹನಶೀಲರಿಗಲ್ಲದೆ ಇನ್ನಾರಿಗೂ ಲಭ್ಯವಾಗುವುದಿಲ್ಲ. ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಮತ್ತಾರಿಗೂ ಪ್ರಾಪ್ತವಾಗುವುದಿಲ್ಲ. ನಿಮಗೆ ಶೈತಾನನ ಕಡೆಯಿಂದೇನಾದರೂ ಪ್ರಚೋದನೆಯುಂಟಾದರೆ ನೀವು ಅಲ್ಲಾಹನ ಅಭಯವನ್ನು ಯಾಚಿಸಿರಿ. ನಿಶ್ಚಯವಾಗಿಯೂ ಅವನು ಸಕಲವನ್ನೂ ಆಲಿಸುತ್ತಾನೆ ಮತ್ತು ಸಕಲವನ್ನೂ ಅರಿತಿದ್ದಾನೆ.'' (ಪವಿತ್ರ ಕುರ್‌ಆನ್, 41: 34-36)

ಈ ಸೂಕ್ತಗಳು ಮತ್ತು ಅವುಗಳ ಒಂದೊಂದು ಪದವೂ ಚಿಂತನಾರ್ಹವಾಗಿದೆ. ಪ್ರಸಕ್ತ ಪರಿಸ್ಥಿತಿಯಲ್ಲಿ ಅದರಿಂದ ಅತ್ಯುತ್ತಮ ಮಾರ್ಗದರ್ಶನ ಲಭಿಸುತ್ತದೆ. 'ಒಳಿತು-ಕೆಡುಕುಗಳು ಸರಿಸಮಾನವಲ್ಲ'ವೆಂದರೆ ಯಾವುದೇ ನೀತಿ ಸಂಹಿತೆ ಮತ್ತು ಕಾನೂನಿನ ಪ್ರಕಾರ, ಯಾವನೇ ಬುದ್ಧಿಜೀವಿಯ ದೃಷ್ಟಿಯಲ್ಲಿ ಒಳಿತು-ಕೆಡುಕುಗಳು ಸರಿಸಮಾನವೆಂದು ಪರಿಗಣಿಸಲಾಗುವುದಿಲ್ಲ. ಒಳಿತನ್ನು ಗೌರವದ ದೃಷ್ಟಿಯಿಂದ ನೋಡಲಾದರೆ, ಕೆಡುಕನ್ನು ಕೆಟ್ಟ ದೃಷ್ಟಿಯಿಂದ ನೋಡಲಾಗುತ್ತದೆ. ಒಳಿತಿನ ಮತ್ತು ಕೆಡುಕಿನ ಪರಿಣಾಮಗಳು ಭಿನ್ನ

ಭಿನ್ನವಾಗಿವೆ. ಒಳಿತಿನ ಅಂತಿಮ ಪರಿಣಾಮವು ಇಹ-ಪರಲೋಕಗಳಲ್ಲಿ ಕೆಡುಕಿನ ಪರಿಣಾಮಕ್ಕೆ ವ್ಯತಿರಿಕ್ತವಾಗಿದೆ. ಆದ್ದರಿಂದ ಒಳಿತನ್ನು ಕೈಗೊಳ್ಳಿರಿ. ಕೆಡುಕಿನಿಂದ ದೂರವಿರಿ. ನಿಮ್ಮ ವಿರೋಧಿಗಳು ಪರಿಹಾಸ್ಯ ಮಾಡುತ್ತಾರೆ, ಬೈಯುತ್ತಾರೆ, ಉದ್ಧಟತನದಿಂದ ವರ್ತಿಸುತ್ತಾರೆ, ಅಪವಾದ ಹೊರಿಸುತ್ತಾರೆ, ನಿಮ್ಮ ಹೆಸರು ಕೆಡಿಸಲು ಪ್ರಯತ್ನಿಸುತ್ತಾರೆಂದಾದರೆ ನೀವೂ ಹಾಗೆ ಮಾಡುವುದು ಸರಿಯಲ್ಲ, ಅದರಿಂದ ನಿಮಗೂ ಅವರಿಗೂ ಏನೂ ವ್ಯತ್ಯಾಸವಿರಲಾರದು. ನೈತಿಕವಾಗಿ ನಿಮ್ಮ ವರ್ತನೆಯು ವಿರೋಧಿಗಳ ವರ್ತನೆಗಿಂತ ಉನ್ನತವಾಗಿರಬೇಕು. 'ಕೆಡುಕನ್ನು ಒಳಿತಿನಿಂದ ದೂರೀಕರಿಸಿರಿ' ಎಂದರೆ ಇದೇ. ವಿರೋಧಿಗಳ ತಪ್ಪು ವರ್ತನೆ ಮತ್ತು ಸುಳ್ಳು ಮಾತನ್ನು ನಿರಾಕರಿಸುವ ಮತ್ತು ಅದಕ್ಕೆ ಉತ್ತರಿಸುವ ಹಕ್ಕು ನಿಮಗಿದೆ. ಆದರೆ ಅದಕ್ಕೆ ನೀವು ಅನುಸರಿಸುವ ವಿಧಾನವು ಉತ್ತಮವೂ ಸಭ್ಯವೂ ಆಗಿದ್ದರೆ, ವೈರಿಗಳ ಮನಸ್ಸು ಒಳಗಿನಿಂದ ಚುಚ್ಚುತ್ತದೆ. ಅವರು ನಿಮ್ಮ ಮೇಲ್ಮೆಯನ್ನು ಒಪ್ಪಿಕೊಳ್ಳುವರು. ಅದರ ಸತ್ಪರಿಣಾಮ ಬಹುಬೇಗನೆ ಗೋಚರಿಸುವುದು. 'ನಿಮ್ಮೊಂದಿಗೆ ವೈರವಿದ್ದವನು ನಿಮ್ಮ ಆಪ್ತಮಿತ್ರನಾಗಿ ಮಾರ್ಪಡುವುದನ್ನು ನೀವು ನೋಡುವಿರಿ.'

ಅಬ್ದುಲ್ಲಾ ಬಿನ್ ಅಬ್ಬಾಸ್ ಹೇಳುತ್ತಾರೆ- ವಿರೋಧಿಗಳಿಗೆ ಉತ್ತರಿಸುವುದೆಂದರೆ, ಕೋಪ ಬಂದಾಗ ಉದ್ರೇಕಗೊಳ್ಳದೆ ಸಹನೆ ವಹಿಸುವುದು. ಅತಿರೇಕವೆಸಗಿದರೆ ಕ್ಷಮಿಸಿ ಬಿಡುವುದು. ವಿಶ್ವಾಸಿಗಳು ಈ ಮಾರ್ಗವನ್ನು ಕೈ ಗೊಂಡರೆ ಅಲ್ಲಾಹನು ಅವರನ್ನು ರಕ್ಷಿಸುವನು. ಆಗ ಅವರ ವೈರಿಗಳು ಆಪ್ತಮಿತ್ರರಾಗಿ ಬಿಡುವರು. ಅವರಿಗೆ ಶರಣಾಗುವರು. (ಬುಖಾರಿ)

ಇಬ್ನು ಅಬ್ಬಾಸ್‌ರ ಪ್ರಸ್ತುತ ಹೇಳಿಕೆಯು ಇಂದಿನ ಪರಿಸ್ಥಿತಿಯಲ್ಲಿ ದಾರಿದೀಪವಾಗಿದೆ. ಉದ್ರೇಕಿಸಲು ಪ್ರಯತ್ನಿಸುವಾಗ ಕೆರಳದಿರುವುದು, ದಬ್ಬಾಳಿಕೆ ಮತ್ತು ಅತಿರೇಕಕ್ಕೆ ಕ್ಷಮೆಯ ಉತ್ತರ ನೀಡುವುದು ಯಶಸ್ಸಿನ ಕೀಲಿಗೈಯಾಗಿದೆ. ಚಿಕ್ಕ-ಪುಟ್ಟ ವಿಷಯಗಳಿಗೆ ಕೋಪಗೊಳ್ಳುವುದು, ಅಸಹನೆ ತೋರುವುದು ಸೋಲಿನ ಲಕ್ಷಣವಾಗಿದೆ.

ಅನಂತರ, ''ಇದು ಸಹನಶೀಲರಿಗಲ್ಲದೆ ಲಭಿಸುವುದಿಲ್ಲ ಮತ್ತು ಇದು ಸೌಭಾಗ್ಯ ಶೀಲರಿಗಲ್ಲದೆ ಲಭಿಸುವುದಿಲ್ಲ'' ಎನ್ನಲಾಗಿದೆ. ಅಂದರೆ ಅಲ್ಲಾಹನು ಸಹನಶಕ್ತಿಯನ್ನು ನೀಡಿದವರು, ತಮ್ಮ ನಿಲುವಿಗೆ ಬಂಡೆಯಂತೆ ಅಂಟಿಕೊಂಡಿರುವವರು ಮತ್ತು ತಮ್ಮ ಧ್ಯೇಯೋದ್ದೇಶಗಳಿಂದ ಕಿಂಚಿತ್ತೂ ಸರಿಯದವರು ಮಾತ್ರ ಇಂತಹ ಉನ್ನತ ಚಾರಿತ್ರ್ಯ ಮತ್ತು ಸಭ್ಯ ವರ್ತನೆಯನ್ನು ಪ್ರದರ್ಶಿಸಬಲ್ಲರು. ಗುರಿಯತ್ತ ದೃಷ್ಟಿ ನೆಟ್ಟಿರುವವರು ಮಾರ್ಗದ ಕಸಕಡ್ಡಿಗಳನ್ನು ಲೆಕ್ಕಿಸುವುದಿಲ್ಲ, ಕಲ್ಲು ಮುಳ್ಳುಗಳು ಅವರನ್ನು ಧೈರ್ಯಗೆಡಿಸುವುದಿಲ್ಲ, ಅಡೆ-ತಡೆಗಳ ಹೊರತಾಗಿಯೂ ಅವರು ತಮ್ಮ ಪ್ರಯಾಣವನ್ನು ನಿರಾತಂಕವಾಗಿ ಮುಂದುವರಿಸುತ್ತಾರೆ. ಆದರೆ ಇದು ಧೈರ್ಯ-ಸ್ಥೈರ್ಯ ಮತ್ತು ಸೌಭಾಗ್ಯಶೀಲರಿಗೆ ಮಾತ್ರ ದೊರೆಯುತ್ತದೆ.

ಕೊನೆಯದಾಗಿ, 'ಶೈತಾನನ ಕಡೆಯಿಂದ ಏನಾದರೂ ದುಷ್ಪ್ರೇರಣೆಯುಂಟಾದರೆ ಅಲ್ಲಾಹನ ಅಭಯ ಯಾಚಿಸಿರಿ. ಅವನು ಸರ್ವವೀಕ್ಷಕನೂ ಸರ್ವಜ್ಞನೂ ಆಗಿದ್ದಾನೆ' ಎಂದು ಆದೇಶಿಸಲಾಗಿದೆ. ಕೆಲವೊಮ್ಮೆ ಎಲ್ಲ ಪ್ರಯತ್ನಗಳ ಹೊರತಾಗಿಯೂ ಶೈತಾನನು ನಿಮಗೆ ಉಪಟಳ ನೀಡುತ್ತಾನೆಂದು ಎಚ್ಚರಿಸಲಾಗಿದೆ. ಈ ರೀತಿ ನಿಮ್ಮನ್ನು ವಿರೋಧಿಸುತ್ತಿರುವಾಗ

ಮೂಕರಂತೆ ನೀವು ಬಾಯಿ ಮುಚ್ಚಿಕೊಳ್ಳುತ್ತಿದ್ದೀರಿ, ಇಷ್ಟೆಲ್ಲ ನಿಮ್ಮನ್ನು ಕೆರಳಿಸಿದರೂ ನೀವು ಮೌನ ವಹಿಸುತ್ತಿದ್ದೀರಿ. ಥಟ್ಟನೆ ಉತ್ತರಿಸುವುದಿಲ್ಲವೇಕೆ? ಇಷ್ಟೊಂದು ಹೇಡಿತನ ಮತ್ತು ಕೀಳರಿಮೆಯೇಕೆ ಎಂದು ಮುಂತಾಗಿ ಅವನು ನಿಮ್ಮನ್ನು ಉದ್ರೇಕಿಸಬಹುದು. ಇಂತಹ ಸನ್ನಿವೇಶದಲ್ಲಿ ನಿಮ್ಮ ಪ್ರತಿಕ್ರಿಯೆ ವ್ಯತಿರಿಕ್ತವಾಗಿರಬಹುದು. ಆಗ ನೀವು, ಶೈತಾನನು ನನ್ನನ್ನು ನೈತಿಕ ಪಾತಾಳಕ್ಕೆ ತಳ್ಳುತ್ತಿದ್ದಾನೆಂದು ಭಾವಿಸಿ ನಿಮ್ಮನ್ನು ರಕ್ಷಿಸುವಂತೆ ಪ್ರಾರ್ಥಿಸಬೇಕು. ಅಲ್ಲಾಹನು ಪ್ರಾರ್ಥಿಸುವವನ ಮೊರೆಯನ್ನು ಖಂಡಿತ ಕೇಳುತ್ತಾನೆ. ಅವನು ಪ್ರತಿಯೊಬ್ಬನ ಮನದಿಂಗಿತವನ್ನು ಬಲ್ಲವನಾಗಿದ್ದಾನೆ.

ಅಹಂಕಾರ ಪಡಬಾರದು

ಅಹಂಕಾರವು ಒಂದು ನೈತಿಕ ರೋಗವಾಗಿದೆ. ಅದು ಸಂಬಂಧಗಳನ್ನು ಸ್ತಿಮಿತದಲ್ಲಿರಲು ಬಿಡುವುದಿಲ್ಲ, ಉನ್ನತಿ ಮತ್ತು ಅವನತಿಯ ಭಾವನೆಗಳನ್ನು ಪ್ರಚೋದಿಸುತ್ತದೆ. ಮನುಷ್ಯ ತನ್ನನ್ನು ತಾನೇ ದೊಡ್ಡವನು, ಇತರರು ನೀಚರು ಎಂದು ಭಾವಿಸಿದಾಗ ಅವನು ಅವರೊಂದಿಗೆ ತಿರಸ್ಕಾರದಿಂದ ವರ್ತಿಸುವನು. ಅವರೂ ಸಮಾನ ಹಕ್ಕುಳ್ಳವರೆಂದು ಪರಿಗಣಿಸುವುದಿಲ್ಲ, ಅವರ ಹಕ್ಕುಗಳನ್ನು ದಮನಿಸಲು ಅವನು ಹೇಸುವುದಿಲ್ಲ, ಅಹಂಕಾರದ ರೋಗ ಒಬ್ಬನಿಗೆ ತಗಲಿತೆಂದರೆ ಜನರೊಂದಿಗೆ ಅವನ ವರ್ತನೆಯು ತಿರಸ್ಕಾರ ಭಾವದೊಂದಿಗಿರುವುದು. ಅವರನ್ನು ತನಗೆ ಸಮಾನರೆಂದು ಅವನು ಒಪ್ಪುವುದಿಲ್ಲ, ಆದರೆ ಒಂದು ಸಮೂಹವು ಈ ರೋಗಕ್ಕೆ ತುತ್ತಾದರೆ ಇತರ ಸಮೂಹಗಳನ್ನು ನೀಚರೆಂದು ಭಾವಿಸುತ್ತದೆ. ಅವರಿಗೆ ಗೌರವಾದರ ನೀಡುವುದಿಲ್ಲ, ಅವರು ಈ ಕೂಟದ ದಬ್ಬಾಳಿಕೆಗೆ ಗುರಿಯಾಗುತ್ತಾರೆ.

ಅಹಂಕಾರಕ್ಕೆ ಅನೇಕ ಕಾರಣಗಳಿವೆ. ಅಧಿಕ ಸಂಪತ್ತು, ವಿದ್ಯಾಸಂಪನ್ನತೆ, ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನ, ತನ್ನ ಸಂಸ್ಕೃತಿ ಮತ್ತು ನಾಗರಿಕತೆಯು ಇತರರಿಗಿಂತ ಶ್ರೇಷ್ಠವೆಂಬ ಜಂಭ, ತನ್ನ ಇತಿಹಾಸ ಮತ್ತು ಪರಂಪರೆಯೇ ಮೇಲೆಂಬ ಭಾವನೆ ಇತ್ಯಾದಿ ಮನುಷ್ಯನಲ್ಲಿ ದುರಹಂಕಾರವನ್ನು ಹುಟ್ಟಿಸುತ್ತದೆ. ಇಸ್ಲಾಮ್ ಇದನ್ನು ಕಟುವಾಗಿ ನಿಷೇಧಿಸುತ್ತದೆ. ಅದು ಪೈಶಾಚಿಕ ಭಾವನೆಯೆನ್ನುತ್ತದೆ. ಲುಕ್ಮಾನ್‌ರು ತನ್ನ ಮಗನಿಗೆ ಮಾಡಿದ ಉಪದೇಶಗಳ ಪೈಕಿ ಒಂದು ಹೀಗಿತ್ತು.

وَلَا تُصَعِّرْ خَدَّكَ لِلنَّاسِ وَلَا تَمْشِ فِي الْأَرْضِ مَرَحًا ۖ إِنَّ اللَّهَ لَا يُحِبُّ كُلَّ مُخْتَالٍ فَخُورٍ ﴿١٨﴾

''ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ, ದುರಭಿಮಾನ ಹಾಗೂ ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ.'' **(ಪವಿತ್ರ ಕುರ್‌ಆನ್, 31: 18)**

ಇದರಲ್ಲಿ, ನೀನೇ ನಿನ್ನನ್ನು ದೊಡ್ಡವನೆಂದು ಭಾವಿಸಬೇಡ, ಜನರಿಗೆ ಮುಖ ತಿರುಗಿಸಿ ನಡೆಯಬಾರದು, ಇದು ಅಹಂಕಾರದ ಲಕ್ಷಣವಾಗಿದೆ. ಸಭ್ಯತೆ, ಸಜ್ಜನಿಕೆ ಮತ್ತು ನಗುಮುಖ ದೊಂದಿಗೆ ಜನರೊಂದಿಗೆ ಮಾತನಾಡು. ಯಾರನ್ನೂ ಕೀಳಾಗಿ ಭಾವಿಸಿ ಮಾತಾಡಬೇಡ ಎಂದು

ಆದೇಶಿಸಲಾಗಿದೆ. ಒಂದೇ ಬದಿಗೆ ಕತ್ತು ತಿರುಗಿಸಿ, ಇನ್ನೊಂದು ಬದಿಯನ್ನು ನೋಡಲಾಗದಂತಹ ರೋಗಪೀಡಿತ ಒಂಟೆಯಂತೆ ವರ್ತಿಸಬಾರದೆಂದು ಇದರರ್ಥ.

ಅಹಂಕಾರವು ಮನುಷ್ಯನ ಚಲನವಲನ ಮತ್ತು ವರ್ತನೆಯಿಂದಲೂ ಪ್ರಕಟವಾಗುತ್ತದೆ. ಆದ್ದರಿಂದ ನಿನ್ನ ನಡೆಯಲ್ಲಿ ಅಹಂಕಾರ ತೋರಬೇಡ, ಸಭ್ಯ ಮತ್ತು ಸಜ್ಜನರಂತೆ ನಡೆ ಎಂದು ಹೇಳಲಾಗಿದೆ. ನಿನ್ನ ನಡಿಗೆಯಲ್ಲಿ ನಯ-ವಿನಯವಿರಲಿ. ನಿನ್ನ ನಡೆಯು ನಿನ್ನನ್ನು ನೋಡುವ ಪ್ರತಿಯೊಬ್ಬನಿಗೂ ನೀನೊಬ್ಬ ಸಭ್ಯ ಸಚ್ಚಾರಿತ್ರ್ಯವಂತನೆಂದು ಭಾವಿಸಿ ನಿನ್ನೊಂದಿಗೆ ಮುಕ್ತವಾಗಿ ಮಾತಾಡಬಹುದು. ನೀನವರ ಮಾತು ಕೇಳುವೆ, ನಿಮ್ಮ ದುಃಖ ದುಮ್ಮಾನಗಳಲ್ಲಿ ಅವನು ಭಾಗಿಯಾಗಬಲ್ಲನು ಎಂದು ತೋರುವಂತಿರಬೇಕು. ಇಂತಹವರೊಂದಿಗೆ ಮುಕ್ತವಾಗಿ ಬೆರೆಯಬಹುದು. ಅವನು ಅದರಿಂದ ಸಂತೋಷಗೊಳ್ಳುವನು. ಅಹಂಕಾರದ ನಡೆಯನ್ನು ಹೀಗೆ ತಡೆಯಲಾಗಿದೆ.

وَلَا تَمْشِ فِي الْأَرْضِ مَرَحًا ۖ إِنَّكَ لَن تَخْرِقَ الْأَرْضَ وَلَن تَبْلُغَ الْجِبَالَ طُولًا ﴿٣٧﴾ كُلُّ ذَٰلِكَ كَانَ سَيِّئُهُ عِندَ رَبِّكَ مَكْرُوهًا ﴿٣٨﴾

''ಭೂಮಿಯ ಮೇಲೆ ದರ್ಪದಿಂದ ನಡೆಯಬೇಡಿರಿ. ನೀವು ಭೂಮಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲುಪಲಾರಿರಿ. ಈ ವಿಷಯದಲ್ಲಿ ಪ್ರತಿಯೊಂದು ದೋಷ ಭಾಗವು ನಿಮ್ಮ ಪ್ರಭುವಿನ ಬಳಿ ಅಪ್ರಿಯವಾಗಿರುತ್ತದೆ.'' (ಪವಿತ್ರ ಕುರ್‌ಆನ್, 17: 37-38)

ಮಾನವನ ಸ್ಥಾನವಾದರೂ ಏನು? ಕೇವಲ ಒಂದು ಮಣ್ಣಿನ ಮುದ್ದೆ, ನೀರಗುಳ್ಳೆಯಂತಹ 5-6 ಅಡಿಯ ಈ ಮನುಷ್ಯ ಅಹಂಕಾರ ಪಡುವುದಾದರೂ ಏತಕ್ಕೆ? ಅವನು ಭೂಮಿಯನ್ನು ಒಡ್ಡು ನೆಲವನ್ನು ಸೀಳಬಲ್ಲನೆ ಅಥವಾ ಬೆಟ್ಟದ ತುದಿಗೆ ತಲುಪಬಲ್ಲನೆ? ಹಾಗಿರುವಾಗ ಈ ಅಹಂಕಾರವೇಕೆ? ಅವನು ನಯ-ವಿನಯವನ್ನೇಕೆ ಪ್ರದರ್ಶಿಸುವುದಿಲ್ಲ? ಅದನ್ನೇ ಪ್ರಸ್ತುತ ಸೂಕ್ತದಲ್ಲಿ ಮನವರಿಕೆ ಮಾಡಲಾಗಿದೆ.

ಅನೇಕ ಮಂದಿ ಬಾಯಿಂದಲೂ ಕೊಚ್ಚುತ್ತಾರೆ, ಅವರ ವರ್ತನೆಯಲ್ಲೂ ಅಹಂಕಾರವಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಕೆಲವರು ವಿನಯ ಶೀಲತೆ, ದೈನ್ಯತೆ ಮತ್ತು ತಮ್ಮ ದೌರ್ಬಲ್ಯಗಳನ್ನು ಹೇಳುತ್ತಲೇ ಇರುತ್ತಾರೆ. ವಾಸ್ತವದಲ್ಲಿ ಅವರು ಪೂರ್ಣವಾಗಿ ಅಹಂಕಾರದಿಂದ ತುಂಬಿರುತ್ತಾರೆಂದು ಅವರ ನಡವಳಿಕೆ ತೋರಿಸುತ್ತದೆ. ಈ ಎರಡೂ ನಡವಳಿಕೆಗಳು ತಪ್ಪು, ಇದರಿಂದಾಗಿ ಅವರಿಗೆ ಅಲ್ಲಾಹನ ದಯೆ-ಕರುಣೆ ಮತ್ತು ಮನುಷ್ಯರ ಪ್ರೀತಿ ಲಭಿಸದು.

❑❑❑